ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀ ನರಹರಿ ರಾಮಕೃಷ್ಣವೇದವ್ಯಾಸಾಯ ನಮಃ।

ಶ್ರೀ ಹೆಚ್. ಸುಬ್ಬರಾಯರಿಂದ ವಿರಚಿತಗೊಂಡಿರುವ ಸಾಂಬ ಗಳಹಸ್ತಿಕಾ ಬರೆಯುವುದಕ್ಕೆ ನಿರ್ವಿಘ್ನಮಸ್ತು.

ಶ್ರೀಗುರುಭ್ಯೋನಮಃ ಹರಿಃ ಓಂ॥

ಶ್ರೀಮಧ್ವಾಂತರ್ಯಾಮಿನ್ ಶ್ರೀನೃಸಿಂಹೋಽಖಿಲಾಜ್ಞಾನ ಮತಧ್ವಾಂತ ದಿವಾಕರಃ ।

ಜಯತ್ಯಮಿತ ಸಜ್ಞಾನ ಸುಖಶಕ್ತಿ ಪಯೋನಿಧಿಃ ॥

## FORWARD.

This book is written by the author with a view to clear the atmosphere of philosophical discussions from the rubbish of petty disputes, mean references to concocted legendary quotations and the use of hideously vulgur language vomitting forth some of the basest beastly passions in man. It expresses, here and there, some tinges of passion against the author of Chapetika and a few Shastries who breed communal ill-feeling by turning an intellectual conflict into a sectarian war and kill philosophical discussion by violating the most ordinary laws of human courtsey in the writing of books and in the publishing of pamphlets. The book is, besides, unambiguous in one respect. It shows the utter failures of Advaita as an explanation of the problems of life and experience. The Advaita philosophy is a product of later times, an original philosophical feat of Gowdapada and his immortal pupil, the great Sankara. It is hidden Buddhism itself. On the principles of Advaita a negation of ethical life and utter pessimism, if not scepticism is an inevitable conclusion. Indeed, Sankara's system is a big philosophical blunder.

Of course, the Upnishads frequently praise an Advaita which is the essence of all things, the indwelling spirit of a real universe, the source of all joy and happiness. But an Advaita which is like a lion's den, which swallows all the differences, treats the multiplicity of the world as mere illusion, and leaves no room for Eschatology, cosmology, Psychology and Ethics is against the spirit of Upanishads and the Sutras. But yet, Sankara's philosophy has a unique greatness and subtlety, which can never be felt if it is presented by such people as the author of the Samba Bhanjana Chapetika whose book is more or less of a very defamatory nature. It is hoped that in future learned Smartha Sanskrit Pundits will take up this important work into their hands and offer to the public a critical exposition of Advaita doctrine based on recognised authorities like the Vedas, the BrahmaSutras and the Gita in a homely and artistic native style. The absence of philosophical discussion is philosophical suicide. But such an inglorious combat of the kind that is being waged between the author of the Samba Bhanjana and the author of Chapetika is a blur on the national morality.

Perhaps, the noblest but slightly modified modern exposition of the Advaita philosphy is by Prof. Radhakrishnan, one of the greatest admirers of Sankara, and scholar parexcellence in comparative philosophy. If the Sankara's philosophy were to be accepted in the form in which it is presented by him, then, perhaps the Advaita philosphy would be seated as on a pedastal of admant in many particulars. But the Advaitins are not willing to yeild by an inch. The Nirvishesha brahma vada is made to run into the last absurdities of Negativism, and the Mayavada into the very despair of illusionism; and what is more surprising is, that some of the authors of the Advaita philosophy and nearly all the Smartha Pundits who are the repositories of the Advaita learning would rather welcome all the fallacies of logic such as Atmashraya, Anvastha,etc. , rather than modify their views in answer to the demands of reasoning. Change their position they will not, and the result is, the fire of criticism will burn into ashes a philosphy so obstinately deaf to all the entreaties of reasoning and even prides on welcoming the last depths of unreason itself. It is the fool's paradise and the wise man had better laugh in his sleeves. The present work is such an attempt at gently mockery, with the addition of a clear explanation of the ludicrousness of a system which starts with the determination to explain the facts of life and ends by denying it. The author will feel his purpose fulfilled when a highly cultured and intellectual assembly of the adherence of the Advaita school gathers together with sincere intention of evaluating the real worth of their philosphy which has remained with them as an unrecognised heirloom all through the ages from the time of Sankara. In reality, the opportunity for such dispassionate philosophical discussion in a universally cherished gift of God and a special boon to all lovers of philosophy.

May it happen one day. 'ತಮೇವಚಾದ್ಯಂ ಪುರುಷಂ ಪ್ರಪದ್ಯೇ'.

The printing of this work was delayed for some time owing to many causes, particularly my absence from town during Dasara holidays. I therefore divided the work into two parts and submitted the major portion for print to Sri.K.V.V. press. My best thanks are due to MR. M. Venkatakrishnaiah. G.O.M. of Mysore for expediting the printing business with interest and care.

H. SUBBA RAO.

## ಉಪೋದ್ಘಾತವು.

ಗಾಢಾಂಧಕಾರದಲ್ಲಿ ನಿಶ್ಶಬ್ದದಿಂದ ಸ್ತಬ್ಧವಾಗಿದ್ದ ತತ್ವವಿಚಾರಾರಣ್ಯವನ್ನು 'ದ್ವೈತಸಿದ್ಧಾಂತ ವಿಚಾರ'ವೆಂಬ ಗ್ರಂಥರೂಪವಾದ ಪಂಚಾನನವು ಥಟ್ಟನೆ ಪ್ರವೇಶಿಸಿ ತನ್ನ ಗರ್ಜನೆಯಿಂದ ವಿಚಾರಶೀಲರ ಮನಸ್ಸನ್ನು ಕೆದರಿಸಿ, ಯಾವತ್ತೂ ವನವನ್ನು ತನ್ನ ಪ್ರತಿಭೆಯಿಂದಲೇ ಅಲ್ಲೋಲಕಲ್ಲೋಲವಾಗುವಂತೆ ಮಾಡಿರುವುದು. ಮೃಗರಾಜನ ಆರ್ಭಟದಿಂದ ಸಮಗ್ರವನವು ನಿಮಿಷಮಾತ್ರದಲ್ಲಿ ದಿಕ್ಕುಕೆಟ್ಟು ಚೆದರಿ

ಹೋಯಿತು. ತಮ್ಮ ಪೊಟರೆಗಳಲ್ಲಿ ತಮ್ಮಷ್ಟಕ್ಕೆ ತಾವು ಸುಖದಿಂದ ಸುಪ್ತರಾಗಿದ್ದ ಕ್ಷುದ್ರ ಮೃಗಗಳಿಗೆ ಬಹಳ ಸಂಕಟವು ಬಂದು, ವನರಾಜನ ಮುಂದೆ ಬರಲಾರದೇ, ಹಿಂದೆ ಹಿಂದೆಯೇ ನಾನಾ ದೂರುಗಳನ್ನು ಕೆರೆಯ ಕಟ್ಟೆಯ ಮೇಲೆ, ಬಿದುರಿನ ಪೊದೆಗಳಲ್ಲಿ, ಸ್ತಂಭದ ಸಂದುಗಳಲ್ಲಿ ನಿರಂಕುಶವಾಗಿ ವದರುವುದಕ್ಕಾರಂಭಿಸಿದುವು. ಇದರಿಂದ ವನಸ್ಥ ಖಗಸಮೂಹಗಳಿಗೂ ಸಹ ಸಿಂಹರಾಜನು ಏನೋ ಮಹಾಪರಾಧವನ್ನು ಮಾಡಿರುವನೆಂಬ ಭ್ರಾಂತಿಯು ಬಂದಿತು. ಆದುದರಿಂದ ವನಸ್ಥ ಮೃಗಪಕ್ಷಿಗಳೆಲ್ಲವೂ ಸೇರಿ ಈ ರೀತಿ ನಿದ್ರಾಭಂಗಮಾಡಿದ ರಾಜದರ್ಶನಕ್ಕೇ ನಾವು ಹೋಗ ಕೂಡದು ನಮ್ಮಲ್ಲಿ ಯಾರಾದರೂ ದ್ರೋಹಮಾಡಿ ಹೋದವರಿಗೆ ಬಹಿಷ್ಕಾರ ಹಾಕಬೇಕು, ಸಾಕ್ಷಾತ್ ವೆಂಕಟಾಚಲಪತಿಯೇ ಹಾಗೆ ಮಾಡಿದರೂ ಸಹ ಅವನನ್ನು ಬೆಟ್ಟದಿಂದ ಕೆಳಕ್ಕೆ ಉರುಳಿಸಿ ಬಿಡಬೇಕು; ಕಿಂಚ ಈ ನಮ್ಮ ದುರವಸ್ಥೆಯನ್ನು ಏಕೋನ- ವಿಂಶತಿ ಪಾಳಯನಾಯಕರಿಗೂ ತಿಳಿಸಿ ''ಯೇನಕೇನಾಪ್ಯುಪಾಯೇನ'' ಶತ್ರುನಿರಸನವನ್ನು ಮಾಡಿ ಸ್ವಸ್ಥಾನವಾಸವನ್ನು ಪುನಃ ಪಡೆಯಬೇಕು ಎಂದು ನಿರ್ಧರಿಸಿದವು. ಇದು ಪ್ರಕೃತದ ಫಲಿತವು.

ಕಂಠೀರವ ರಾಜನಾದ ಸಿಂಹವೇನೋ ಯಾರೋ ಪಂಡಿತರತ್ನರು ವ್ಯಾಸಸಾಮ್ರಾಜ್ಯ ದ್ರೋಹವನ್ನು ಮಾಡಿದ ಸಪ್ಪಳವನ್ನು ಕೇಳಿ ಜಗತ್ಪೂಜ್ಯಸಾರ್ವಭೌಮನ ಆಜ್ಞೆಯಿಂದ ವನಮಧ್ಯಪ್ರವೇಶಕ್ಕೆ ಹಾರಿಬಂದು ಕ್ಷುಲ್ಲಕರ ಗರ್ಭನಿರ್ಭೇದ ವಾಗುವಂತೆ ನಾಲ್ಕೈದು ಸಿಡಿಲು ಗರ್ಜನೆಗಳನ್ನು ಮಾಡಿತು. ಪ್ರಜೆಗಳಿಗೆ ಶಾಂತಿಭಂಗವನ್ನು ಮಾಡುವುದು ಅದರ ವಿವಕ್ಷಿತ ವ್ಯಾಪಾರವಾಗಿರಲಿಲ್ಲ, ಆದರೆ ಅದೂ ಅರ್ಥಾತ್ ಆಯಿತು. ಅದರಿಂದ ಅದಕ್ಕೆ ಪಶ್ಚಾತ್ತಾಪವೇನೂ ಇಲ್ಲ. ಮಹಾ ಸಾಮ್ರಾಜ್ಯವು ಮುರಿದು ಬೀಳುವಾಗ ಹೋಗುವ ಪಥಿಕರಿಗೆ ತೊಂದರೆಯಾಗುವುದೆಂದು ದಂಡು ಹೂಡುವುದನ್ನು ರಾಜನು ನಿಲ್ಲಿಸುವನೇ?

ನಿತ್ಯ ಸೂರ್ಯೋದಯದಿಂದ ಪ್ರಕಾಶಿತವಾದ ತತ್ವವಿಚಾರಾರಣ್ಯದಲ್ಲಿ ಅಂಧಕಾರವು ಆವೃತವಾದುದು ಮೊದಲನೆಯ ದುರ್ದೈವವು. ಅದರಲ್ಲೂ ನಿತ್ಯ ಜಾಗರೂಕರಾಗಿರಬೇಕಾದ ಮೃಗಗಳು ಕಶ್ಮಲ ಭೋಜನವನ್ನು ಮಾಡಿ ಮದದಿಂದ ನಿದ್ರೆಮಾಡಿ ದುದು ಎರಡನೆಯ ದುರ್ದೈವವು. ಮರಣತುಲ್ಯವಾದ ಅಂಥಾ ದುಃಸ್ಥಿತಿಯಿಂದ ಎಚ್ಚರಗೊಳಿಸಿದ ಮೃಗೇಂದ್ರನನ್ನೇ ಕೃತಘ್ನತೆಯಿಂದ ದೂರ ಓಡಿಹೋಗಿ ಮರೆಯಲ್ಲಿ ಅವಾಚ್ಯವಾಣಿಯಿಂದ ದೂಷಣೆ ಮಾಡಿದುದು ಮೂರನೆಯ ದುರದೃಷ್ಟವು. ಪರಿಣಾಮದಲ್ಲಿ ಏನೂ ತಿಳಿಯದ ಮಂಕುಜನರುಗಳಿಗೆ ಮೃಗರಾಜನೇನೋ ಮಹಾಪರಾಧ ವನ್ನು ಮಾಡಿರಬೇಕು; ಹಾಗಿಲ್ಲದಿದ್ದರೆ ಇಷ್ಟು ಜನರು ವಿರೋಧಮಾಡುವುದಕ್ಕೆ ಕಾರಣವೇನು? ಎಂಬ ವಿಪರೀತ ಜ್ಞಾನವು ಅಂಕುರಿಸಿತು.

ಇಂಥಾ ಶೋಚನೀಯ ಸ್ಥಿತಿಗೆ ಈಗ ಬಂದುದಾಯಿತು. 'ದ್ವೈತಸಿದ್ಧಾಂತವಿಚಾರ'ವೆಂಬ ಶಾಸ್ತ್ರಗ್ರಂಥವು ಶಂಕರಾಚಾರ್ಯರ ಮಾತುಗಳಿಂದಲೇ ಅದ್ವೈತವು ವೇದವಿರುದ್ಧವೆಂದೂ, ಶಂಕರಾಚಾರ್ಯರ ವಾಕ್ಯಗಳಿಂದಲೇ ಅದ್ವೈತವು ಬ್ರಹ್ಮಸೂತ್ರಗಳಿಗೆ ವಿರೋಧಿ ಯೆಂದೂ, ಗೌಡಪಾದ ಶಂಕರಾಚಾರ್ಯರು ಒಪ್ಪಿದ ನ್ಯಾಯಗಳ ರೀತಿಯಿಂದಲೇ ಅದ್ವೈತವು ಪ್ರಚ್ಛನ್ನ ಬೌದ್ಧಮತ ವೆಂತಲೂ, ಶಂಕರಾಚಾರ್ಯರಿಂದ ಅಂಗೀಕೃತವಾದ ವಾಕ್ಯಾರ್ಥ ರೀತಿಯಿಂದಲೇ ವಿಚಾರ ಮಾಡಿದರೆ ಅದ್ವೈತವು ಪರಮ ನಾಸ್ತಿಕ ಮತವಾಗುವುದೆಂದೂ, ಅದ್ವೈತವು ಗೀತೆಯಲ್ಲಿ ಶ್ರೀಕೃಷ್ಣನಿಂದಲೇ ಬಹು ಅನರ್ಥ ಪ್ರದರ್ಶನ ಪೂರ್ವಕವಾಗಿ ತಿರಸ್ಕೃತವಾಗಿರುವು ದರಿಂದ ಸಂಶಯದೆಶೆಯಲ್ಲಿರುವವರೂ ಸಹ ದ್ವೈತೋಪಾಸನೆಯಲ್ಲಿ ತತ್ಪರರಾಗಬೇಕೆಂದೂ ಕ್ರಮವಾಗಿ ವಚನೋದಾಹರಣ ಪೂರ್ವಕವಾಗಿ ಉಪದೇಶಮಾಡಿ ಉಪರಮ ಹೊಂದಿತು.

ಈ ಐದು ವಿಷಯಗಳನ್ನು ವಿಮರ್ಶೆಮಾಡಿ, ದೋಷಗಳು ಲಗ್ನವಾದರೆ, ಅದ್ವೈತೋಪಾಸನೆಯನ್ನು ಮದ್ಯಭಾಂಡವನ್ನು ಪರಿತ್ಯಾಗ ಮಾಡುವ ವೈದಿಕನಂತೆ ಪರಿತ್ಯಜಿಸಿ, ಪ್ರಾಮಾಣಿಕವಾದ ಉಪಾಸನೆಯಲ್ಲಿ ಆಸಕ್ತವಾಗಬೇಕಾದುದು ಪ್ರಾಜ್ಞನಧರ್ಮವು. ದೋಷಗಳು ಲಗ್ನವಾಗದಿದ್ದರೆ, ಗ್ರಂಥಕರ್ತನ ಮೌಢ್ಯವನ್ನು, ಯಥಾಕ್ರಮವಾಗಿ ಅವನಿಂದ ಉದಾಹೃತವಾದ ಪ್ರಮಾಣವಚನ ಗಳಿಗೆ ಸ್ವಮತಾನುಗುಣವಾಗಿ ಗತಿ ಕಲ್ಪಿಸಿ ತೋರಿಸುವುದರ ಮೂಲಕ ಪ್ರದರ್ಶನ ಮಾಡುವುದು ಪ್ರಾಜ್ಞನಕಾರ್ಯವು. ಇವೆರಡು ಮಾರ್ಗವನ್ನೂ ಪರಿತ್ಯಜಿಸಿ ಹಿಂದೆ ಜಟ್ಟಪ್ಪನು ಕೆಂಚಯ್ಯನನ್ನು ಗರಡಿಯಲ್ಲಿ ಕೆಡವಿರುತ್ತಾನೆ. ಆದುದರಿಂದ ಅದ್ವೈತವು ದೊಡ್ಡದು. ಲಿಂಗ ಪುರಾಣದಲ್ಲಿ ಅದ್ವೈತವು ಶಶವಿಷಾಣದ ಕೊಂಬಿನಿಂದ ಬಂದಿರುತ್ತದೆ ಎಂದು ಹೇಳಿರುವುದರಿಂದ ಅದ್ವೈತವು ದೊಡ್ಡದು. ಅನೇಕ ಜನರು ಅದ್ವೈತವನ್ನು ವೇದಾಂತಿಗಳು ಅಜ್ಞರು ಎಂದು ಬೈಯುತ್ತಾರೆ. ಆದುದರಿಂದ ಅದ್ವೈತವು ಅನಾದಿ ತತ್ವವು. ತಾಮಸ ಕೂರ್ಮ ಮತ್ತು ಲಿಂಗಪುರಾಣಗಳಲ್ಲಿ ತಿಮ್ಮಣ್ಣಭಟ್ಟನು ಅದ್ವೈತವನ್ನು ಪ್ರಶಂಸೆ ಮಾಡಿರುತ್ತಾನೆ. ಆದುದರಿಂದ ಅದ್ವೈತವು ದೊಡ್ಡದು. ಮಧ್ವಾಚಾರ್ಯರು ಸ್ಮಾರ್ತದ್ರೋಹಿಗಳು. ಆದುದರಿಂದ ಅದ್ವೈತವು ವೇದಸಮ್ಮತವು. ಶಾಂಕರಭಾಷ್ಯ, ಕಲ್ಪತರು, ಪರಿಮಳ, ಅದ್ವೈತಸಿದ್ಧಿ ಮುಂತಾದ ಗ್ರಂಥಗಳು ಬರೆದು ಆಗಿಯೇ

ಹೋಗಿರುವುವು, ಆದುದರಿಂದ ಅದ್ವೈತವು ವೇದಸಮ್ಮತವು. ಕಾಳಿದಾಸನು ವೈಶ್ಯೆಯಮನೆಯಲ್ಲಿ ಅದ್ವೈತಿಯ ಹೆಸರನ್ನು ಹಿಡಿದು ಕೂಗಿದ್ದಾನೆ. ಆದುದರಿಂದ ಅದ್ವೈತವು ವೇದ ಸಮ್ಮತವು. ಮಾಧ್ವರು ಭಿಕ್ಷೆ ಬೇಡುವ ದಾಸಯ್ಯಗಳು, ಆದುದರಿಂದ ಅದ್ವೈತವು ವೇದಸಮ್ಮತವು. ಮಾಧ್ವರು ಅಂಗಾರ ಮುಖರು, ಆದುದರಿಂದ ಅದ್ವೈತವು ವೇದಸಮ್ಮತವು. ಒಂದು ಮತವೆಂದರೆ ಶ್ರುತಿಗಳು ಇದ್ದೇ ಇರಬೇಕು. ಅದ್ವೈತವೂ ಅಂಥಾ ಪ್ರಬಲಮತವಾದುದರಿಂದಲೇ ಸಕಲ ಶೃತಿಸ್ಮೃತಿ ಇತಿಹಾಸ ಪುರಾಣಗಳೆಲ್ಲವೂ ಅದ್ವೈತಕ್ಕೆ ಅನುಕೂಲವಾಗಿರುವುವು.

ಮತ್ತು ಅದ್ವೈತಿಗಳು ಷೋಡಶಸಂಸ್ಕಾರವುಳ್ಳವರು, ಆದುದರಿಂದ ಅದ್ವೈತತತ್ವವು ಪ್ರಚ್ಛನ್ನ ಬೌದ್ಧಮತವಲ್ಲ; ಅದ್ವೈತಕ್ಕೂ ಬೌದ್ಧಮತಕ್ಕೂ ಮೇರು ಸರ್ಷಪದಂತೆ ವ್ಯತ್ಯಾಸವಿರುವುದು. ಆದುದರಿಂದ ಹೀಗೆ (ದೃಷ್ಟಾಂತವನ್ನು ಉದಾಹರಿಸುದುದರಿಂದ) ಅದ್ವೈತತತ್ವವು ಪ್ರಚ್ಛನ್ನಬೌದ್ಧಮತವಲ್ಲ, ಅದ್ವೈತವನ್ನು ದೂಷಿಸುವವರು ತುಚ್ಛರು, ಮೂಢರು, ವಜ್ರಶುಂಠರು, ಚಂಡಾಲರು, ತುರುಷ್ಕರು, ಕ್ರಿಸ್ತರು, ಇತ್ಯಾದಿ. ಆದುದರಿಂದ ಅದ್ವೈತಮತವು ಪ್ರಚ್ಛನ್ನಬೌದ್ಧಮತವಲ್ಲ.

ಪರಂತು ಅದ್ವೈತವು ಒಂದೇ ತತ್ವವು. ಇದಕ್ಕೆ ಪ್ರತಿಯಾಗಿ ಮಾತಾಡುವುದಕ್ಕೇ ದ್ವೈತಿಗಳಿಗೆ ಹಕ್ಕಿಲ್ಲ. ದ್ವೈತಿಗಳು ಶೈವರ ಸಂಗಡ ಹೋರಾಡುವುದು ಉಚಿತವು. ಅದ್ವೈತಕ್ಕೂ ಅವರಿಗೂ ವಿರೋಧವೇ ಇಲ್ಲ. ಆದುದರಿಂದ ಅದ್ವೈತವು ದೊಡ್ಡದು. ಅದ್ವೈತತತ್ವವು ಸಿದ್ಧವಾಗಿಯೇ ಹೋಗಿದೆ, ಈಗ ದ್ವೈತಿಗಳು ಮಾಡುವುದೇನು? ನಾಯಿ ಬೊಗುಳಿದರೆ ದೇವಲೋಕವು ಹಾಳಾಗು ವುದೇ? ಆದುದರಿಂದ ಅದ್ವೈತವು ದೊಡ್ಡದು. ಅದ್ವೈತವು ಸಮಸ್ತ ಬಣ್ಣಗಳಿಂದ ಸಹಿತವಾದರೂ ಬೆಳ್ಳಗೆ ಕಾಣುವ ಸೂರ್ಯ ರಶ್ಮಿಯಂತೆ ಶುಭ್ರವಾಗಿ ಸರ್ವವನ್ನೂ ಒಳಗೊಂಡಿರುವುದು.[11] ಆದುದರಿಂದ ಅದ್ವೈತವು ವೇದಸಮ್ಮತವು.

ಈ ರೀತಿಯಾದ ಮಲಿನ ವಾಕ್ಯಾರ್ಥಗಳ ಒಂದೆರಡು ಮುನಿಸಿಪಾಲಿಟಿ ಬಂಡಿಗಳು ಹೊರಕ್ಕೆ ಬಂದಿರುವುವು. ಅದ್ವೈತ ಪಂಡಿತರ ಪರಾಕ್ರಮವು ಈ ರೀತಿ ನಿಯೋಜಿತವಾಗಿ ಹೋದುದು ಶೋಚನೀಯವು. ದ್ವೈತಿಗಳಲ್ಲಿ ಯಾರೋ ಒಬ್ಬರು ಸಾಂಬ ಭಂಜನವೆಂಬ ಒಂದು ಗ್ರಂಥವನ್ನು ಬರೆದರು. ಅದ್ವೈತ ಪಂಡಿತರು ತಮ್ಮ ಜ್ಞಾನಮಾರ್ಗದ ಪ್ರಾಮಾಣಿಕತೆಯನ್ನು ಅನುಸರಿಸಿ ನಡೆದಿದ್ದರೆ ತೀಕ್ಷ್ಣಚೂರಿಯಂತೆ ಅಪ್ರತಿಹತವಾದ ಶಾಸ್ತ್ರಾರ್ಥಗಳಿಂದ ಪೂರ್ಣವಾದ 'ದ್ವೈತಸಿದ್ಧಾಂತವಿಚಾರ'ಕ್ಕೆ ಅನುವಾದ ಪೂರ್ವಕವಾಗಿ ಅನುಗುಣವಾದ ರೀತಿಯಲ್ಲಿ ಉತ್ತರವನ್ನು ಬರೆಯಬೇಕಾಗಿತ್ತು. ಅದನ್ನು ಬಿಟ್ಟು ಬೈಗುಳಗಳ ಗ್ರಂಥಗಳನ್ನು ಬರೆದು ಭುಜವನ್ನು ಚಪ್ಪರಿಸುವವರ ವೀರ್ಯವನ್ನು ಕುರಿತು ಎಷ್ಟೆಂದು ಶೋಕಿಸಬೇಕು?

ಇದೆಲ್ಲಾ ಒಂದು ದೊಡ್ಡ ಚರಿತ್ರಾರ್ಹವಾದ ವಿಷಯವೆಂದು ತಿಳಿದು ನಾವು ಪ್ರಕೃತದಲ್ಲಿ ನಿರ್ದೇಶ ಮಾಡಲಿಲ್ಲ. ನಾವು ಈ ವಿಷಯಗಳನ್ನು ಹೊರಗೆ ತೆಗೆದು ಸೂಚಿಸುವುದಕ್ಕೆ ಕಾರಣವನ್ನು ನಿರೂಪಿಸುತ್ತೇವೆ. ಅದ್ವೈತತತ್ವದಲ್ಲಿ ಸ್ವಾಭಾವಿಕವಾದ ಅನೇಕ ಹುಳುಕಗಳಿರುವುವು. ನಿಶ್ಚಯವಾಗಿಯೂ ಅದು ಕೊಳೆತುಹೋಗಿರುವ ಬಾದಾಮಿ ಮಾವಿನಹಣ್ಣಿನಂತೆಯೂ, ಕೆಟ್ಟುಹೋಗಿರುವ ಕಬ್ಬಿನ ಜಲ್ಲೆಯಂತೆಯೂ 'ಸ್ಪೈಕ್' ರೋಗದಿಂದ ಗ್ರಸ್ತವಾಗಿರುವ ಗಂಧದ ಮರದಂತೆಯೂ, ಬೂಜು ಹಿಡಿದ ಹಳೆಯ ಕಟ್ಟಿಗೆಯ ತುಂಡಿನಂತೆಯೂ, ಗೆದ್ದಲು ಹಿಡಿದ ಮಣ್ಣಿನ ನೆಲದಂತೆಯೂ, ಗಜಭುಕ್ತಕಪಿತ್ಥ ಫಲದಂತೆಯೂ ದುಸ್ತರವಾದ ದೋಷದೂಷಿತವಾಗಿ ನಿಸ್ಸಾರವಾಗಿರುವುದು. ಆದರೆ ವಿಚಾರ ಮಾಡಿದಮೇಲಷ್ಟೆ ಇದು ಗೊತ್ತಾಗಬೇಕು! ವಿಚಾರ ಮಾಡುವುದಕ್ಕೆ ಮೊದಲೇ ಹಳ್ಳಿ ಹೆಂಗಸಂತೆ, ಅಥವಾ ಬೀದಿನಾಯಿಗಳಂತೆ ಪರಸ್ಪರ ಬೈಗಳ ಯುದ್ಧವನ್ನು ಪಕ್ರಮಿಸಿದರೆ ತತ್ವನಿರ್ಣಯವು ಆಗುವ ಕ್ರಮವು ಹೇಗೆ?

ಏವಂಚ 'ದ್ವೈತಸಿದ್ಧಾಂತ ವಿಚಾರ'ದಲ್ಲಿ ಶಂಕರಾಚಾರ್ಯರ ಒಪ್ಪಿಗೆಯ ರೀತಿಯಿಂದಲೇ ಅದ್ವೈತಮತಕ್ಕೆ ಸರ್ವಶ್ರುತಿ ಗಳೂ ವಿರುದ್ಧವಾಗಿರುವೆಂಬ ಯಾದಿಯಾಗಲೀ, ಶಂಕರಾಚಾರ್ಯರ ಒಪ್ಪಿಗೆಯ ರೀತಿಯಿಂದಲೇ ಸರ್ವ ಬ್ರಹ್ಮಸೂತ್ರಗಳೂ ಅದ್ವೈತ ಮತಕ್ಕೆ ವಿರುದ್ಧವಾಗಿರುವುದೆಂಬ ಯಾದಿಯಾಗಲೀ, ಗೌಡಪಾದ ಶಂಕರಾಚಾರ್ಯರ ಒಪ್ಪಿಗೆಯಿಂದಲೇ ಅದ್ವೈತಮತವು ಪ್ರಚ್ಛನ್ನ ಬೌದ್ಧಮತವೆಂಬ ಯಾದಿಯಾಗಲೀ, ''ಈಶ್ವರೋಽಹಂ'' ''ಅಸತ್ಯಮಪ್ರತಿಷ್ಠಂತೇ'' ಇತ್ಯಾದಿ ಶ್ರೀಕೃಷ್ಣನ ವಚನಗಳಿಂದಲೇ ಅದ್ವೈತೋಪಾಸನೆಯು ಭಯಂಕರವೆಂದು ಪ್ರಮಿತವಾಗಿರುವ ಸಂಶಯದೆಸೆಯಲ್ಲೂ ಸಹ ದ್ವೈತತತ್ವವನ್ನೇ ಅವಲಂಬಿಸುವುದು ಉಚಿತವೆಂಬ ಉಪಪಾದನೆಗಾಗಲೀ ಉತ್ತರವನ್ನು ಇದುವರೆವಿಗೂ ಯಾರೂ ಕೊಟ್ಟಿಲ್ಲ. ದ್ವೈತಸಿದ್ಧಾಂತ ವಿಚಾರಭಂಜನ, ದ್ವೈತ ಸಿದ್ಧಾಂತ ವಿಚಾರ ದೂಷಣ, ದ್ವೈತಸಿದ್ಧಾಂತ ವಿಚಾರ ದೂಷಣ ಖಂಡನ, ಸಾಂಭಭಂಜನ ಚಪೇಟಪೇಟಿಕೆಯೇ ಮೊದಲಾದ ಗ್ರಂಥಗಳು ಮಾಧ್ವನಿಂದೆಗಳಿಂದ ಪೂರ್ಣವಾದ ಗೊಬ್ಬರದ ಗಾಡಿಗಳೇ ಹೊರತು ಅದ್ವೈತಮತ ಸಾಧಕಗಳಾಗಲೀ ದ್ವೈತಮತದ

ಖಂಡನರೂಪವಾಗಲೀ ಇರುವುದಿಲ್ಲ.

ದ್ವೈತಸಿದ್ಧಾಂತ ವಿಚಾರದಲ್ಲಿ ಪ್ರದರ್ಶಿತವಾದ ಆಕ್ಷೇಪಗಳಿಗೆ ಇವರೆಲ್ಲರೂ ಯಾತಕ್ಕೆ ಸಮಾಧಾನವನ್ನು ಕೊಟ್ಟಿಲ್ಲ? ಪ್ರಾಜ್ಞರಾದ ರಾಧಾಕೃಷ್ಣರೇನೋ ಸ್ಪಷ್ಟವಾದ ಉತ್ತರವನ್ನು ಹೇಳಿರುತ್ತಾರೆ:- ''ಅವರಿಗೆ ಯಾವ ಉತ್ತರವನ್ನೂ ಕೊಡಲು ಶಕ್ಯವಾಗುವುದಿಲ್ಲ''. ನಮ್ಮ ಅಭಿಪ್ರಾಯವೂ ಆದೇ. ಆದರೆ ಡಾಕ್ಟರರಾದ ರಾಧಾಕೃಷ್ಣರಿಗೂ, ತತ್ವಾರ್ಥಿಗಳಾದ ನಮಗೂ ಇಷ್ಟು ಭೇದವು ಇರುವುದು. ರಾಧಾಕೃಷ್ಣರು ಮಾತನಾಡುವಾಗ 'ನಮ್ಮ ಶಂಕರಾಚಾರ್ಯರು ನವರ್ಣಾನವರ್ಣಾಶ್ರಮಾಚಾರಧರ್ಮಾಃ ಇತ್ಯಾದಿ ಬಹುಸ್ಥಳಗಳಲ್ಲಿ ಬಾಹ್ಯಕರ್ಮಗಳನ್ನು ಪರಿತ್ಯಾಗ ಮಾಡಿ ಸರ್ವೈಕ್ಯವನ್ನು ಹೊಂದಬೇಕೆಂದು ಹೇಳಿರುವರು. ಆದುದರಿಂದ ಕೆಲಸಕ್ಕೆ ಬಾರದ ಬಾಹ್ಯ ಭೇದಗಳನ್ನು ಅಂಗೀಕರಿಸುವ ನಾವೆಲ್ಲರೂ (ಅದ್ವೈತಿಗಳು) ಮೂಢರು'' ಎಂದು ಹೇಳುವರು. ಸಭಿಕರೂ ತಲೆತೂಗುವರು. ದ್ವೈತಿಗಳು 'ನಿಮ್ಮ ಶಂಕರಾಚಾರ್ಯರು ಕರ್ಮಾದಿಗಳಿಗೆ ಪ್ರಾಶಸ್ತ್ಯಕೊಡದೇ ಜಗತ್ತು ಮಿಥ್ಯಾ ಎಂದು ಹೇಳಿ ತತ್ವವನ್ನು ಹಾಳುಮಾಡಿ ಬಿಟ್ಟರು. ಇದರಿಂದ ಸರ್ವಸಾಂಕರ್ಯವು ಬಂದು ಹೋಗುವುದು. ಆದುದರಿಂದ ಈ ತತ್ವವನ್ನು ವೈದಿಕರಾದ ನೀವೆಲ್ಲರೂ ಬಿಟ್ಟು ಬಿಡಿ' ಎಂದು ಹೇಳಿದರು. ರಾಧಾಕೃಷ್ಣರು ಮುಂತಾದ ಅನೇಕ ಅದ್ವೈತಿಗಳು ಹೇಳಿದುದೇ ದ್ವೈತಿಗಳು ಹೇಳಿದುದು. ''ನೀವಂದುದೇ ನಾವಂದುದು''. ಆದರೂ ವೈಷ್ಣವರ ಮೇಲೆ ಇಷ್ಟಕ್ಕೇ ಕುಪಿತರಾಗಿ ಅದ್ವೈತಿಗಳು ಚಪೇಟಿಕೆಯನ್ನು ಕೊಡುವುದಕ್ಕೆ ಬರುವರು. ಮತ್ತು ಅವರ ನಡವಳಿಕೆಗಳು ದೇಶಕಾಲ ವರ್ತಮಾನಗಳಿಗೆ ಅನುಚಿತವೂ, ಅಯೋಗ್ಯವೂ, ವಿರುದ್ಧವೂ ಆಗಿರುವುದೆಂದು ತೀರ್ಮಾನ ವನ್ನು ಸಹ ಮಾಡುವರು. ಈ ತೀರ್ಮಾನಗಳ ತಾತ್ಪರ್ಯವೇನೆಂದರೆ, ವ್ರಣವಾಗಿ ಮೈಯನ್ನೇ ತಿನ್ನುತ್ತಿರುವ ನಮ್ಮ ಹುಣ್ಣನ್ನು ಪುನಃ ಯಾತಕ್ಕೆ ನೀವು ತಿವಿದು ಹಿಂಸೆ ಮಾಡುತ್ತೀರಿ? ನಾವು ಈ ತತ್ವವಿಚಾರವ್ಯಸನವನ್ನು ಬಿಟ್ಟು ಸ್ತ್ರ್ಯಾದಿ ಭೋಗಗಳಲ್ಲಿ ಸುಖದಿಂದಿರುವೆವು ಎಂದು ಅರ್ಥವು. ಅಂತೂ ಇದು ಸಿದ್ಧವಾಗಿರುವ ಪ್ರಮೇಯವು. ಅದ್ವೈತಮತವನ್ನು ಶಂಕರಾಚಾರ್ಯರಿಂದ ಪ್ರತಿಪಾದಿತವಾದ ರೀತಿಯಲ್ಲಿ ಅವಲಂಬಿಸಿದವನು ಪ್ರಪಂಚವಿಷಯದಲ್ಲಾಗಲೀ, ಬ್ರಹ್ಮವಿಷಯದಲ್ಲಾಗಲೀ ತತ್ವಬುಭುತ್ಸುವು ಕೇಳತಕ್ಕ ಒಂದು ಪ್ರಶ್ನೆಗೂ ಸಮಂಜಸವಾದ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ದೇಹಬಲದಿಂದ ಅಥವಾ ಗ್ರಾಮ್ಯವಚನಬಲದಿಂದ ಬಲಿಷ್ಠರಾದರೆ ಸಾಂಬಶಾಸ್ತ್ರಿಗಳಂತೆ ನಿಂದಾ ಚಪೇಟಿಕೆಯನ್ನು ಕೊಡಬಹುದು. ನಿಷ್ಪಕ್ಷಪಾತವಾದ ಯಥಾರ್ಥವಾದ ಸಮಾಧಾನವನ್ನು ಕೊಡಲು ಆಗುವುದಿಲ್ಲ.

ನಾವು ಶಾಂಕರಭಾಷ್ಯವನ್ನೂ, ದಶೋಪನಿಷದ್ಭಾಷ್ಯವನ್ನೂ ನಿಷ್ಪಕ್ಷಪಾತವಾದ ಹೃದಯದಿಂದ ನೋಡಿರುತ್ತೇವೆ. ನಮ್ಮ ವಿಚಾರದ ಫಲಿತಾಂಶವನ್ನು ಸಮಯಾಂತರದಲ್ಲಿ ನಿರೂಪಿಸುತ್ತೇವೆ. ಪ್ರಕೃತದಲ್ಲಿ ನಾವು ಇಷ್ಟು ಹೇಳಬಹುದು. ಸ್ಮಾರ್ತ ಬ್ರಾಹ್ಮಣರೂ ವೈಷ್ಣವಬ್ರಾಹ್ಮಣರೂ ಒಂದೇ ಕುಲದಲ್ಲಿ ಹುಟ್ಟಿದ ಬ್ರಹ್ಮಪರಂಪರೆಯಿಂದ ಬಂದ ವೈದಿಕ ಶಿಖಾಮಣಿಗಳು. ಬುದ್ಧಿಯಲ್ಲಿ, ಚಾತುರ್ಯ ದಲ್ಲಿ, ವ್ಯಾಸಂಗದಲ್ಲಿ, ಅಧ್ಯಯನಾದಿ ಸಾಮರ್ಥ್ಯದಲ್ಲಿ ಉಭಯರೂ ಸಮಾನರೇ. ಹೀಗಿರುವಲ್ಲಿ ದ್ವೈತಾದ್ವೈತ ವಿಚಾರಗಳು ಪ್ರಾಪ್ತವಾದರೆ ನಿಯಮೇನ ಅದ್ವೈತಪಕ್ಷವು ಪರಾಭವವನ್ನು ಹೊಂದಿರುವುದು. ನಿಯಮೇನ ದ್ವೈತಪಕ್ಷವು ಜಯವನ್ನು ಹೊಂದಿರು ವುದು. ಇದರಲ್ಲಿ ನಿಮಿತ್ತವೇನು?

ಈ ಪ್ರಶ್ನೆಯಿಂದ ನಮಗೆ ಪದ್ಮಪುರಾಣದ ಭೂಖಂಡದ ದಶಮಾಧ್ಯಾಯದ ಚರಿತ್ರೆಯು ಜ್ಞಾಪಕಕ್ಕೆ ಬರುವುದು. ದೈತ್ಯರೂ ದೇವತೆಗಳೂ ಉಭಯರೂ ಸಾಕ್ಷಾತ್ ಕಶ್ಯಪಋಷಿಗಳ ಪುತ್ರರುಗಳು. ಇವರುಗಳಿಗೆ ಕಾರಣಾಂತರದಿಂದ ಸ್ವರ್ಗಲೋಕಾಧಿಪತ್ಯ ವಿಷಯದಲ್ಲಿ ವಿವಾದವು ಪ್ರಾಪ್ತವಾಗಿ ನೆತ್ತರುಕೋಡಿಗಳು ನಾಲೆಯಾಗಿ ಹರಿಯತಕ್ಕಂಥಾ ಭಯಂಕರ ಸಂಗ್ರಾಮಗಳು ನಡೆದು ಪ್ರತಿಯೊಂದು ಯುದ್ಧದಲ್ಲಿಯೂ ನಿಯಮೇನ ದೇವತೆಗಳಿಗೆ ಜಯವೂ, ನಿಯಮೇನ ದೈತ್ಯರಿಗೆ ಪರಾಜಯವೂ ಉಂಟಾಯಿತು. ಸಂಖ್ಯೆಯಿಂದಲೂ ಸಾಮಗ್ರಿಗಳಿಂದಲೂ ಅಧಿಕವಾದ ದೈತ್ಯಬಲವು ಪ್ರತಿಯುದ್ಧದಲ್ಲಿಯೂ ಇನ್ನೇನು ದೇವತೆಗಳು ಬಿದ್ದರು ಜಯವು ನಮಗೆ ಕರಗತವಾಯಿತು ಎಂಬ ಕಾಲದಲ್ಲಿ ವಿಷ್ಣುಬಲದಿಂದ ಉದ್ದೀಪ್ತರಾದ ದೇವತೆಗಳಿಂದ ಬಡಿಯಲ್ಪಟ್ಟು ಪರಾಙ್ಮುಖರಾಗಿ ಓಡುವುದನ್ನು ನೋಡಿ, ಸೇನಾಧಿ ಪತಿಯೂ ದೈತ್ಯಸಾರ್ವಭೌಮನೂ ಆದ ಹಿರಣ್ಯಕಶಿಪುವು ಸ್ವಲ್ಪಪರಿವಾರದಿಂದ ಸಹಿತನಾಗಿ ತಂದೆಯೂ ಗುರುಗಳೂ ಆದ ಕಾಶ್ಯಪರ ಸಮೀಪಕ್ಕೆ ಪ್ರಾಪ್ತವಾಗಿ ಹೀಗೆ ಹೇಳುವನು.

ದಾನವಾಃ ಊಚುಃ ।।-- ಭವದ್ವೀರ್ಯಾತ್ಸಮುತ್ಪತ್ತಿರಸ್ಮಾಕಂ ದ್ವಿಜಸತ್ತಮ। ದೇವತಾನಾಂ ಮಹಾಭಾಗದಾನವಾನಾಂ ತಥೈವ ಚ।।
ವಯಂ ಚ ದಾನವಾಃ ಸರ್ವೇಬಲವೀರ್ಯಪರಾಕ್ರಮಾಃ। ಉಪಾಯಜ್ಞಾಃ ಸುಧೀರಾಶ್ಚ ಉದ್ಯಮೇನ ಸಮನ್ವಿತಾಃ ।।
ವಯಂತು ಬಹವಸ್ತಾತ ದೇವಾಸ್ತ್ವಲ್ಪಾಸ್ತಥೈವಚ। ಕಥಂ ಜಯಂತಿ ತೇ ಸರ್ವೇ ವಯಂ ಭಗ್ನಾಮಹಾಹವಾತ್।।

ತತ್ ಕಿಂ ವೈಕಾರಣಂ ತಾತ ಬಲತೇಜಃ ಸಮನ್ವಿತಾಃ। ಮತ್ತನಾಗ ಸಹಸ್ರಾಣಾಮೇಕೈಕಸ್ಯ ಮಹಾಮತೇ॥
ಬಲಮಸ್ತಿ ಚ ದೈತ್ಯಸ್ಯ ನಾಸ್ತಿ ದೇವೇಷು ತಾದೃಶಂ। ಜಯಶ್ಚದೃಶ್ಯತೇ ತಾತ ದೇವೇಷ್ವೇವ ಮಹಾಹವೇ॥
ತತ್ಸರ್ವಂ ಕಥಯಸ್ವೈವ ಸಂಶಯಂ ಛೇತ್ತುಮರ್ಹಸಿ॥

ಬಲ,ವೀರ್ಯ, ಉಪಾಯ, ಪರಾಕ್ರಮ, ತೇಜಸ್ಸು ಮುಂತಾದ ಗುಣಗಳಿಂದ ದೇವತೆಗಳಿಗೆ ಸಮಾನರಾಗಿ, ಸಂಖ್ಯೆಯಿಂದ ಅಧಿಕವಾದ, ಒಬ್ಬೊಬ್ಬನೂ ಮದಿಸಿದ ಹತ್ತುಸಾವಿರ ಆನೆಗಳ ಬಲವುಳ್ಳ ಸೈನಿಕರಿಂದ ಪೂರ್ಣವಾದ ದಾನವ ಬಲವು ಪ್ರತಿಯುದ್ಧದಲ್ಲಿಯೂ ಸೋತು ಹೋಗಿರುತ್ತದೆ. ನಿಯಮೇನ ಜಯವು ದೇವತೆಗಳಿಗೇ ಬರುತ್ತದೆ. ಇದಕ್ಕೆ ಕಾರಣವೇನು? ಎಂದು ಹಿರಣ್ಯಕಶಿಪುವೇ ಮುಂತಾದ ದಾನವರ ಪ್ರಶ್ನೆಯು. ಕಶ್ಯಪರ ಉತ್ತರವೂ ನಿಸ್ಸಂಶಯವಾಗಿರುವುದು.

ಯತ್ರ ವಿಷ್ಣುರ್ಹೃಷೀಕೇಶೋ ಜಯಸ್ತತ್ರ ಪ್ರದೃಶ್ಯತೇ। ತೇಷಾಂ ಸಹಾಯಃ ಸಂಭೂತೋ ವಾಸುದೇವಃ ಸನಾತನಃ॥
ತಸ್ಮಾಜ್ಜಯಂತಿ ತೇ ದೇವಾಃ ಸತ್ಯಧರ್ಮಸಮನ್ವಿತಾಃ। ಸಹಾಯೇನ ಬಲೇನೈವ ಪೌರುಷೇಣ ತಥೈವಚ॥
ಭವಂತಃ ಕಿಲವೈಪುತ್ರಾಸ್ತಪಃ ಸತ್ಯ ವಿವರ್ಜಿತಾಃ। ಯಸ್ಯ ವಿಷ್ಣುಃ ಸಹಾಯಶ್ಚ ತಪಶ್ಚೈವ ಬಲಂ ತಥಾ॥
ತಸ್ಯೈವ ಚ ಜಯೋದೃಷ್ಟ ಇತಿ ಧರ್ಮವಿದೋ ವಿದುಃ॥

ಸತ್ಯಧರ್ಮಾನುಯಾಯಿಗಳಾದ ದೇವತೆಗಳಿಗೆ ವಿಷ್ಣುವು ಸಹಾಯಮಾಡುವನು. ನೀವುಗಳೆಲ್ಲರೂ ಸತ್ಯಧರ್ಮಗಳನ್ನು ಪರಿತ್ಯಾಗಮಾಡಿರುವಿರಾದುದರಿಂದ ವಿಷ್ಣುವು ನಿಮಗೆ ಸಹಾಯಮಾಡಲಿಲ್ಲ. ಎಲ್ಲಿ ವಿಷ್ಣುವು ಇರುವನೋ ಅಲ್ಲಿ ಜಯವು ಸುಸ್ಥಿರವು ಎಂದು ಬ್ರಹ್ಮಜ್ಞಾನಿಗಳು- ಗೀತೆಯಲ್ಲಿಹೇಳಿರುವ ಕುರುಕ್ಷೇತ್ರವೇ ನಿದರ್ಶನವು ಎಂದು ಹೇಳುವರು. ಹೀಗೆ ಹೇಳಿ ನೀವು ವಿಷ್ಣುವಿನ ದಾಸ್ಯಭಾವವನ್ನು ಹೊಂದಿ ಉಪಾಸನೆ ಮಾಡಿ, ಐಂದ್ರ ಪದವನ್ನು ಪಡೆಯಬಹುದು ಎಂದು ಉಪದೇಶಮಾಡಿದರು. ದಾನವರಿಗೆ ಅದು ರುಚಿಸಲಿಲ್ಲ.

ಹಿರಣ್ಯಕಶಿಪೂರಾಜಾತಾನುವಾಚಾಥದಾನವಾನ್। ತಪಶ್ಚೈವಕರಿಷ್ಯಾಮೋ ದುಷ್ಕರಂ ಸರ್ವದಾಯಕಂ॥
ರಣೇನಿರ್ಜಿತ್ಯ ಗೋವಿಂದಂ ತಮಿಮಂ ಪಾಪಚೇತಸಂ। ವ್ಯಾಪಾದ್ಯದೇವತಾಃ ಸರ್ವಾಃ ಪದಮೈದ್ರಂವ್ರಜಾಮ್ಯಹಂ॥
ಅಹಮೇವಂ ನ ಕರಿಷ್ಯೇ ಹರೇರಾರಾಧನಂ ಕದಾ। ವಿಷ್ಣೋಃ ಸೇವಾ ನ ವೈಕಾರ್ಯಾ ಮಯಾಚಾನ್ಯೈಶ್ಚದಾನವೈಃ॥

....... .............. .................... ….......................

ವಿಷ್ಣೋಃ ಸಾರ್ಧಂ ಮಹಾವೈರಂ ಹೃದಿಕೃತ್ವಾ ಮಹಾಸುರಾಃ। ತಪಶ್ಚಕ್ರುಃ ತತಃ ಸರ್ವೇಗಿರಿದುರ್ಗೇಷು ಸಾನುಷು॥
ಏವಂ ತೇ ದಾನವಾಃ ಸರ್ವೇ ತ್ಯಕ್ತರಾಗಾಃ ಸುನಿಶ್ಚಿತಾನ್। ಕಾಮಕ್ರೋಧವಿಹೀನಾಶ್ಚ ನಿರಾಹಾರಾಜಿತಕ್ಲಮಾಃ॥

ದಾನವರು ವಿಷ್ಣುವಿನ ಸರ್ವೋತ್ತಮತ್ವವನ್ನು ಒಡಂಬಡಲಿಲ್ಲ. ''ಅವನ ಆರಾಧನೆಯನ್ನು ನಾವು ಮಾಡಲಾರೆವು. ತಪಸ್ಸುಮಾಡಿ ತಪಸ್ಸಿನಿಂದ ಬಲವನ್ನು ಸಂಪಾದಿಸಿ ಗೋವಿಂದನನ್ನು ಜಯಿಸಿ; ಐಂದ್ರಪದವಿಯನ್ನು ಹೊಂದುವೆವು' ಎಂದು ನಿಶ್ಚಯಿಸಿ, ಕಾಮ- ಕ್ರೋಧವಿಹೀನರಾಗಿ ತಪಸ್ಸಿನಲ್ಲಿ ಆಸಕ್ತರಾದರು. ಅಷ್ಟೇವಿನಃ ಭಗವಂತನಾದ ಗೋವಿಂದನನ್ನು ಶರಣುಹೊಂದಲಿಲ್ಲ. ಈ ತಪಸ್ಸಿನ ಪರಿಣಾಮವು ಸಕಲರಿಗೂ ವಿದಿತವಾಗಿರುವುದು.

ಪ್ರಕೃತದಲ್ಲಿ ದ್ವೈತಾದ್ವೈತಕಲಹದಲ್ಲಿನಿಯಮೇನ ಅದ್ವೈತಪಕ್ಷವು ಪರಾಭವವನ್ನೂ ನಿಯಮೇನ ದ್ವೈತ ಪಕ್ಷವು ವಾಕ್ಯಾರ್ಥದಲ್ಲಿ ಜಯವನ್ನೂ ಸಂಪಾದಿಸುವುದರಲ್ಲಿ ವಿಷ್ಣುದ್ವೇಷಕ್ಕಿಂತ ಅತಿರಿಕ್ತವಾದ ಬೇರೆ ಕಾರಣವನ್ನು ಹುಡುಕಬೇಕಾಗಿರುವುದು. ಯದ್ಯಪಿ ತತ್ವಮಾರ್ಗದಿಂದ ವಿಚಾರ ಮಾಡಿದರೆ ವಿಷ್ಣುವುಮಿಥ್ಯಾ ಎಂದರೆ ಹಿಂದೂ ಇರಲಿಲ್ಲ. ಈಗಲೂ ಇಲ್ಲ ಮುಂದೂ ಇಲ್ಲ ಎಂಬ ವಾದವು ಪ್ರಬಲವಾದ ಒಂದು ವಿಷ್ಣುದ್ವೇಷವೇ. ಆದರೆ ವಾಕ್ಯಾರ್ಥ ವೇಳೆಯಲ್ಲಿ ಅದ್ವೈತ ಪಂಡಿತನ ಮನಸ್ಸಿನಲ್ಲಿ ಪ್ರೀತಿಗೆ ವಿರುದ್ಧವಾದ, ಅನುಭವಸಿದ್ಧವಾದ, ಹಿರಣ್ಯಕಶಿಪು ಮುಂತಾದವರಲ್ಲಿದ್ದ, ದ್ವೇಷವೆಂಬ ಮನೋಧರ್ಮವು ಇರುವುದಿಲ್ಲ. ಅವನ ಪರಾಜಯಕ್ಕೆ ಆತನ ಬುದ್ಧಿಹೀನತೆಯು ಕಾರಣವಲ್ಲ. ಒಬ್ಬರು ಇಬ್ಬರು ಎಲ್ಲಾ ಜಾತಿಯಲ್ಲಿಯೂ ದಡ್ಡರಿರುವರು. ಆದರೆ ಸ್ಮಾರ್ತ ಬ್ರಾಹ್ಮಣರ ಬುದ್ಧಿಯು ಸೂಜಿಯಂತೆ ತೀಕ್ಷ್ಣವಾಗಿ ವಿಚಾರದಲ್ಲಿಸಮರ್ಥವಾದುದೆಂದು ಸರ್ವರೂ ಬಲ್ಲರು. ವ್ಯಾಕರಣ, ಮೀಮಾಂಸಾದಿ ವೇದಾಂಗಗಳಲ್ಲಿ ಅವರ ನಿಪುಣತೆಯು ಸರ್ವಜನರಿಂದಲೂ ಅಂಗೀಕೃತವಾಗಿರುವುದು. ವೇದಾಂತದಲ್ಲಿಮಾತ್ರ ಲಕ್ಷಾಂತರಗಳಷ್ಟು ಗ್ರಂಥಗಳಿದ್ದರೂ ತಾಳ್ಮೆಯಿಂದ ವಿಷಯವನ್ನು ಹಿಡಿದು ತುದಿಯವರೆವಿಗೂ ಮಾತಾಡಿದ ಧೀರರನ್ನು ನಾವು ಇದುವರೆವಿಗೆ ನೋಡಲಿಲ್ಲ. ಇದಕ್ಕೆ ಕಾರಣವು ಮತದೌರ್ಬಲ್ಯವು, ಮತಿ ದೌರ್ಬಲ್ಯವಲ್ಲ. ನಾಲ್ಕುಮೂರೆಂಟು ಎಂದು ಹೇಳಿ ಸಾಧನೆಮಾಡಲು ಹೋಗುವವನು ಮುಕ್ಕಣ್ಣನಾದ

ಮಹಾದೇವನಾದರೆ ತಾನೇ ಜಯಿಸುವನೇ? ಹೀಗೆಯೇ ಪ್ರಕೃತದಲ್ಲಿ ಬ್ರಹ್ಮವು ನಿರ್ಗುಣವು, ಅಜ್ಞೇಯನು,ವೇದಾದಿ ಪ್ರಮಾಣಗಳಿಗೆ ವಿಷಯನಾಗಲಾರನು; ಜಗತ್ತು ಮಿಥ್ಯಾ ಎಂದರೆ ತ್ರೈಕಾಲಿಕ ನಿಷೇಧ ಪ್ರತಿಯೋಗಿ ಎಂದರೆ ಹಿಂದೆ ಇರಲಿಲ್ಲ, ಈಗ ಇರುವುದಿಲ್ಲ, ಮುಂದೂ ಇರುವುದಿಲ್ಲ ಎಂಬ ಎರಡು ತತ್ವವನ್ನು ಕಟ್ಟಿಕೊಂಡು ಎರಡು ಭುಜಗಳಲ್ಲಿ ಏರಿಸಿಕೊಂಡು ಪೂರ್ಣವಾದ ಗಂಗಾಪ್ರವಾಹವನ್ನು ಈಜಾಡಿ ದಾಟುವುದಕ್ಕೆ ಯತ್ನಿಸುವ ಮನುಷ್ಯನ ಸಾದೃಶ್ಯವನ್ನು ಹೊಂದುವನು. ಕೇಸುಕೆಟ್ಟು ಸರ್ವಪ್ರಕಾರದಿಂದಲೂ ಅನಾನುಕೂಲವಾಗಿದ್ದರೆ ಲಾಯರು ಎಷ್ಟೇ ಕುಶಲನಾದರೂ ಏನು ಮಾಡುವನು ?

ಅದ್ವೈತಮತವು ದುರ್ಬಲವೆಂಬುದರಲ್ಲಿ ಮತ್ತೊಂದು ಆಧಾರವೂ ಉಂಟು. ಅನೇಕರು ಕವಿಕುಲತಿಲಕರು, ವಿದ್ವದಗ್ರಣಿಗಳು, ಮಹಾಮಹೋಪಾಧ್ಯಾಯರುಗಳು, ಗ್ರಂಥಬರೆದು ಬ್ರಹ್ಮಸೂತ್ರಗಳಿಗೆ ಸ್ವತಂತ್ರ ವ್ಯಾಖ್ಯಾನವನ್ನು ರಚಿಸುವಷ್ಟು ಕುಶಲರಾದ ಪಂಡಿತೋತ್ತಮರು ಅದ್ವೈತೋಪಾಸನೆಯು ಅನರ್ಥಫಲಗಳಿಗೆ ಕಾರಣವಾಗುವುದೆಂದು ಪ್ರಮಾಣಗಳಿಂದ ನಿಶ್ಚೈಯಿಸಿ ವೈಷ್ಣವ ಮತವನ್ನು ಅವಲಂಬಿಸಿ, ಕೃಷ್ಣೋಪಾಸ್ತಿಯಲ್ಲಿ ವಿರಕ್ತಿ ಪೂರ್ಣವಾಗಿ ಆಸಕ್ತರಾಗಿರುವರು. ಚರಿತ್ರೆಯಲ್ಲಿ ಹಳ್ಳಿಯ ಗೌಡರೂ, ಪಂಚಮರೂ ರಾಗಿ ಗಂಜಿಯ ಉದ್ದಿಶ್ಯ ಕ್ರಿಸ್ತರಾಗಿರುವುದನ್ನು ಕೇಳಿ ಬಲ್ಲೆವು. ಪಂಡಿತ ಕುಲಶೇಖರರಾದ ರಾಜಮಾನ್ಯ ವಿದ್ಯಾವಂತರು ಗಳ ಸಮೂಹವು ಧನಕನಕಾದಿ ವಸ್ತ್ರಾದಿಗಳ ಪ್ರಾಪ್ತಿಯನ್ನು ಅಪೇಕ್ಷಿಸದೆ ಪರಮತವನ್ನು ಅವಲಂಬಿಸಿದುದು ಅದ್ವೈತಮತದ ನ್ಯೂನತೆಗೂ, ದ್ವೈತಮತದ ಘನತೆಗೂ ಜ್ಞಾಪಕವಾಗಿರುತ್ತದೆ. ಸಿ. ಆರ್. ದಾಸರು ಸಮಸ್ತ ಸಂಪತ್ತುಗಳನ್ನೂ ಪರಿತ್ಯಾಗಮಾಡಿ ಗಾಂಧೀಜಿಯನ್ನು ಅನುಸರಿಸಿದುದರಿಂದ ಆಂಗ್ಲೇಯರ ಆಧಿಪತ್ಯದಲ್ಲಿ ಅಪನಂಬಿಕೆಯು ಬಂದಷ್ಟು ಲಕ್ಷ ಜನ ಬಾಲಕರು ಟೋಪಿ ಯನ್ನು ಧರಿಸಿದುದರಿಂದ ಬರಲಿಲ್ಲ. ಒಮ್ಮೊಮ್ಮೆ ಜಟ್ಟಿಯೂ ಮುಗ್ಗರಿಸಿ ಬೀಳುವನು. ಆದರೆ ಬಹುಜನರು ವಿದ್ವತ್ಕುಲತಿಲಕರು ರಾಜ್ಯಾದಿ ಭೋಗ ನಿರಪೇಕ್ಷಿಗಳಾಗಿ ಸ್ವಯಂ ತಮ್ಮ ವೇದಾಂತದಲ್ಲಿ ಪೂರ್ಣವಾದ ಪಾಂಡಿತ್ಯವುಳ್ಳವರಾಗಿ ಅದನ್ನು ಪರಿತ್ಯಾಗ ಮಾಡಬೇಕಾದರೆ ಸ್ವಕೀಯಮತದಲ್ಲಿರುವ ನೂನತಾಜ್ಞಾನವೇ ಹೊರತು ಬೇರೆ ಕಾರಣವು ದೊರಕಲಾರದು.

ಇದರಲ್ಲಿ ಮತ್ತೊಂದು ಸೂಕ್ಷ್ಮ ವಿಷಯವನ್ನೂ ಸೂಚಿಸಬೇಕಾಗಿರುವುದು. ವೈಷ್ಣವ ಸಂಪ್ರದಾಯ ಪ್ರವರ್ತಕರಾದ ಶ್ರೀಮನ್ಮಧ್ವಾಚಾರ್ಯರ ನಿಜಪ್ರತಿಭೆಯಿಂದಲೇ ಲೋಹ ಚುಂಬಕದಿಂದ ಆಯಸವು ಆಕರ್ಷಿಸಲ್ಪಡುವಂತೆ ಅನೇಕ ದೈವೀ ಸಂಪತ್ತಿನಿಂದ ಪೂರ್ಣರಾದ ಸಾತ್ವಿಕ ಜನರು ನಿರ್ಗುಣೋಪಾಸನೆಯನ್ನು ಪರಿತ್ಯಾಗ ಮಾಡಿ ವೈಷ್ಣವ ದೀಕ್ಷೆಯನ್ನು ಸ್ವೀಕರಿಸಿ, ಪುರುಷೋತ್ತಮ ನನ್ನೇ ಪರಬ್ರಹ್ಮನೆಂದು ವರಿಸಿದುದು ನಿಶ್ಚಯವು. ಅಷ್ಟೇ ಅಲ್ಲ, ಈಚೆಗೆ ಅವರ ಅದರ್ಶನಾನಂತರದಲ್ಲಿಯೂ ಸಹ, ಮನಃಕರ್ಷಕ ವಾದ ತೇಜಃಪುಂಜದಿಂದ ಪೂರ್ಣವಾದ ಅವರ ದಿವ್ಯಸನ್ನಿಧಾನವಿರಹ ದೆಶೆಯಲ್ಲಿಯೂ ಕೂಡ ಅನೇಕ ವಿದ್ವದಗ್ರಣಿಗಳು ಅವರ ಗ್ರಂಥೋಕ್ತ ಯುಕ್ತಿಪರಾಮರ್ಶೆಯಿಂದಲೇ ಸ್ವಮತದೌರ್ಬಲ್ಯವನ್ನೂ ದ್ವೈತೋಪಾಸನೆಯ ಉತ್ಕರ್ಷವನ್ನೂ ನಿಶ್ಚಯಮಾಡಿ ರುವುದು ದ್ವೈತಸಂಪ್ರದಾಯಪ್ರವರ್ತಕರವಾದ ಸಮೀಚೀನತೆಗೂ ನ್ಯಾಯಾನುಗುಣ್ಯಕ್ಕೂ ಗೌರವಪಾತ್ರವಾಗಿರುತ್ತದೆ. ಅದ್ವೈತಿಗಳು ಕೋಟಿ ಜನರಿರಬಹುದು. ಅದ್ವೈತತತ್ವವನ್ನು ತಿಳಿದವರು ಯಾವತ್ತು ಭರತಖಂಡದಲ್ಲಿ ಹತ್ತು ಜನರು ಸಿಗುವುದು ಕಷ್ಟ. ಅದರಲ್ಲೂ ಸಮಗ್ರವಾಗಿ ಭಾಷ್ಯಾದಿಗ್ರಂಥಗಳನ್ನು ಆಲೋಚನೆಮಾಡಿ ಅದನ್ನು ಮನಃಪೂರ್ವಕವಾಗಿ ಅನುಸರಿಸುವವರು ಇನ್ನೂ ವಿರಳರು. ಅತಿ ನೂತನವಾಗಿ 'ಮಹಾಮಹೋಪಾಧ್ಯಾಯ' ರೆಂದು ಬಿರುದಾಂಕಿತರಾದ ಅದ್ವೈತ ವೇದಾಂತದಲ್ಲಿ ನಿಸ್ಸೀಮ ಪಂಡಿತರಾದ ರಾಮಸುಬ್ಬಶಾಸ್ತ್ರಿಗಳು, ಸಕಲ ಶಾಸ್ತ್ರಗಳೂ ಭೇದವನ್ನೇ ಹೇಳುವುವೆಂದು ಹೇಳಿಬಿಟ್ಟರು. ಇದು ಅವರ ಮಾತು:-

ಶಾಸ್ತ್ರಾಣಾಂಭೇದ ಏವ ಶ್ರುತಿಶಿಖರಗಿರಾಮಾಗಮಾನಾಂ ಚ ನಿಷ್ಠಾ ।
ಸಾಕಂಸರ್ವೈಃ ಪ್ರಮಾಣೈಃ ಸ್ಮೃತಿನಿಕರಮಹಾಭಾರತಾದಿಪ್ರಬಂಧೈಃ ॥
ತತ್ರೈವವ್ಯಾಸಸೂತ್ರಾಣ್ಯಕುಟಿಲವಿಧಯಾಭಾಂತಿ ತಾತ್ಪರ್ಯವಂತಿ।
ಪ್ರಾಚ್ಯೈರಾಚಾರ್ಯರತ್ನೈರಪಿ ಪರಿಜಗೃಹೇ ಶಂಕರಾದ್ಯೈಃ ಸ ಚಾಪಿ ॥

ಅರ್ಥವು:- ಶಾಸ್ತ್ರ, ಉಪನಿಷತ್ತು, ಆಗಮ, ಸ್ಮೃತಿ, ಮಹಾಭಾರತ ಇತ್ಯಾದಿ ಪ್ರಮಾಣಗಳಿಗೂ ಜೀವೇಶ್ವರ ಭೇದದಲ್ಲಿಯೇ ತಾತ್ಪರ್ಯವಿರುವುದು. ಮತ್ತು ವ್ಯಾಸಸೂತ್ರಗಳೂ ಕೂಡ ಸರಳವಾದ ರೀತಿಯಿಂದ ಜೀವೇಶ್ವರಭೇದದಲ್ಲಿಯೇ ತಾತ್ಪರ್ಯವು- ಳ್ಳವು. ಶಂಕರ ಮೊದಲಾದ ಪ್ರಾಚೀನಾಚಾರ್ಯರೂ ಜೀವೇಶ್ವರ ಭೇದವನ್ನೇ ಅಂಗೀಕರಿಸಿರುವರು.

ರಾಮಸುಬ್ಬಶಾಸ್ತ್ರಿಗಳು ಒಂದು ಸಣ್ಣಸುಳ್ಳನ್ನು ಮಾತ್ರ ಬರೆದರು. ಶಂಕರಾಚಾರ್ಯರೂ ಸಹ ಭೇದವನ್ನೇ ಪರಮ ಶಾಸ್ತ್ರಾರ್ಥವನ್ನಾಗಿ

ಒಪ್ಪಿರುವರು ಎಂದು ಹೇಳಿದರು. ಹಾಗಿದ್ದರೆ, ರಾಮಾನುಜಾದಿ ಅನೇಕ ಭಾಷ್ಯಕಾರರೂ, ಚೈತನ್ಯ ಪ್ರಭೃತಿಗಳೂ, ಅವರ ಮತವನ್ನು ಖಂಡಿಸುವ ಪ್ರಯತ್ನವನ್ನು ಮಾಡುವುದಕ್ಕೆ ಕಾರಣವಿರಲಿಲ್ಲ. ಇದು ತಮ್ಮ ಗುರುಗಳ ಗೌರವವನ್ನು ಕಾಪಾಡುವು ದಕ್ಕೋಸ್ಕರ ಹೇಳಿದ ಒಂದು ವಿಧವಾದ ಮೃದೂಕ್ತಿಯು.

ಈ ವಾಕ್ಯದಿಂದಲೇ ಮತ್ತೊಂದು ವಿಷಯವೂ ಜ್ಞಾಪಕಕ್ಕೆ ಬರುವುದು. 1.ಶಂಕರಾಚಾರ್ಯರ ಮತವೂ ಭೇದ ಮತವೇ ಎಂದು ರಾಮಸುಬ್ಬಶಾಸ್ತ್ರಿಗಳು ಹೇಳಿಬಿಟ್ಟರು. ಅವರ ಮತವು ಅಭೇದಮತವು ಎಂದು ಮತ್ತೆ ಅನೇಕರು ತಿಳಿದಿರುವರು. 2. ಈಚೆಗೆ ಕೆಲವರು ಶಂಕರಾಚಾರ್ಯರು ಅವಿದ್ಯೆಯನ್ನು ಒಪ್ಪಲೇ ಇಲ್ಲ ಎಂದು ಬರೆದು ಒಂದು ಗ್ರಂಥವನ್ನು ಕಳುಹಿಸಿ ಕೊಟ್ಟಿರುವರಂತೆ. ಅವಿದ್ಯಾ , ಮಾಯಾ ಮುಂತಾದುವುಗಳು ಶಂಕರಾಚಾರ್ಯರ ಪ್ರಾಣಪದಕವೆಂದು ಅನೇಕರು ತಿಳಿದಿರುತ್ತಾರೆ. 3. ಅವಿದ್ಯೆಯು ಬ್ರಹ್ಮಾಶ್ರಿತವೆಂದೂ ಶಂಕರಾಚಾರ್ಯರ ಅಭಿಪ್ರಾಯವೆಂದು ಸ್ವಲ್ಪ ಜನರು ಹೇಳುತ್ತಾರೆ. 4. ಬ್ರಹ್ಮನು ಸರ್ವಥಾ ನಿರ್ಗುಣನೆಂದೇ ಶಂಕರಾಚಾರ್ಯರ ಅಭಿಪ್ರಾಯವೆಂದು ಅನೇಕರು ಹೇಳುತ್ತಾರೆ. ಕೆಲವರು ಅಭಾವ ಧರ್ಮಗಳನ್ನೂ ಬ್ರಹ್ಮನಲ್ಲಿ ಶಂಕರಾಚಾರ್ಯರು ಒಪ್ಪುವರೆಂದು ಹೇಳುತ್ತಾರೆ. 5. ಏಕಜೀವವಾದವು ಎಂದರೆ ಒಂದೇ ಜೀವವು ಇರತಕ್ಕದ್ದು, ಇತರ ದೇಹಗಳೆಲ್ಲಾ ನಿರ್ಜೀವದೇಹ ಗಳು, ಆ ಏಕಜೀವನಿಗೆ ಮುಕ್ತಿಯಾದರೆ ಸಂಸಾರೋಪರಮವೆಂದು ಶಂಕರಾಚಾರ್ಯರ ಅಭಿಪ್ರಾಯವೆಂದು ಅನೇಕರು ಹೇಳುತ್ತಾರೆ ಕೆಲವರು ಬಹುಜೀವವಾದವು ಶಂಕರಾಚಾರ್ಯರ ಅಭಿಪ್ರಾಯವೆಂದು ಹೇಳುತ್ತಾರೆ. 6.'ಜಗತ್ತು ಮಿಥ್ಯಾ ಎಂದರೆ ಸದ್ವಿವಕ್ತವು ಎಂದು ಇಷ್ಟೇ ಶಂಕರಾಚಾರ್ಯರ ಅಭಿಪ್ರಾಯವು ಎಂದು ಅನೇಕರು ಹೇಳುತ್ತಾರೆ. ಕೆಲವರು ಮಿಥ್ಯಾ ಎಂದರೆ ಸದಸದ್ವಿಲಕ್ಷಣವು ಎಂದು ಹೇಳುತ್ತಾರೆ. ಈಚೆಗೆ ಕೆಲವರು ಮಿಥ್ಯಾ ಎಂದರೆ ಅನಿತ್ಯವೆಂದು ಶಂಕರಾಚಾರ್ಯರ ಅಭಿಪ್ರಾಯವೆಂದು ಕೆಲವರು ಹೇಳುತ್ತಾರೆ. 7. ಮುಕ್ತಿಯು ಬ್ರಹ್ಮಸ್ವರೂಪವೇ ಎಂದು ಶಂಕರಾಚಾರ್ಯರ ಅಭಿಪ್ರಾಯವು ಎಂದು ಅನೇಕ ಅದ್ವೈತಿಗಳು ಹೇಳುತ್ತಾರೆ ಕೆಲವರು ಮುಕ್ತಿಯು ಸದಸದ್ವಿಲಕ್ಷಣ ವಿಲಕ್ಷಣವು ಎಂದು ಪಂಚಮಪ್ರಕಾರವಾದ ವಿಲಕ್ಷಣಪದಾರ್ಥವೆಂದು ಶಂಕರಾಚಾರ್ಯರ ಅಭಿಪ್ರಾಯವೆಂದು ಹೇಳುತ್ತಾರೆ. ಇಂಥಾ ಅಭಿಪ್ರಾಯ ಪ್ರಭೇದಗಳು ಕೊನೆಯ ಪಕ್ಷದಲ್ಲಿ ನೂರು ಪತ್ರಗಳಾಗುವಷ್ಟು ಅದ್ವೈತ ಭಾಷ್ಯಾದಿಗಳಲ್ಲಿ ತುಂಬಿರುತ್ತದೆ. ಸಾವಕಾಶವಾಗಿ ಗ್ರಂಥಾಂತರದಲ್ಲಿ ನಿರೂಪಿಸುತ್ತೇವೆ. ಪ್ರಕೃತದಲ್ಲಿ ಇದರಿಂದ ಇಷ್ಟು ತಿಳಿದುಬರುವುದು. ಪ್ರಧಾನತತ್ವಗಳಾದ ನಿರ್ಗುಣಬ್ರಹ್ಮ , ಜೀವ, ಪ್ರಪಂಚಮಿಥ್ಯಾತ್ವ , ಮುಕ್ತಿ ಇಂಥಾ ವಿಷಯಗಳ ಲ್ಲಿಯೇ ಅವರ ನಿರೂಪಣೆಯು ನಿಸ್ಸಂಶಯವಾದ ನಿಶ್ಚಯಾತ್ಮಕಜ್ಞಾನ ಹುಟ್ಟಿಸುವುದರಲ್ಲಿ ಸಮರ್ಥವಾಗಿರುವುದಿಲ್ಲ. ಪಂಡಿತರುಗಳಿಗೇ ಅದು ನಾನಾರೀತಿಯಲ್ಲಿ ಗೋಚರವಾಗುತ್ತಾ ಘಳಿಗೆಗೆ ಒಂದು ರೀತಿಯಾಗಿ ತೋರುವುದು. ಏನೋ ಸ್ವಲ್ಪಗ್ರಂಥಗಳನ್ನು ಸಂಕ್ಷೇಪವಾಗಿ ಬರೆದರು; ಆದುದರಿಂದ ಅವರ ಆಶಯವು ಸ್ಪಷ್ಟವಾಗಿ ಗೊತ್ತಾಗುವುದಿಲ್ಲ ಎಂದು ಹೇಳಲಾಗುವುದಿಲ್ಲ. ಯಾವ ಭಾಷ್ಯಕಾರರೂ ಇಷ್ಟು ವಿಪುಲವಾದ ಗ್ರಂಥಗಳನ್ನು ರಚಿಸಲಿಲ್ಲ. ಸಪಾದ ಲಕ್ಷಗ್ರಂಥವನ್ನು ಶಂಕರಾಚಾರ್ಯರು ಖುದ್ದು ಬರೆದಿರುವರು ಎಂದು ಹೇಳುವರು. ಇನ್ನೂ ಹೆಚ್ಚಿದ್ದರೂ ಇರಬಹುದು. ಇಷ್ಟು ಗ್ರಂಥಗಳನ್ನು ಬರೆದ ಬೇರೆ ಭಾಷ್ಯಕಾರನು ಈ ಭೂಲೋಕದಲ್ಲಿ ಇಲ್ಲ. ಇಂಥಾ ವಿಸ್ತೃತ ಬರವಣಿಗೆಯಲ್ಲಿಯೂ ಮುಖ್ಯವಿಷಯಗಳಲ್ಲಿಯೇ ಇಷ್ಟು ಸಂದೇಹವು ಉತ್ಪನ್ನವಾಗುವುದಾದರೆ ಗ್ರಂಥಕರ್ತನಿಗೇ ಆ ವಿಷಯಗಳಲ್ಲಿ ನಿಶ್ಚಯವಾಗಿಲ್ಲ ಎಂದು ನಿಶ್ಚಯಿಸಬೇಕಾಗುವುದು. ಅಲ್ಪವಾದ ಕೂಪೋದಕದಲ್ಲಿ ನೀರು ಬಗ್ಗಡವಾಗುವುದು ಸಂಭಾವಿತವು. ವಿಶಾಲವಾದ ಮಹಾಸರೋವರದಲ್ಲಿ ಪಾನಾರ್ಹವಾದ ಜಲವು ಸಿಕ್ಕದಿದ್ದರೆ ಅದು ಕಾಳಿಂದೀ ಮಡುವಿನಂತೆ ಸರ್ಪಗ್ರಸ್ತವೆಂದೇ ಚಿಂತಿಸಬೇಕು. ಈ ವಿಷಯದಲ್ಲಿ ಸೂಚಿತವಾಗುವ ನಿರ್ಣಯವನ್ನು ಪ್ರಾಜ್ಞರೇ ನಿರ್ಧರಿಸಬೇಕು.

ನಾವು ಶಂಕರ ಭಗವತ್ಪಾದರ ಸೂತ್ರಭಾಷ್ಯವನ್ನೂ ದಶೋಪನಿಷದ್ಭಾಷ್ಯಗಳನ್ನೂ ನೋಡಿರುವೆವು. ಸಾಂಬಶಾಸ್ತ್ರಿಗಳೂ ಸುಬ್ಬರಾಯಪಂಡಿತರೂ ರಚಿಸಿರುವ ಅಮೌಲ್ಯವಾದ ಕರ್ನಾಟಕ ಗ್ರಂಥರತ್ನಗಳನ್ನೂ ನೋಡಿರುವೆವು. ಇವುಗಳಲ್ಲಿ ಎಲ್ಲಿಯೂ 'ದ್ವೈತಸಿದ್ಧಾಂತ ವಿಚಾರ'ವೆಂಬ ಗ್ರಂಥದಲ್ಲಿ ನಿರೂಪಿತವಾದ ಆಕ್ಷೇಪಗಳಿಗೆ ಸಮಾಧಾನವು ಬರಲಿಲ್ಲ. ಅದ್ವೈತವಾದವು ದುಸ್ತರವಾದ ಅನೇಕದೋಷಗಳಿಂದ ಸಹಿತವಾಗಿರುವುದು. ಆದುದರಿಂದ ಮುಮುಕ್ಷುಗಳಾದ ಸ್ಮಾರ್ತಮಹಾಜನರು ವೇದಾಂತ ವಿಮರ್ಶಿನೀ ಸಭೆಗಳನ್ನು ಸೇರಿಸಿ, ಅಲ್ಲಿ ವಾಕ್ಯಾರ್ಥಗಳನ್ನು ಮಾಡಿಸಿ, ಪ್ರಾಮಾಣಿಕವಾದ ತತ್ವ ವಿಮರ್ಶೆಮಾಡಿ ಚುನಾಯಿಸುವುದು ನ್ಯಾಯ ಪ್ರಾಪ್ತವಾಗಿರುವುದು. ''ಆತ್ಮೈವ ಹ್ಯಾತ್ಮನೋ ಬಂಧುಃ'' ಮೋಕ್ಷಾಧಿಕಾರಿಗೆ ವಿಚಾರಶೀಲವಾದ ಸಾತ್ವಿಕಮನಸ್ಸೇ ಬಂಧುವು. ''ಆತ್ಮೈವ ರಿಪುರಾತ್ಮನಃ'' ಬ್ರಹ್ಮವಿಚಾರದಲ್ಲಿ ಆಸಕ್ತವಲ್ಲದ ತಾಮಸ ಮನಸ್ಸೇ ಶತ್ರುವೆನ್ನಿಸುವುದು. ಎಂದರೆ ಸಾತ್ವಿಕ ಮನಸ್ಸುಳ್ಳವನು ಯಥಾರ್ಥಜ್ಞಾನವನ್ನು ಸಂಪಾದಿಸಿ, ಸ್ವರ್ಗಾದಿ ಪುಣ್ಯಲೋಕಗಳನ್ನು ಸಂಪಾದಿಸುವನು. ತಾಮಸ ಮನಸ್ಸುಳ್ಳವನು ವಿಪರೀತಜ್ಞಾನ ಸಂಪಾದಿಸಿ, ನರಕಾದ್ಯನರ್ಥಗಳನ್ನು

ಹೊಂದುವನು. ಮರಣಕಾಲದಲ್ಲಿ ''ಬಾಂಧವಾ ವಿಮುಖಾಯಾಂತಿ ಧರ್ಮಸ್ಸಮನುಗಚ್ಛತಿ'' ಎಂಬ ವಚನಾನುಸಾರವಾಗಿ ನಮ್ಮ ಧರ್ಮಗಳು ನಮ್ಮ ಸಂಗಡ ಪರಲೋಕಕ್ಕೆ ಬರುವುವು. ಆ ರೀತಿಯಾದ ಧರ್ಮಗಳಲ್ಲಿ ಕೆಲವು ಕರ್ಮೇಂದ್ರಿಯ ಜನಿತವಾದುವುಗಳು. ಇವುಗಳಿಗಿಂತ ಜ್ಞಾನೇಂದ್ರಿಯ ಜನಿತ ಪುಣ್ಯಪಾಪಗಳು ಅತಿಶಯವೆನ್ನಿಸುವುವು. ಇವುಗಳಿಗಿಂತಲೂ ಮನೋ ಇಂದ್ರಿಯದಿಂದ ಪ್ರಾಪ್ತವಾಗುವ ಧರ್ಮಾಧರ್ಮಗಳು ಆಧಿಕ್ಯವನ್ನು ಹೊಂದಿರುವುವು. ಮನಸ್ಸಿನಿಂದ ನಾವು ಸಂಪಾದಿಸಿದ ಬ್ರಹ್ಮಜ್ಞಾನವು ಯಥಾರ್ಥವಾದರೆ ಮಹತ್ಪುಣ್ಯವೂ, ಅಯಥಾರ್ಥವಾದರೆ ಮಹತ್ಪಾಪವೂ ತಪ್ಪುವುದಿಲ್ಲ. ಸಾತ್ವಿಕ ಬ್ರಹ್ಮಜ್ಞಾನವನ್ನು ಪಡೆದವರು ಊರ್ಧ್ವಲೋಕಗಳನ್ನು ಪಡೆಯುತ್ತಾರೆ. ತಾಮಸಜ್ಞಾನವನ್ನು( ಅಯಥಾರ್ಥಜ್ಞಾನವನ್ನು) ಸಂಪಾದಿಸಿ ದವರು ಅಧೋಲೋಕಗಳನ್ನು ಹೊಂದಿ, ಇಹಲೋಕದಲ್ಲಿ ದುಷ್ಟಯೋನಿಗಳಲ್ಲಿ ಹುಟ್ಟಿ ಬಹು ದುಃಖಪಡಬೇಕಾಗುವುದು. ಆದುದರಿಂದ, ವಿಚಾರ ಮಾಡಿ ಯಥಾರ್ಥ ತತ್ವ ಜ್ಞಾನವನ್ನು ಸಂಪಾದಿಸತಕ್ಕದ್ದು ಪ್ರತಿಯೊಬ್ಬ ಮುಮುಕ್ಷುವಿಗೂ ಕರ್ತವ್ಯ ವಾಗಿರುವುದು.

ಆದರೆ ಕೆಲವರು ''ಸ್ವಧರ್ಮೇನಿಧನಂ ಶ್ರೇಯಃ'' ಎಂಬ ಗೀತಾವಾಕ್ಯಕ್ಕೆ ವಿಪರೀತಾರ್ಥವನ್ನು ಗ್ರಹಿಸಿ ಪಿತೃ, ಪಿತಾಮಹಂದಿ ರುಗಳಿಂದ ಪ್ರಾಪ್ತವಾದ ಅದ್ವೈತೋಪಾಸನೆಯನ್ನು ಬಿಡುವುದು ಹೇಗೆಂದು ಶಂಕಿಸುವರು. ಯಜನಯಾಜನಾದಿ ಸ್ವವೃತ್ತಿಗಳಂತೆ ಅದ್ವೈತವು ಬ್ರಹ್ಮದೇವರ ಪರಂಪರೆಯಿಂದ ಬಂದ ಬ್ರಾಹ್ಮಣತತ್ವವಲ್ಲ. ಕಿಂಚ ಅಂಧಪರಂಪರೆಯಿಂದ ಬಂದ ಗೌಡಪಾದರ ಕಾಲದಲ್ಲಿ ನವೀನಜನ್ಮವನ್ನು ಹೊಂದಿರುವ ಉಪಾಸನಾ ಪ್ರಭೇದವೆಂದು ಹೇಳುವುದಕ್ಕೆ ಬೇಕಾದ ಕಾರಣಗಳಿರುತ್ತವೆ. ಅತಿ ಪ್ರಾಚೀನ ಸಂಪ್ರದಾಯವಲ್ಲದಿದ್ದರೂ ತಂದೆಯ ಅಥವಾ ತಾತನ ಮತವಾದುದರಿಂದಲೇ ಅದು ಆಚರಣೀಯವು ಎಂದು ಹೇಳುವುದಾದರೆ ಚೋರಪುತ್ರನಿಗೆ ಚೌರ್ಯವು ಧರ್ಮವಾಗಿಯೂ, ಧೂಮಪಾನ ಮಾಡುವವನ ಪ್ರಪೌತ್ರನಿಗೆ ಧೂಮಪಾನವು ಸ್ವಧರ್ಮವೆಂದೂ, ಪ್ರಾಪ್ತವಾಗಿ ಅಪ್ರಾಮಾಣಿಕವಾದ ಅನಂತ ಆಚಾರಗಳು ಉತ್ಪನ್ನವಾಗಿ ಧರ್ಮವಿಲೋಪವುಂಟಾಗುವುದರಲ್ಲಿ ಸಂಶಯವಿಲ್ಲ. 'ಸ್ವಧರ್ಮೇನಿಧನಂ ಶ್ರೇಯಃ' ಎಂದರೆ ಸ್ವವರ್ಣಾಶ್ರಮೋಚಿತ ಕರ್ಮವನ್ನು ಬಿಡಬಾರದು ಎಂದರ್ಥವು. ಇಲ್ಲಿಯೇ ಬ್ರಾಹ್ಮಣನಿಗೆ ವೇದೋಕ್ತ ಉಪಾಸನೆಯು ದ್ವೈತವೋ ಅದ್ವೈತವೋ ಎಂದು ಪ್ರಶ್ನೆಯು ಬರುವುದು. ಯಥಾರ್ಥವಾದ ವೈದಿಕತತ್ವವೇ ಸ್ವಧರ್ಮ ವೆಂದಾದರೂ ಎನ್ನಿಸುವುದು. ಆಗಲೂ 'ಸ್ವಧರ್ಮೇ ನಿಧನಂ ಶ್ರೇಯಃ' ಎಂದರೆ ವೇದೋಕ್ತ ವಿಷ್ಣುಸರ್ವೋತ್ತಮತ್ವೋಪಾಸನೆ ಎಂಬ ವೈದಿಕ ಧರ್ಮದಿಂದ ಚತುರ್ವರ್ಣದವರೂ ಚ್ಯುತರಾಗಬಾರದು ಎಂದು ಅರ್ಥವನ್ನು ಹೇಳಬಹುದು. ಸ್ಮಾರ್ತಬ್ರಾಹ್ಮಣರು ವೇದವೇದಾಂತ ಪ್ರತಿಪಾದ್ಯನಾದ ವಿಷ್ಣುವಿಗೆ ಸಮ್ಮತವಾದ ದೀಕ್ಷೆಯನ್ನು ಸ್ವೀಕರಿಸಿದರೆ ಜಾತಿ ಕೆಟ್ಟಂತೆ ಆಗುವುದೇ? ವೈದಿಕ ಮತವು ಯಾವುದೆಂಬುದನ್ನು ಪರಾಮರ್ಶೆ ಮಾಡಬಲ್ಲ ಪ್ರಾಜ್ಞರಿಗೆ ಇದು ಎಷ್ಟು ದೊಡ್ಡ ಭ್ರಾಂತಿಯೆಂಬುದು ಸುಲಭವಾಗಿ ತಿಳಿದುಬರುವು ದರಲ್ಲಿ ಸಂಶಯವಿಲ್ಲ.

ಈ ಸಂದರ್ಭದಲ್ಲಿಯೇ ಮತ್ತೊಂದು ವಿಷಯವನ್ನು ನಿರೂಪಿಸಬೇಕಾಗಿರುವುದು. ತತ್ವವಿಚಾರವು ಲೋಕೋಪದ್ರವ ಕರವು; ಇವುಗಳನ್ನು ಜನಸಮುದಾಯದಲ್ಲಿ ಹರಡದೇ ರಹಸ್ಯದಲ್ಲಿ ಕಾಮುಕನು ತನ್ನ ವ್ಯಭಿಚಾರವನ್ನು ಆಪ್ತಮಿತ್ರನಿಗೆ ನಿರೂಪಿಸುವಂತೆ ಉಪದೇಶಮಾಡಬೇಕೆಂದು ಕೆಲವರು ಹೇಳುತ್ತಾರೆ. ಸಾಹುಕಾರನು ನೂತನವಾಗಿ ತನಗೆ ಪ್ರಾಪ್ತವಾದ ದಿವಾಳಿತನವನ್ನು ರಹಸ್ಯದಲ್ಲಿ ತನ್ನ ಪತ್ನಿಗೆ ಅರುಪಿಸುವಂತೆ, ಅವಿವೇಕಿಯು ಗುಹ್ಯವ್ರಣವನ್ನು ವೈದ್ಯನಿಗೆ ಗುಟ್ಟಾಗಿ ಬಿಚ್ಚುವಂತೆ, ಕಷ್ಟಪಟ್ಟು ಚೌರ್ಯದಿಂದ ಪ್ರಾಪ್ತವಾದ ಕಂಠಮಾಲೆಯನ್ನು ಚೋರನು ಅಂಧಕಾರದಲ್ಲಿ ತನ್ನ ಜೊತೆಗಾರನ ಸಂಗಡ ಹಂಚಿಕೊಳ್ಳುವಂತೆ ಬ್ರಹ್ಮತತ್ವೋಪದೇಶ ವನ್ನು ಅತಿಗೋಪ್ಯವಾಗಿ ಸ್ಮಾರ್ತ ಬ್ರಾಹ್ಮಣರು ನೋಡದಿರುವ ಹಾಗೆ, ಕೇಳದಿರುವ ಹಾಗೆ, ಅವರ ಅಭಿಮಾನಭಂಗವು ಬರದ ಹಾಗೆ ಉಪದೇಶ ಮಾಡಬೇಕು. ಎಂದು ಕೆಲವು ನವೀನ ಚತುರರ ನೀತಿಯು ಸಾಕ್ಷಾತ್ಪರಮಹಂಸ ಪರಿವ್ರಾಜಕಾಚಾರ್ಯರಾದ ದ್ವೈತಸಿದ್ಧಾಂತ ಪ್ರತಿಷ್ಠಾಪನಾಚಾರ್ಯರೆಂದು ಅನ್ವರ್ಥ ಬಿರುದಾಂಕಿತರಾದ ಶ್ರೀಮದುತ್ತರಾದಿ ಮಠದ ಸಂಸ್ಥಾನ ಸಾರ್ವಭೌಮ ರಾದ ಶ್ರೀಶ್ರೀಪಾದಂಗಳವರ ಸಮಕ್ಷಮದಲ್ಲಿಯೇ ಇಂಥಾ ಪೂರ್ವಪಕ್ಷವನ್ನು ಒಬ್ಬಿಬ್ಬರು ಮಾಡಿದರು. ಉತ್ತರವನ್ನೂ ಮಹಾಸ್ವಾಮಿಗಳೇ ದಯಪಾಲಿಸಿರುತ್ತಾರಾದ್ದರಿಂದ- ಪುಟ 27 ಮತ್ತು 95-104, ಸಭಾಸಾರಸಂಗ್ರಹ ವಾಲ್ಯೂಂ 1. ನಾವು ವಿಶೇಷವಿಚಾರವನ್ನು ಈಗ ಮಾಡುವುದಿಲ್ಲ. ಇಷ್ಟು ಹೇಳುವುದು ಅವಶ್ಯಕವು. ಜನಮನೋದ್ದೀಪಕವಾಗುವುದೆಂದು ಬ್ರಹ್ಮವಿಚಾರ ವನ್ನು ನಾವು ಮಂದಿಯ ಕಿವಿಗೆ ಹಾಕದೇ ಹೋದರೆ, ಸಕಲರೂ ಚಾರ್ವಾಕ ಮತಾನುಯಾಯಿಗಳಾಗಿ ದಾರಾಪುತ್ರ ಮಿತ್ರಧನ ಗೇಹಾದಿಗಳಲ್ಲಿ ಪ್ರವೃದ್ಧವಾದ ಅಭಿಮಾನದಿಂದ ಪೂರ್ಣರಾಗಿ ಘೋರವಾದ ತಮಸ್ಸಿಗೆ ಬೀಳುವುದು ನಿಶ್ಚಯ. ತತ್ವಜ್ಞಾನಶೂನ್ಯನು ಪಶು ಸಮಾನನು. ಅಂಥ ತತ್ವವಿಜ್ಞಾನವು ವಿಚಾರವಿಲ್ಲದೇ ಉದಯಿಸಲಾರದು. ''ಸ್ವಪಕ್ಷಸಾಧನ ಪರಪಕ್ಷೋಪಲಂಬಾಭ್ಯಾಂ ಹಿ ನಿರ್ಣಯಃ'' ಎಂಬ ಸರ್ವಸಮ್ಮತವಾದ ನ್ಯಾಯಾನುಸಾರವಾಗಿ ದ್ವೈತಿಗಳು ಅದ್ವೈತಮತವನ್ನು ಖಂಡನೆ

ಮಾಡುವುದೂ, ಅದ್ವೈತಿಗಳು ದ್ವೈತಮತವನ್ನು ಖಂಡಿಸುವುದೂ ಸ್ವಮತಸ್ಥಾಪನೆಗೆ ಅವಶ್ಯೋಪಯೋಗಿಯಾದ ಕರ್ತವ್ಯ ವ್ಯಾಪಾರವಾಗಿರುತ್ತದೆ. ಉಭಯಪಕ್ಷದಲ್ಲೂ ವಿಚಾರಕುಶಲರಾದ ಮುಮುಕ್ಷುಗಳು, ನಮ್ಮ ತಾತನ ಮತವೇ ನಮ್ಮ ಮತವು ಇದೇ ಮುಂತಾದ ದುರಭಿಮಾನ ವನ್ನು ಪರಿತ್ಯಜಿಸಿ, ಯುಕ್ತಿಬಲಾಬಲಗಳನ್ನು ವಿಮರ್ಶಿಸಿ ತಮ್ಮ ತಮ್ಮ ಸ್ವಭಾವ, ಬುದ್ಧಿ, ಕರ್ಮಾದ್ಯನುಗುಣವಾದ ಮತವನ್ನು ಸ್ವೀಕರಿಸುವುದು ಉಚಿತವೇ ಹೊರತು ತತ್ವವಿಚಾರವನ್ನು ನಾನು ಮಾಡುವುದಿಲ್ಲ, ವೇದಾಂತೋಪದೇಶವನ್ನು ಬೇಡಿದವರಿಗೆ ನಾನು ಮಾಡುವುದಿಲ್ಲ , ತಿಳಿಯದವರಿಗೆ ತಿಳಿಸಿಕೊಡುವುದಿಲ್ಲ ಇವೇ ಮುಂತಾದ ಉಗ್ರನಿಶ್ಚಯದಿಂದ ಸಹಿತರಾಗಿ ತತ್ವಜ್ಞಾನ ಶೂನ್ಯವಾದ ಮಹಾಗಾಢಾಂಧಕಾರದಲ್ಲಿ ಬೀಳಬೇಕೆಂದು ಇಚ್ಛಿಸಬಾರದು. ಇನ್ನುಮೇಲೆ ದ್ವೈತಿಗಳೂ, ಅದ್ವೈತಿಗಳೂ ಅತ್ಯುಗ್ರವಾದ ಜ್ಞಾನಕಲಹವನ್ನು ಅತಿ ಸೌಜನ್ಯದಿಂದ ನಡೆಯಿಸುತ್ತಾ ಸರ್ಪ, ವ್ಯಾಘ್ರಾದಿ ಕ್ರೂರ ಪ್ರಾಣಿಸಾಮಾನ್ಯವಾದ ವ್ಯಕ್ತಿದ್ವೇಷವನ್ನೂ ಅದರಲ್ಲೂ ಸ್ಮಾರ್ತ ಅಥವಾ ವೈಷ್ಣವ ಸಂಘದ್ವೇಷವನ್ನು ಹೃದಯದಲ್ಲಿ ದೂರದಲ್ಲಿಯೇ ಪರಿತ್ಯಜಿಸುವುದು ಇಹಪರಗಳೆರಡರಲ್ಲಿಯೂ ಅತ್ಯಂತ ಕಲ್ಯಾಣಕರವಾಗಿರುವುದು.

ಯದ್ಯಪಿ ಘನಹೊಂದದ ಒಬ್ಬರು ಶಾಸ್ತ್ರಿಗಳು ನಮಗೆ ತಿಳಿಸಿದಂತೆ, ಅದ್ವೈತಮತವು ಅವೈದಿಕವು, ಅದ್ವೈತೋಪಾಸನೆಯು ನರಕಪ್ರದವು, ಅದ್ವೈತೋಪಾಸಕನ ಕರ್ಮವು ನಿಷ್ಫಲವು ಎಂದು ಸ್ಪಷ್ಟವಾಗಿ ಘೋಷಿಸಿದರೆ ಅದ್ವೈತಿಗಳ ಮನಸ್ಸಿಗೆ ಸಂಕಟವಾಗ ಬಹುದು. ಆದರೆ ಇಲ್ಲಿ ನಿರೂಪಣೆಯಲ್ಲಿ ವೈಚಿತ್ರ್ಯವು ಇರುವುದು. ಕಾಮಾದಿಗಳಿಂದ ಪರಿಪ್ಲುತವಾದ ಹೃದಯವುಳ್ಳವರಾಗಿ ಸ್ವಾರ್ಥ ಸಾಧನೆಯನ್ನು ಉದ್ದೇಶಮಾಡಿ ಸ್ವಕಪೋಲಕಲ್ಪಿತವಾದ ಒಂದು ತತ್ವವನ್ನೇ ಆಧಾರವಾಗಿಟ್ಟುಕೊಂಡು ಒಂದು ಜನಾಂಗದವರು ಮತ್ತೊಂದು ಸಂಘದ ನಡವಳಿಕೆಯನ್ನು ದೂಷಿಸಿದರೆ ಮನಸ್ತಾಪವೂ ಬರುವುದು, ದ್ವೇಷವು ಉತ್ಪನ್ನವಾಗುವುದಕ್ಕೂ ಕಾರಣವುಂಟು ಆದರೆ ಮನುಷ್ಯ ಸಹಜವಾದ ಭ್ರಾತೃವಾತ್ಸಲ್ಯದಿಂದ, ಸ್ವಾರ್ಥೋದ್ದೇಶವಿಲ್ಲದೇ ಉಭಯ ಸಂಪ್ರತಿಪನ್ನವಾದ ಪ್ರಮಾಣಗಳಿಗೆ ವಿರುದ್ಧವಾಗಿ ಪ್ರಾಪ್ತವಾಗಿರುವ ಅತ ಏವ ಅನರ್ಥಕರವಾದ ಜ್ಞಾನ, ಉಪಾಸನ, ಕರ್ಮಾದಿಗಳ ದೋಷವನ್ನು ಅವುಗಳನ್ನು ಬಿಡಿಸಬೇಕೆಂಬ ಕರುಣಾಪೂರ್ಣವಾದ ಹೃದಯದಿಂದ ಉಪದೇಶಮಾಡುವ ವಿವೇಕಿಯು ಹೇಗೆ ದೋಷಿಯಾಗುವನು? ಮಧ್ಯೆ ಮಧ್ಯೇ ವಾಗ್ರಭಸದಲ್ಲಿ ಒಂದೆರಡು ದುರ್ನುಡಿಗಳು ಬಂದರೂ ಪ್ರಾಜ್ಞರು ವಾದದಲ್ಲಿ ದೃಷ್ಟಿಯಿಟ್ಟು ವಿಚಾರಪರರಾಗುವರು.

ವೇದಾದಿ ಪ್ರಮಾಣಗಳಿಗೆ ಸಮ್ಮತವಾದ ಜ್ಞಾನ, ಉಪಾಸನಾ, ಕರ್ಮಗಳು ಯಾವುವು ಎಂದುಪ್ರಶ್ನೆಯು? ದ್ವೈತ ತತ್ವವನ್ನು ಅವಲಂಬಿಸಿದರೆ, ಆಚರಣೀಯವಾದ ಕರ್ಮಾದಿಗಳೂ, ಅದ್ವೈತತತ್ವಾನುಸಾರವಾಗಿ ಪ್ರಾಪ್ತವಾಗುವ ಉಪಾಸನಾದಿಗಳೂ ಪೂರ್ವಪಶ್ಚಿಮದಿಕ್ಕುಗಳಂತೆ ಪರಸ್ಪರ ಅತ್ಯಂತ ವಿರುದ್ಧವಾಗಿರುವುವು. ಯಾವ ಮತಕ್ಕೆ ಸೇರಿದರೂ ಯಾವ ಮತಕ್ಕೂ ಸೇರದಂತೆ ಆಚರಿಸುವ ಮಂದ ಜನರೂ, ಜ್ಞಾನಹೇಡಿಗಳೂ, ಸಮಸ್ತ ಪಂಗಡದಲ್ಲಿಯೂ ಸಹಸ್ರಶಃ ಇರುವರು. ಆದುದರಿಂದಲೇ ಸ್ಮಾರ್ತ ವೈಷ್ಣವ ದ್ವೈತಾದ್ವೈತ ಇತ್ಯಾದಿ ಭೇದಗಳನ್ನು ತಿಳಿಯುವುದಕ್ಕಾಗದಂತೆ ಸಮಾನಾಕಾರವಾದ ವ್ಯವಹಾರಜ್ಞಾನ, ಸ್ತ್ರ್ಯಾದಿ ಉಪಾಸನಾ, ಧನಾರ್ಜನಾದಿ ಕರ್ಮಗಳಿಂದ ಸಹಿತರಾದ ಅನೇಕ ಬ್ರಾಹ್ಮಣರು ಉಭಯಪಕ್ಷದಲ್ಲೂ ಇರುವರು. ಅವರನ್ನು ಉದ್ದಿಶ್ಯಮಾಡಿ ನಾವು ಬರೆಯುವುದಿಲ್ಲ. ಪ್ರಮಾಣಗಳಿಗೆ ಸಮ್ಮತವಾದ ನಿರ್ಣೀತವಾದ ತತ್ವವನ್ನು ಅವಲಂಬಿಸಿ, ನ್ಯಾಯಪ್ರಾಪ್ತವಾಗುವ ಜ್ಞಾನಾನುಸಾರ ವಾಗಿ ಉಪಾಸನೆಯನ್ನು ಮಾಡಿ ತದನುಗುಣವಾಗಿ ಕರ್ಮವನ್ನು ಆಚರಿಸುತ್ತೇವೆಂದು ದೃಢಸಂಕಲ್ಪರಾದ ಧೀರರಾದ ಮುಮುಕ್ಷುಗ ಳಿಗೆ ( ಅಂಥವರೂ ಉಭಯಪಕ್ಷದಲ್ಲಿ ಎಷ್ಟೋ ಜನರಿರುವರು). ದ್ವೈತಾನುಸಾರಿಯಾದ ಜ್ಞಾನೋಪಾಸನಾ ಕರ್ಮಾದಿಗಳು ಇಷ್ಟು ಪ್ರಮಾಣವಿರುದ್ಧವಾಗಿರುವುವು ಮತ್ತು ನಿಷ್ಫ ಲವೂ ಎಂದೂ ಅದ್ವೈತಿಯೂ. ಅದ್ವೈತಾನುಸಾರಿಯಾದ ಜ್ಞಾನೋಪಾಸನಾ ಕರ್ಮಾದಿಗಳು ಇಷ್ಟುಪ್ರಮಾಣಗಳಿಗೆ ವಿರುದ್ಧವಾಗಿರುವುವು ಮತ್ತು ನಿಷ್ಫಲವೆಂದು ದ್ವೈತಿಯೂ ಪ್ರದರ್ಶನ ಮಾಡದೆ ವಾದ ಮಾಡುವುದು ಹೇಗೆ? ಅಂಥಾ ಪ್ರಮಾಣ ಮೂಲಕವಾದ ಯುಕ್ತಿಚಾಲನವು ಯಥಾರ್ಥತತ್ವಜ್ಞಾನಾರ್ಥಿಗಳಾದ ಮುಮುಕ್ಷುಗಳ ಹೃದಯದಲ್ಲಿ ಹೃದ್ರೋಗವನ್ನು ಯಾತಕ್ಕೆ ಉಂಟುಮಾಡುವುದು.?

ದ್ವೈತಾದ್ವೈತ ಕಲಹಸಂರಂಭದಿಂದ ಭೀತರಾದ ಮತ್ತೆ ಕೆಲವರು:- ಪಶುಗಳು- ಹೀಗೆ ಹೇಳುವರು. ದ್ವೈತವೂ ಅನಾದಿಯು. ಅದ್ವೈತವೂ ಅನಾದಿಯು. ಶಂಕರಾಚಾರ್ಯರೂ ದೊಡ್ಡವರು. ಮಧ್ವಾಚಾರ್ಯರೂ ದೊಡ್ಡವರು. ಯದ್ಯಪಿ ಎರಡು ಮತವೂ ಸರಿಯಿಲ್ಲ, ಆದರೆ ಇದು ಸರಿಯೋ ಅದು ಸರಿಯೋ ಎಂದು ನಾವು ತಿಳಿಯುವುದು ಹೇಗೆ? ಇವರು ತಪ್ಪು ಮಾಡಿದರೋ ಅವರು ತಪ್ಪುಮಾಡಿದರೋ ಎಂಬುದನ್ನು ಪರಿಮಿತವಾದ ನಮ್ಮ ಬುದ್ಧಿಯಿಂದ ನಿರ್ಣಯಿಸುವುದು ಅಸಾಧ್ಯವು. ನಮಗೆ ಯಾತಕ್ಕೆ ಈ ಪ್ರತಿಷ್ಠೆಯು? ಎಂದು ಕೆಲವರು ಹೇಳುವರು. ಯದ್ಯಪಿ ಎರಡು ತತ್ವಗಳನ್ನೂ ತಕ್ಕಡಿಯಲ್ಲಿ ಇಟ್ಟು ತೂಕಮಾಡಿ ಅವುಗಳ ಯೋಗ್ಯತೆ ಯನ್ನು ನಿರ್ಣಯಿಸುವುದು ಅಂಗಡಿಯಲ್ಲಿ ಬೆಣ್ಣೆಯನ್ನು ತೂಗುವಷ್ಟು ಸುಲಭವ್ಯಾಪಾರವಲ್ಲ. ಆದರೂ ಪಕ್ಷಪಾತರಹಿತವಾದ ಹೃದಯದಿಂದ ಉಭಯರ ಗ್ರಂಥಗಳನ್ನೂ

ವ್ಯಾಸಂಗಮಾಡಿದರೆ ಅವುಗಳ ಗುಣದೋಷಗಳೂ, ಯಾಥಾರ್ಥ್ಯತಾರತಮ್ಯವೂ ತೋರಿಬರುವುದಿಲ್ಲವೆಂದು ಹೇಳುವುದು ದೈವಾನುಗ್ರಹೀತವಾದ ಬುದ್ಧಿಯುಳ್ಳ ಮಾನುಷಪಾಂಡಿತ್ಯಕ್ಕೇ ಅವಮಾನಕರವು. ಸ್ವತಂತ್ರ ಗ್ರಂಥಗಳನ್ನು ಬರೆಯುವುದು ಕಷ್ಟವು. ಆದರೆ ಮಾಡಿರುವ ಗ್ರಂಥಗಳ ಯೋಗ್ಯತಾಪರಾಮರ್ಶವು ಕಷ್ಟವಾದರೂ ಅಸಾಧ್ಯವಲ್ಲ. ಅಂಗಡಿಯಿಂದ ಪದಾರ್ಥಗಳನ್ನು ತೆಗೆದುಕೊಂಡು ಬಂದು ಒಲೆ ಹೊತ್ತಿಸಿ ಪಾಕಮಾಡುವುದು ದುಃಖಕರವಾದ ಕೆಲಸವು. ಆದರೆ ಮಾಡಿದ ಅಡಿಗೆಯ ರುಚಿಯನ್ನು ನೋಡಿ ಮಾಧುರ್ಯತರತಮಭಾವವನ್ನು ಕಂಡು ಹಿಡಿಯುವ ಕೆಲಸವನ್ನು ಪಡುತರವಾದ ರಸನೇಂದ್ರಿಯವುಳ್ಳ ಅನೇಕ ರಸಜ್ಞರು ಮಾಡುವರು.

ಇದೇ ಪ್ರಸಂಗದಲ್ಲಿ ಮಂದರ ಮನಸ್ಸಿನಲ್ಲಿರುವ ಮತ್ತೊಂದು ದುಷ್ಟ ನಂಬಿಕೆಯ ನಿರ್ಮೂಲತೆಯನ್ನು ವಿವರಿಸಬೇಕಾಗಿದೆ. ಮತವಿಚಾರಕ್ಕೆ ಹೋದರೆ ಯಾವ ಮತವನ್ನೂ ಸರಿಯಲ್ಲ ಎಂದು ಹೇಳಿದರೂ ಬ್ರಹ್ಮಹತ್ಯೆಯು ಬರುವುದು ; ವಾಕ್ಯಾರ್ಥದಲ್ಲಿಯೂ ಕೂಡ ಪರಮಹಂಸರು ಸುಳ್ಳು ಹೇಳಿದರೂ ಪೀಠದ ಗೌರವದಿಂದ ಸಹಿಸಿಕೊಳ್ಳಬೇಕು; ಇಲ್ಲದಿದ್ದರೆ ಬ್ರಹ್ಮಹತ್ಯೆ ದೋಷವು ಬರುವುದು; ಆದುದರಿಂದ ನರಕಪ್ರದವಾದ ಮತದ್ವೇಷ ಮತ್ತು ಸನ್ಯಾಸಿಗಳ ಸಂಗಡ ಹೋರಾಟ ಇವುಗಳಿಗೆ ಆಸ್ಪದವಾದ ದ್ವೈತಾದ್ವೈತ ವಿಚಾರವು ನಮಗೆ ಯಾತಕ್ಕೆ? ಎಂದು ಕೆಲವರು ಹೇಳುವರು. ನಾವು ಸೂಚಿಸಿಯೇ ಇರುತ್ತೇವೆ. ಇದು ಅಸಂಸ್ಕೃತ ಬುದ್ಧಿಗಳಾದ ಭಯವಿಹ್ವಲಿತಚಿತ್ತರಾದ ಮಂದಮತಿಗಳ ಮಾತು. ದಂಡಿನಲ್ಲಿ ಧರ್ಮಯುದ್ಧದಲ್ಲಿ ಸೋದರಮಾವನನ್ನು ಸಂಹರಿಸಿ ದರೂ ದೋಷವಿಲ್ಲ. ಕ್ಷತ್ರಿಯರಿಗೆ ದುಷ್ಟರಾಜರ ಏಳಿಗೆಯಲ್ಲಿ ದ್ವೇಷವೂ, ಧರ್ಮಯುದ್ಧದಲ್ಲಿ ದುರ್ಜನನ ಹನನವೂ ಪುರುಷಾರ್ಥ ಪ್ರಾಪಕವಾದ ಸದ್ಧರ್ಮವು. ಹೀಗೆಯೇ ಬ್ರಾಹ್ಮಣರಿಗೆ ಸ್ವವರ್ಣಾಶ್ರಮೋಚಿತವಾದ ದ್ವೇಷವು ದುರ್ಮತ ದ್ವೇಷವು( ಅವೈದಿಕ ಮತದಲ್ಲಿ ಅಪ್ರಾಮಾಣಿಕತಾ ಬುದ್ಧಿಯು) ಮತ್ತು ಸ್ವವರ್ಣಾಶ್ರಮೋಚಿತವಾದ ಯುದ್ಧವು ವಾಗ್ಯುದ್ಧವು. ಅದರಲ್ಲಿ, ಪ್ರತಿವಾದಿಯಿಂದ ಅಂಗೀಕೃತವಾದ ಮತದ ಅವೈದಿಕತ್ವ ಪ್ರದರ್ಶನವೇ ಧರ್ಮಯುದ್ಧದಲ್ಲಿ ಪುರುಷಾರ್ಥಪ್ರದವಾದ ಹನನವು. ಇದು ವಿಷ್ಣುಪ್ರೀತಿಕರ ವಾದ ಜ್ಞಾನಯಜ್ಞವೆನ್ನಿಸುವುದು. ಸ್ರುಕ್, ಸ್ರುವ, ಯೂಪ, ಪುರೋಡಾಶಗಳಿಂದ ಪ್ರಸಿದ್ಧವಾದ ಕರ್ಮಯಜ್ಞವು ನೆರವೇರುವುದು. ಈ ಜ್ಞಾನಯಜ್ಞಕ್ಕೆ ವೇದಾದಿ ಪ್ರಮಾಣಗಳು ವಿಧ್ಯುಕ್ತವಾದ ಸಾಮಗ್ರಿಗಳು. ಇವುಗಳನ್ನು ಪರಿತ್ಯಾಗಮಾಡಿ ಸ್ವಕಪೋಲಕಲ್ಪಿತವಾದ ವಾಕ್ಯಾರ್ಥವನ್ನು ಮಾಡಿದರೆ ದೋಷವು ಬರುವುದು. ದುರಭಿಮಾನದಿಂದ ಮತ್ತೊಂದು ಮತವನ್ನು ದ್ವೇಷಿಸಿದರೆ ಪಾಪವು ಬರುವುದು. ಪರಮಹಂಸರ ಗೌರವವು ಉತ್ಸವ ಸಮಯದಲ್ಲಿ ಮತ್ತು ಲೌಕಿಕ ಮರ್ಯಾದೆಯ ವಿಷಯಗಳಲ್ಲಿ ಮಾನ್ಯವೇ. ಜ್ಞಾನ ಯುದ್ಧದಲ್ಲಿ ಪೀಠಗೌರವವನ್ನು ನೋಡಿ ದುರ್ಮತಕ್ಕೆ ರುಜುಹಾಕುವವನು ಮತಿಗೆಟ್ಟ ಮೂಢನೇ ಸರಿ. ಮುಂಡಿಸಿದ ತಲೆಯೂ, ಕಾವಿಬಟ್ಟೆಯೂ ವಾಗ್ಯುದ್ಧದಲ್ಲಿ ಖಂಡನೆಗೆ ಪ್ರತಿಬಂಧಕ ಚಿನ್ಹೆಗಳಾದರೆ, ಇನ್ನು ಮೇಲೆ ಸುಳ್ಳು ಮತವನ್ನು ಹರಡಬೇಕೆಂದಿರುವವ ರೆಲ್ಲರೂ ಪ್ರತಿಪಕ್ಷಿಗಳಿಂದ ನಿರಾಕರಣೆಯನ್ನು ತಪ್ಪಿಸಿಕೊಳ್ಳುವ ಉದ್ದಿಶ್ಯ ಒಂದು ಪಾವಲಿಯನ್ನು ಖರ್ಚುಮಾಡಿ ಸನ್ಯಾಸಾಶ್ರಮವನ್ನು ಸ್ವೀಕರಿಸುವುದೇ ಉಪಾಯವೆಂದು ಪ್ರಾಪ್ತವಾಗುವುದು. ಇಂಥವರ ಮೋಸವನ್ನು ವಾಕ್ಯಾರ್ಥದಲ್ಲಿ ಬಯಲು ಮಾಡುವುದು ಉಭಯಪಕ್ಷದ ಬ್ರಾಹ್ಮಣ ಪಂಡಿತರ ಕರ್ತವ್ಯ ಧರ್ಮವಾಗಿರುತ್ತದೆ.

ಆದುದರಿಂದ ತತ್ವವಿಚಾರದಲ್ಲಿ ಆದರಪೂರ್ವಕವಾದ ಅಭ್ಯಾಸವನ್ನೂ, ಪ್ರಾಮಾಣಿಕವಾದ ವೈದಿಕತತ್ವವು ಯಾವುದು ಎಂಬುದರ ವಿಮರ್ಶೆಯನ್ನೂ ಅಭಿಮಾನರಹಿತವಾದ ಹೃದಯದಿಂದ ಪ್ರತಿಯೊಬ್ಬ ಮುಮುಕ್ಷುವೂ ಮಾಡಿ, ಯಥಾರ್ಥವಾದ ಮೋಕ್ಷೋಪಯೋಗಿಯಾದ ಜ್ಞಾನವನ್ನು ಸಂಪಾದಿಸುವುದು ಶಾಸ್ತ್ರೋಕ್ತವಾದ ಧರ್ಮವಾಗಿರುತ್ತದೆಂದು ಸಕಲ ಪ್ರಾಜ್ಞರಿಗೂ ಸಮ್ಮತವಾದ ವಿಷಯವೇ ಆಗಿರುತ್ತದೆ.

ಮತ್ತೊಂದು ವಿಷಯ ಚರ್ಚೆಯನ್ನು ಸಂಗ್ರಹವಾಗಿ ನಿರೂಪಿಸಬೇಕಾಗಿರುವುದು. ವಿಷಯಾಸಕ್ತಿಯಿಂದಲೂ, ಲೌಕಿಕ ದುರ್ವಾರ್ತೆಗಳಿಂದಲೂ ಪರಿಪೂರ್ಣವಾದ, ಅಂಜನಾದ್ರಿಗಿಂತಲೂ ಹೆಚ್ಚು ಕಪ್ಪಾದ ಹೃದಯವುಳ್ಳ ಕೆಲವು ಮೂಢರು ''muffs of the first water'' ಎಂದು ಉಪಾಧ್ಯಾಯ ರಾಮೇಶ್ವರೈಯ್ಯನವರು ಕರೆಯುತ್ತಿದ್ದರು. ಹೀಗೆ ಹೇಳುವರು:- ''ಸುಮ್ಮನೇ ಇರಬಾರದೇ? ಈ ಸ್ಮಾರ್ತ ವೈಷ್ಣವರು ಯಾತಕ್ಕೆ ಕಚ್ಚಾಡುವರು? ಲೋಕಶಾಂತಿಭಂಗಕರವಾದ ಈ ಕಲಹಪ್ರವರ್ತಕರಿಬ್ಬರಿಗೂ ಬುದ್ಧಿಯಿಲ್ಲ. ಅವರವರ ಮತವು ಅವರವರಿಗೆ ಹೆಚ್ಚು. ದ್ವೈತಿಗಳೂ ಅದ್ವೈತಿಗಳೂ ಒಬ್ಬರನ್ನು ಒಬ್ಬರು ಖಂಡನೆ ಮಾಡದೆ ತೆಪ್ಪಗಿರುವುದು ನ್ಯಾಯವು.'' ಹೀಗೆ ಉಭಯಪಕ್ಷದಲ್ಲೂ ಕೆಲವು ವಿಮೂಢರು ಸಮಸ್ತದ್ವೈತಾದ್ವೈತವಿಚಾರದಲ್ಲಿ ಪ್ರವೃತ್ತರಾದವರೂ ಅನ್ಯೋಪದ್ರವಕರವಾದ ವಾಕ್ಯಾರ್ಥದಲ್ಲಿ ಪ್ರವಿಷ್ಟರಾದುದರಿಂದ ತಪ್ಪುಮಾಡಿದವರೆಂದು, ತಾವು ಲೋಕೋತ್ತರ ಪ್ರಾಜ್ಞರಂತೆ ಅರೆಗಣ್ಣಿನಿಂದ ಆಕಾಶವನ್ನು ನೋಡುತ್ತಾ, ಕತ್ತನ್ನು ಸೊಟ್ಟಮಾಡಿಕೊಂಡು, ಮುಖವನ್ನು ಗಂಟುಹಾಕಿಕೊಂಡು, ಕೋಣನಂಥಾ ಮತ್ತೊಬ್ಬ ಮೂಢಮಿತ್ರನ ಸಂಗಡ ನಿರ್ಣಯವನ್ನು ಹೇಳುವರು.

ಉಭಯಪಕ್ಷದಲ್ಲೂ ಇರುವ ಮತ್ತೆ ಕೆಲವರು ತಮ್ಮ ಅಂಗಾರ ಹೃದಯವನ್ನು ಈ ಪ್ರಕಾರದ ಮಾತುಗಳಿಂದ ಪ್ರದರ್ಶಿಸುವರು. ''ಹಾಗಲ್ಲ ಕಣಯ್ಯಾ! ಇದರಲ್ಲಿ ಮೊದಲು ಬೈದವರದ್ದು ತಪ್ಪು. ಅವರನ್ನು ಛಡಿಯಿಂದ ಹೊಡೆದು ಗಲ್ಲಿಗೆ ಏರಿಸಬೇಕು. ಆಗ ಈ ಪುಂಡಾಟವೆಲ್ಲಾ ನಿಂತು ಹೋಗುತ್ತೆ ನೋಡು''.

ತತ್ವವಿಚಾರವನ್ನು ಹೇಳನಮಾಡಿ, ಅವರನ್ನು ನಿಲ್ಲಿಸಬೇಕೆಂದು ಕೋರಿ, ಮೌಢ್ಯದಿಂದ ಕೆಲವು ಸ್ಮಾರ್ತರೂ, ಕೆಲವು ವೈಷ್ಣವರೂ ಅಲ್ಪವೈದಿಕತನದಿಂದ ಸಹಿತರಾಗಿ, ಸ್ವಸ್ವಮತದಲ್ಲಿ ಆಗ್ರಹಮಾತ್ರವನ್ನು ಹೊಂದಿ, ಕಾರಣಪರ್ಯಾಲೋಚನೆಯಲ್ಲಿ ಅಶಕ್ತರಾದ ಉಭಯಭ್ರಷ್ಟರು- ಈ ಪ್ರಕಾರವಾಗಿ ಅಲ್ಲಿ ಇಲ್ಲಿ ಚರ್ಚೆಯನ್ನು ನಡೆಸುತ್ತಿರುವುದನ್ನು ನಾವು ಕೇಳಿದ್ದೇವೆ. ಈ ರೀತಿಯಾಗಿ ಆಲೋಚನೆ ಮಾಡಿದರೆ ಮೊದಲನೆಯವರ ಗುಂಪಿನವರ ಅಭಿಪ್ರಾಯದಲ್ಲಿ ದ್ವೈತವು ಸರಿಯೋ ಅದ್ವೈತವು ಸರಿಯೋ ಎಂದು ವಾಕ್ಯಾರ್ಥಕ್ಕೆ ಪ್ರವಿಷ್ಟರಾದವರೆಲ್ಲರೂ ಲೋಕಶಾಂತಿನಾಶಕರಾದ ದುರ್ಜನರೇ! ತತ್ವವಿಚಾರಕ್ಕೆ ಭಯಪಟ್ಟು ಸುಪ್ಪತ್ತಿಗೆಯ ಮೇಲೆ ಸರ್ವದಾ ಸುಖಶಯ್ಯೆಯಲ್ಲಿ ಮಗ್ನನಾದ ಪಾಪಿಯು ಜನರುಗಳ ಮನಃಶಾಂತಿ ಭಂಗವನ್ನು ಮಾಡದುದರಿಂದ ಬಹುಗುಣಭರಿತನು. ಇವರುಗಳ ಅಭಿಪ್ರಾಯದ ರೀತಿಯಲ್ಲಿ ಶಂಕರಾಚಾರ್ಯರೇ ಮೊದಲಾದ ಸಕಲ ಮತಸ್ಥಾಪಕರೂ ಬಹು ಕೆಟ್ಟವರೇ. ಈಗಲೂ ಮತ ವಿಚಾರಕ್ಕೆ ಪ್ರವರ್ತಿಸಿದ ಮುಮುಕ್ಷುಗಳು ಪರಮತ ಖಂಡನೆಯಲ್ಲಿ ಪ್ರವಿಷ್ಟರಾಗಿ ಜನರುಗಳಿಗೆ ನಿಜತತ್ವಬೋಧನೆಯಲ್ಲಿ ಆಸಕ್ತರಾದರೆ ಅವರೂ ಸಹ ಕೆಟ್ಟವರೇ. ಈ ದುಷ್ಟವಾದವು ಪಶುಪ್ರಾಣಿಗಳಿಗೆ ಸಮ್ಮತವೆಂದು ನಾವು ಬೇರೆ ಹೇಳಬೇಕಾಗಿಲ್ಲ.

ಕಲಹಕ್ಕೆ ಮೊದಲು ಆರಂಭಮಾಡಿದವರು ತಪ್ಪುಮಾಡಿದರೆಂದು ಹೇಳುವ ದ್ವಿತೀಯ ಪಕ್ಷದ ವಾದಿಗಳೂ ಪೂರ್ವೋಕ್ತ ದೂಷಣೆಗಳಿಗೆ ಭಾಗಿಗಳೇ ಆಗಿರುವರು. ಇವರ ರೀತಿಯಲ್ಲಿ ಶಂಕರಾಚಾರ್ಯರು ಮೊದಲು ಬರೆದುದರಿಂದ ಮೊದಲು ತಪ್ಪು ಮಾಡಿದವರೆಂದೂ, ರಾಮಾನುಜಾಚಾರ್ಯರು ಅವರಿಗೆ ಉತ್ತರರೂಪವಾಗಿ ಖಂಡನೆ ಮಾಡಿದುದರಿಂದ ಅವರದ್ದು ನ್ಯಾಯ ವೆಂದೂ ಪ್ರಾಪ್ತವಾಗುವುದು. ಶಂಕರಾಚಾರ್ಯರಿಗಿಂತ ಪೂರ್ವದಲ್ಲಿ ದ್ವೈತವನ್ನು ಬರೆದವರು ಅವರಿಗಿಂತಲೂ ತಪ್ಪುಮಾಡಿದವರು ಇತ್ಯಾದಿ ರೀತಿಯಾಗಿ ಪ್ರಾಪ್ತವಾಗುವುದು. ಪ್ರಕೃತದಲ್ಲೂ ಸಹ ''ಮಾಯಾವಾದ ಮಚ್ಛಾಸ್ತ್ರಂ ಪ್ರಚ್ಛನ್ನಂ ಬೌದ್ಧಮುಚ್ಯತೇ'' ಎಂಬ ಪುರಾಣವಾಕ್ಯವನ್ನು ಉದಾಹರಿಸಿ ಯುಕ್ತಿಯಿಂದ ಅದ್ವೈತಮತವು ಪ್ರಚ್ಛನ್ನ ಬೌದ್ಧಮತವೆಂದು ತೋರಿಸಿದ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಹೆಚ್ಚು ತಪ್ಪುಮಾಡಿದವರು; ನಂತರ ಕ್ಷಮಾಪಣೆಯನ್ನು ಬಲಾತ್ಕರಿಸಿ ಬರೆಯಿಸಿಕೊಂಡ ಲೋಕೋತ್ತರಪ್ರಜ್ಞರಾದ ಕಾಲೇಜು ಪತ್ರಿಕಾ ಸಂಪಾದಕ ಸದಸ್ಯರೇ ಮೊದಲಾದ ತತ್ವಭೀರುಗಳು ಸ್ವಲ್ಪ ತಪ್ಪುಮಾಡಿದವರು; ನಂತರ ದ್ವೈತಸಿದ್ಧಾಂತ ವಿಚಾರವನ್ನು ರಚಿಸಿದ ಜಹಗೀರುದಾರ್ರು ನಾರಾಯಣಾಚಾರ್ಯರು-ಶ್ರೀಮದುತ್ತರಾದಿಮಠದ ಶ್ರೀಪಾದಂಗಳವರೇ ಎಂದು ಹೇಳಬಹುದು- ಕಲಹವನ್ನು ಕೆಣಕಿದವರು. ನಂತರ ಸಾಂಬಶಾಸ್ತ್ರಿಗಳೂ, ಹರತೀ ಆಚಾರ್ರೂ ಕೆಮ್ಮಣ್ಣುಕಟ್ಟಿ ಮೇಲೆ ಕ್ರಮವಾಗಿ ಅದ್ವೈತ-ದ್ವೈತಪಕ್ಷವನ್ನು ವಹಿಸಿಕೊಂಡು ಜಟ್ಟಿ ಕಾಳಗವನ್ನು ಮಾಡಿದವರು. ಅಭಿಮಾನಿಗಳಾದ ಸ್ಮಾರ್ತವೈಷ್ಣವರು ನಮ್ಮ ಜಟ್ಟಿಯು ಗೆಲ್ಲುವನು, ನಮ್ಮ ಜಟ್ಟಿಯು ಗೆಲ್ಲುವನು ಎಂದು ಷರತ್ತು ಕಟ್ಟಿ ಜಿದ್ದಿನಿಂದ ತಮಾಷೆಗಿರಿಯನ್ನು ನೋಡಿದವರು.

ಹೀಗಿರುವುದರಿಂದ ಪ್ರಥಮ ಪ್ರವರ್ತಕರೆಂದು ಪಂಡಿತರತ್ನರನ್ನು ಬೈಯ್ಯುವವರು ಕೆಲವರು. ಏನೋ ಬರೆದುದು ಆಗಿಹೋಯಿತು ಎಂದು ಸುಮ್ಮನಿರಲಾರದೇ ನೀತಿ ವಿರುದ್ಧವಾದ ಕ್ಷಮಾಪಣೆ ಪತ್ರಿಕೆಯನ್ನು ಬರೆಯಿಸಿಕೊಂಡುದದಕ್ಕಾಗಿ ಕಾಲೇಜು ಪತ್ರಿಕೆಸಂಪಾದಕರನ್ನು ಬೈಯ್ಯುವವರು ಕೆಲವರು. ಬಾದರಾಯಣರಿಗೆ ದ್ರೋಹರೂಪವಾದ ಅತಏವ ಕಲಹಕಾರಣವಾದ ದುಷ್ಟಕ್ಷಮಾಪಣೆಯನ್ನು ಹೇಡಿತನದಿಂದ ಬರೆದುಕೊಟ್ಟ ಪಂಡಿತರತ್ನರದ್ದೇ ಇಷ್ಟೂ ಹಾವಳಿ ಎಂದು ನಿರ್ಧರಿಸಿ ಅವರನ್ನು ಬಯ್ಯುವವರು ಕೆಲವರು. ತಪ್ಪು ಆಗಿಹೋಯಿತು. ಕ್ಷಮಾಪಣೆಯನ್ನು ಕೇಳಿಸಿಕೊಂಡದ್ದು ಆಗಿಹೋಯಿತು. ಮಧ್ಯೆ ಉತ್ತರದಿಕ್ಕಿನಿಂದ ದ್ವೈತಸಿದ್ಧಾಂತ ವಿಚಾರವು ಗುಡುಗಿನಂತೆ ಯಾತಕ್ಕೆ ಬಂತು ಎಂದು ಕೆಲವರು ಬೈಯ್ಯುವರು. ಯಾತಕ್ಕೆಂದರೆ, ಕೀಚಕನು ದ್ರೌಪದಿಯನ್ನು ಕೆಣಕಿದನು; ತನ್ನ ಅಪರಾಧಕ್ಕಾಗಿ ಪ್ರಾಣವನ್ನೊಪ್ಪಿಸಿ ಸತ್ತೇಹೋದನು. ಅನಂತರ ಕೈಯಲ್ಲಿ ಉನ್ನತ ವೃಕ್ಷವನ್ನು ಹಿಡಿದುಕ್ಕೊಂಡು ಕ್ಷುಲ್ಲಕ ಕೀಚಕರನ್ನು ನೆಲಕ್ಕೆ ಅಪ್ಪಳಿಸಿದ ಭೀಮನಂತೆ 'ದ್ವೈತಸಿದ್ಧಾಂತ ವಿಚಾರವು' ರಂಗಭೂಮಿಗೆ ಇಳಿಯಿತು. ವಿರಾಟನಗರಿಯನ್ನು ಮುತ್ತಿಗೆ ಹಾಕಿದ ದುರ್ಯೋಧನಾದಿಗಳ ಸೇನೆಯಂತೆಯೂ ಉತ್ತರಗೋಗ್ರಹಣದ ಯುದ್ಧದಂತೆಯೂ ಇತರ ಖಂಡನ ಭಂಜನ, ಚಪೇಟಿಕಾ ತಾಂಡವಾದಿಗಳೆಲ್ಲವೂ ಗಡಿಬಿಡಿಯನ್ನು ವೃದ್ಧಿಮಾಡುವುವು. ಯಾವುದು ಪ್ರಥಮವೆಂದು ಬೈಯ್ಯೋಣ ಎಂದುಕೆಲವರು ಚಿಂತಿಸುವರು.

ನಾವು ಒಂದು ಲೋಕಸಮ್ಮತ ನ್ಯಾಯವನ್ನು ಸೂಚಿಸುವೆವು. ಈ ರೀತಿಯಾದ ಉಭಯಪಕ್ಷದಲ್ಲಿರುವ ವಾದಿಗಳೂ ಕ್ಷುದ್ರಜನರು.

ಇವರಲ್ಲಿ ಕೆಲವರು ಏನೂ ತಿಳಿಯದ ಮೂಢರು. ಅವರನ್ನು ಕೃಪೆಯಿಂದ ಮನ್ನಿಸಿ, ಸಕಲ ಲೌಕಿಕ ವೈದಿಕರೂ ಮೋಕ್ಷೋಪಯೋಗಿಯಾದ ತತ್ವವಿಚಾರವನ್ನು ಬಿಡದೆ, ದ್ವೈತಾದ್ವೈತಕಲಹವನ್ನು ಆರಂಭಿಸಿದವರಿಗೂ, ಮುಂದುವರೆಸಿ ದವರಿಗೂ ಕೃತಜ್ಞರಾಗಿ ವಾಕ್ಯಾರ್ಥ ವಿಚಾರಕ್ಕೆ ಅವಕಾಶವನ್ನುಂಟುಮಾಡಿದ ಗುರುದೇವತೆಗಳಿಗೆ ವಂದನೆಗಳನ್ನು ಅರ್ಪಿಸಿ, ಉಭಯರ ಗ್ರಂಥಪರಾಮರ್ಶವನ್ನು ಮಾಡಿ ಯಾರು ಸರಿಯಾಗಿ ಬರೆದಿರುತ್ತಾರೆ, ಯಾರು ಸುಳ್ಳು ಬರೆದಿರುತ್ತಾರೆ ಎಂದು ಯುಕ್ತಿ ಬಲಾಬಲವನ್ನು ಮಾಡುವುದಕ್ಕೆ ಆರಂಭಿಸಬೇಕು. ಆದುದರಿಂದ ಈ ಕಲಹದಲ್ಲಿ ಮೊದಲು ಆರಂಭಿಸಿದವರು ತಪ್ಪು ಮಾಡಿದವರಲ್ಲ ಎರಡನೆಯಸಾರಿ ಬರೆದವರೂ ತಪ್ಪು ಮಾಡಿದವರಲ್ಲ. ಮತದ್ವೇಷದಿಂದ ಗುದ್ದಾಡಿದವರೂ ತಪ್ಪುಮಾಡಲಿಲ್ಲ. ಇವರೆಲ್ಲರೂ ದ್ವೈತಾದ್ವೈತ ತತ್ವಗಳನ್ನು ತಿಳಿಯಬೇಕೆಂಬ ಬುಭುತ್ಸುಗಳಿಗೆ ಅನುಕೂಲಮಾಡಿದವರು. ಆದರೆ ಈ ರೀತಿ ಬರೆದವರಿಗೆಲ್ಲಾ ಲೋಕೋಪಕಾರವನ್ನು ಮಾಡಬೇಕೆಂಬ ಉದ್ದೇಶವಿರಲಿಲ್ಲ. ಆದುದರಿಂದ ಅವರುಗಳಿಗೆ ಪುಣ್ಯಹಾನಿಯುಂಟು. ಆದರೆ ತತ್ವಾರ್ಥಿಗಳಾದ ನಮಗೆ, ಜ್ಞಾನವಿಲ್ಲದೇ ಪೈರಿನ ಮೇಲೆ ಬೀಳುವ ಮಳೆಯೂ ಉಪಕಾರಿಯಾಗಿರುವಂತೆ, ಇವರುಗಳ ಕಲಹವೂ ಜ್ಞಾನವೃದ್ಧಿಗೆ ಕಾರಣವಾಗಿ ಉಪಕಾರವನ್ನೇ ಮಾಡಿರುವುದು. ''ವಾದೇ ವಾದೇ ಜಾಯತೇ ತತ್ವಬೋಧಃ'' ಎಂಬ ಸುಪ್ರಸಿದ್ಧ ವಚನವೂ ಈ ವಿಷಯದಲ್ಲಿ ಆಧಾರವಾಗಿರುತ್ತದೆ.

ಹಾಗಿದ್ದರೂ ಯಾರೋ ಒಬ್ಬರು ತಪ್ಪಿರುವರು, ಪ್ರಥಮಾರಂಭವನ್ನು ಮಾಡಿದವರು ತಪ್ಪು ಎಂದು ಹೇಳುವುದು ಕರ್ಮಮಾರ್ಗದಲ್ಲಿ ಯುಕ್ತವಾಗಿರುವುದು. ಜ್ಞಾನಮಾರ್ಗದಲ್ಲಿ ಮೊದಲು ಘನವಾದ ಮಂಜನ್ನು ಕರಗಿಸುವಂಥಾ ಅಗ್ನಿಯನ್ನು ಸಂಯೋಗ ಮಾಡಿದವರು ದೊಡ್ಡವರು. ಗ್ರಂಥಕರ್ತರುಗಳಲ್ಲಿ ಮೊದಲು ಬರೆದವರು ತಪ್ಪುಮಾಡುವವರು ಎಂಬ ನಿರ್ಣಯವು ಅನ್ಯಾಯವು; ಸುಳ್ಳು ಬರೆಯುವವರು ತಪ್ಪುಮಾಡಿರುವರು ಎಂಬುದು ನ್ಯಾಯವಾದ ನಿರ್ಣಯವು. ದ್ವೈತವಾದಿಗಳಲ್ಲಿ ಮತ್ತು ಅದ್ವೈತವಾದಿಗಳಲ್ಲಿ ಯಾರು ಪ್ರಾಮಾಣಿಕವಾದ ವಾಕ್ಯಾರ್ಥವನ್ನು ರಚಿಸಿರುವರೋ ಅವರು ನ್ಯಾಯವನ್ನವಲಂಬಿಸಿದವರು. ಅಪ್ರಾಮಾಣಿಕವಾದ ವಾಕ್ಯಾರ್ಥಗಳನ್ನು ಮಾಡಿ ಜನರುಗಳ ಮನಸ್ಸನ್ನು ಕೆಡಿಸುವ ಪಾಮರರು ಮೊದಲು ಬರೆದರೂ ಪಾಪಿಗಳೇ. ತುದಿಯಲ್ಲಿ ಬರೆದರೂ ಪಾಪಿಗಳೇ. ಅವರ ಮೈಯೆಲ್ಲಾ ವಿಷಪೂರ್ಣವೇ. ಅವರು ಯಾವಾಗ ಬರೆದರೂ ಲೋಕನಾಶವೇ.

ಆದುದರಿಂದ ಪ್ರಕೃತದಲ್ಲಿ ದ್ವೈತಾದ್ವೈತವಾಕ್ಯಾರ್ಥದಲ್ಲಿ ಅಶಕ್ತರಾದ ಕೆಲವು ವೈದಿಕಾಭಾಸರಾದ ಹೇಡಿಗಳು ಪರಪಕ್ಷದವರು ಮಾಡಿದ ತಮ್ಮ ಮತದ ಖಂಡನೆಗೆ ಪ್ರತಿಭಟಿಸಿ ಯುಕ್ತಿಗಳನ್ನು ಬರೆಯಲಾರದೇ, ವಿನೀತರಾಗಿ ತಮ್ಮ ಅಜ್ಞತೆಯನ್ನೂ ಒಪ್ಪಿಕೊಳ್ಳ ಲಾರದೆ, ಅಥವಾ ಪರಪಕ್ಷವನ್ನೇ ಪ್ರಾಮಾಣಿಕವಾದರೂ ಅವಲಂಬಿಸದೇ, ದುರಭಿಮಾನದಿಂದ ಜ್ಞಾನಕಲಹವನ್ನು ವ್ಯಕ್ತಿದ್ವೇಷ ಮತ್ತು ಸಂಘದ್ವೇಷ ಇವುಗಳಲ್ಲಿ ಪರ್ಯವಸಾನವನ್ನು ಹೊಂದಿಸಿ, ಏನೂ ತಿಳಿಯದ ಸಾಧುಗಳಾದ ಲೌಕಿಕರ ಮನಸ್ಸಿನಲ್ಲಿ ಸಂಘದ್ವೇಷ ವೆಂಬ ಕಾಡುಗಿಚ್ಚನ್ನು ಹಚ್ಚಿಡುವರು. ಇನ್ನು ಮೇಲೆ ಸಕಲ ಸ್ಮಾರ್ತವೈಷ್ಣವ ಲೌಕಿಕರು ಈ ಕ್ಷುದ್ರ ವೈದಿಕಾಭಾಸರ, ಸ್ವಮತದಲ್ಲಿ ದುರಭಿಮಾನಮೂಲಕವಾದ ಇಂಥಾ ಕಪಟ ಯತ್ನಗಳಿಗೆ ವಶರಾಗದೇ ಯಥಾರ್ಥತತ್ವನಿರ್ಣಯ ರೂಪವಾದ ಕಾರ್ಯದಲ್ಲಿ ಪರಸ್ಪರ ಸೌಜನ್ಯದಿಂದ ಪ್ರವರ್ತರಾಗಬೇಕು.

ಇನ್ನು ಮೇಲೆ ಪ್ರವೃದ್ಧವಾದ ತತ್ವಯುದ್ಧಗಳು ವ್ಯಕ್ತಿದ್ವೇಷರಹಿತವಾಗಿ ರಾಜಧಾನಿಯಲ್ಲಿ ಪ್ರವರ್ತಿಸುವುದನ್ನು ನೋಡ ಬೇಕೆಂದು ನಮ್ಮ ಕುತೂಹಲವಿರುವುದು. ಅಭಿನವಶಂಕರಾಲಯದಲ್ಲಿ ಆಹೂತರಾದ ವೈಷ್ಣವ ಪಂಡಿತರು ಉತ್ತಮ ಸಭಾಪತಿಗಳ ಅಧ್ಯಕ್ಷತೆಯಲ್ಲಿ ಅದ್ವೈತತತ್ವವನ್ನು ಸಹೃದ್ಭಾವದಿಂದ ಖಂಡಿಸಬೇಕು. ಹಾಗೆಯೇ ಉತ್ತರಾದಿ ಮಠದಲ್ಲಿ ಸ್ಮಾರ್ತಪಂಡಿತರು ದ್ವೈತಮತವನ್ನು ಉತ್ತಮ ಸಭಾಪತಿಗಳ ಸನ್ನಿಧಾನದಲ್ಲಿ ಖಂಡಿಸಬೇಕು. ಸಭಿಕರು ಪಕ್ಷಪಾತವಿಲ್ಲದೇ ನಿಜತತ್ವವನ್ನು ವಾಕ್ಯಾರ್ಥ ಪರಾಮರ್ಶೆಯಿಂದಲೇ ನಿರ್ಣಯಿಸಿಕೊಳ್ಳುವುದಕ್ಕೆ ಅವಕಾಶವನ್ನು ಹೊಂದಬೇಕು. ಇದು ನನ್ನ ಇಚ್ಛೆಯು; ಅಭೀಷ್ಟಪ್ರಾರ್ಥನೆಯು.

ತತ್ವನಿರ್ಣಯೋದ್ದೇಶಕವಾದ ಇಂಥಾ ಸಂಘಗಳನ್ನು ಏರ್ಪಡಿಸಿಕೊಂಡು ಮುಮುಕ್ಷುಗಳಾದ ಸ್ಮಾರ್ತವೈಷ್ಣವರೆಲ್ಲರೂ ಅನ್ಯೋನ್ಯರಾಗಿ ಒಂದೇ ಸಭೆಯಲ್ಲಿ ಕಲೆತು, ವಾದಿ ಪ್ರತಿವಾದಿ ಭಾವಗಳಿಂದ ವಾಕ್ಯಾರ್ಥ ವಿಚಾರಗಳನ್ನು ನಡೆಯಿಸಿ, ದಧಿಯಿಂದ ನವನೀತವನ್ನು ತೆಗೆಯುವಂತೆ ನಿಜತತ್ವವನ್ನು ವಾದದಲ್ಲಿ ಮಥನಮಾಡಿ, ವಿಚಾರದಿಂದ ನಿರ್ಣಯಿಸಿ, ಪ್ರಾಮಾಣಿಕವಾದ ತತ್ವವನ್ನು ಅವಲಂಬಿಸಿ ಉಪಾಸನಾದಿಗಳಿಂದ ಪರಬ್ರಹ್ಮನ ಪ್ರಾಪ್ತಿರೂಪವಾದ ಮೋಕ್ಷವೆಂಬ ಮಹಾಪುರುಷಾರ್ಥಕ್ಕೆ ಪಾತ್ರರಾಗಬೇಕೆಂದು ವಿನಯದಿಂದ ಪ್ರಾರ್ಥಿಸಿ, ಈ ಗ್ರಂಥವನ್ನು ವಾಚಕರ ಪರಾಂಬರಿಕೆಗೆ ಸಮರ್ಪಿಸಿರುತ್ತೇವೆ. ಶ್ರುತಿಯೂ ಹೇಳುವುದು

ಇಹಚೇದವೇದೀತಥಸತ್ಯಮಸ್ತಿ। ನ ಚೇದಿಹಾವೇದಿನ್ಮಹತೀ ವಿನಷ್ಟಿಃ॥

ಅರ್ಥವು:- ಇಲ್ಲಿ(ವಿಚಾರ ಮಾಡಿ) ಪರಬ್ರಹ್ಮನನ್ನು ತಿಳಿದರೆ ಅನಂತರ ಕಲ್ಯಾಣವುಂಟು. ಇಲ್ಲಿ ಪರಬ್ರಹ್ಮನನ್ನು ವಿಚಾರಮಾಡಿ, ತಿಳಿಯದಿದ್ದರೆ,

ಮಹತೀವಿನಷ್ಟಿಃ ಎಂದರೆ ಭಯಂಕರವಾದ ಅನರ್ಥವು ಪ್ರಾಪ್ತವಾಗುವುದು.

ಶ್ರೀಮಧ್ವಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು

ನಮೋಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯಚ। ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋನಮಃ॥

ಹೆಚ್. ಸುಬ್ಬರಾವ್.

## ಗ್ರಂಥಕರ್ತರ ಬಿನ್ನಹವು.

''ಸಾಂಬಶಾಸ್ತ್ರಿಗಳ ಗ್ರಂಥಕ್ಕೆ ಹರತೀ ಆಚಾರ್ರು ಜವಾಬುಕೊಡುವುದು ಉಚಿತವು. ನಿಮ್ಮಂಥವರು ಈ ಕೆಲಸದಲ್ಲಿ ಉದ್ಯುಕ್ತರಾದದ್ದು ಯಾತಕ್ಕೆ? ಎಂದುಪ್ರಿಯಮಿತ್ರರು ನಮ್ಮನ್ನು ಕೇಳಿರುವರು. ಅವರು ಸೂಚಿಸುವ ಅಭಿಪ್ರಾಯವು ಉಚಿತವೇ. ಚಪೇಟಿಕೆಗೆ ಉತ್ತರ ಕೊಡುವುದು ಬಲಿಷ್ಠನಾದ ತುರುಷ್ಕನ ವ್ಯಾಪಾರವು. ಅಂಥ ಉತ್ತರವನ್ನು ಕೊಡುವುದು ನಮ್ಮ ಸ್ವಭಾವಕ್ಕೆ ವಿರುದ್ಧವಾಗಿರು ವುದು. ಆದುದರಿಂದ ನಾವು ಆತ್ಮರಕ್ಷಣಾರ್ಥವಾಗಿ ಶಾಸ್ತ್ರಿಗಳನ್ನು ಸ್ವಲ್ಪ ಗಳಹಸ್ತಿಕೆಯಿಂದ ನೂಕಿ, ಬ್ರಾಹ್ಮಣಧರ್ಮವಾದ ತತ್ವವಿಮರ್ಶೆಯಲ್ಲಿ ಧೈರ್ಯವಾಗಿ ಆಸಕ್ತರಾಗಿಬಿಟ್ಟೆವು. ಇಷ್ಟೂ ಸಹ ನಮ್ಮ ಸ್ವಭಾವಕ್ಕೆ ಸಮಾನವಾದ ವ್ಯಾಪಾರವಲ್ಲವೆಂಬುದು ಸತ್ಯವು. ಆದರೂ ಪುತ್ರವಾತ್ಸಲ್ಯದಿಂದ ವೃದ್ಧನಾದ ತಂದೆಯು ಶಿಶುವಿನ ತೊದಲು ನುಡಿಗಳನ್ನನುಕರಿಸಿ ಅವನಿಗೆ ಮಗ್ಗಿಯನ್ನು ಕಲಿಸುವನು. ಪುರುಷಾರ್ಥಪ್ರಾಪ್ತಿಗಾಗಿ ದೊಡ್ಡಮನುಷ್ಯರು ಒಮ್ಮೊಮ್ಮೆ ಸಾಮಾನ್ಯವಾದ ಒಳ್ಳೆಯ ವ್ಯಾಪಾರವನ್ನೂ ಸಹ ಮಾಡಬೇಕಾಗಿರುವುದು. ಹೀಗೆಯೇ ಜನಸಂಘದಲ್ಲಿ ಕ್ಷುದ್ರವ್ಯಾಜ್ಯಗಳ ಪರಿಹಾರಕ್ಕಾಗಿ ಮತ್ತು ಶಾಸ್ತ್ರಿಗಳ ಗ್ರಂಥದಿಂದುಂಟಾದ ವೈಷ್ಣವರ ಭ್ರಾಂತಿ ಪರಿಹಾರಾರ್ಥವಾಗಿ ಅವರ ಪುಸ್ತಕದ ಹಾಳೆಗಳಲ್ಲಿರುವ ಅನೇಕ ವಿಷಯಗಳಲ್ಲಿ ಚರ್ಚೆಯನ್ನು ನಡೆಸಿರುತ್ತೇವೆ. ಆದರೆ ವಿಶೇಷವಾಗಿ ಅದ್ವೈತ ತತ್ವವಿಮರ್ಶೆಯಲ್ಲಿಯೇ ದೃಷ್ಟಿಯನ್ನಿಟ್ಟಿರುತ್ತೇವೆ.

ಸಾಂಬಶಾಸ್ತ್ರಿಗಳು ಬರೆದಿರುವಂಥಾ ಬೈಯುವ ಗ್ರಂಥಗಳನ್ನು ಒಂದು ದಿವಸದಲ್ಲಿ ಬರೆಯಬಹುದು. ಪ್ರಮಾಣ ವಚನಗಳನ್ನು ಉದಾಹರಿಸದೇ, ಉದಾಹರಿಸಿದರೂ ಅವುಗಳಿಗೆ ಯಾತಕ್ಕೆ ಅರ್ಥಮಾಡಬೇಕು? ಇತ್ಯಾದಿ ಶಂಕೆಗಳಿಗೆ ಸಮಾಧಾನಮಾಡದೇ, ಮಾಧ್ವರ ಅರ್ಥವು ದುರರ್ಥವು, ಅನ್ಯಾಯವು, ಪೂರ್ವದಲ್ಲಿಯೇ ಅದ್ವೈತಗ್ರಂಥಗಳು ಎಲ್ಲವನ್ನೂ ಸಮರ್ಥಿಸಿರುವುವು, ಈಗ ಹೊಸದಾಗಿ ಏನೂ ಹೇಳಬೇಕಾದುದಿಲ್ಲ.ಈ ವಿಷಯಗಳನ್ನು ಭಾಷ್ಯಾದಿಗಳಲ್ಲಿಯೇ ನೋಡಿಕೊಳ್ಳಬೇಕು; ಇತ್ಯಾದಿ ರೀತಿಯಲ್ಲಿ ಹದಿನೈದು- ಹದಿನಾರು ಹರಕಲು ನಿಂದಾ ಪತ್ರಗಳುಳ್ಳ ಸಣ್ಣ ಬುಕ್ಕುಗಳನ್ನು ಬರೆಯುವುದಕ್ಕೆ ಶಾಸ್ತ್ರಾರ್ಥಜ್ಞಾನವೇನೂ ಬೇಕಿಲ್ಲ. ಗ್ರಂಥ ಬರೆಯುವಾಗ, ಒಂದೊಂದು ವಿಷಯವನ್ನೂ ಸಮಗ್ರವಾಗಿ ಉಪಪಾದನೆ ಮಾಡಿ, ತಮ್ಮಿಂದ ಉದಾಹೃತವಾದ ಪ್ರಮಾಣಗಳಿಗೆ ಅನ್ಯಾರ್ಥವನ್ನು ಹೇಳುವುದರಲ್ಲಿ ಬಾಧಕವನ್ನು ಪ್ರದರ್ಶನಮಾಡಿ, ನಿರವಕಾಶವಾಗುವಂತೆ ವಿಷಯನಿಶ್ಚಯವನ್ನು ಮಾಡಬೇಕೇ ಹೊರತು, ಕೇವಲ ಸ್ವಂತ ಷರಾಗಳಿಂದ ಪೂರ್ಣವಾದ, ಬ್ರಹ್ಮಾಂಡದಲ್ಲಿರುವ ವಿಷಯಗಳಮೇಲೆಲ್ಲಾ ಒಂದೊಂದು ಬೈಗಳ ಮಾತಿನಿಂದ ಸಹಿತವಾದ, ಚಪೇಟಿಕೆಯಂಥಾ ಗ್ರಂಥಗಳನ್ನು ಇನ್ನು ಮೇಲೆ ಸ್ಮಾರ್ತಪಂಡಿತರು ತಮ್ಮ ಮಾನವನ್ನು ಎದೆಯಲ್ಲಿ ಅಚ್ಚುಮಾಡುವರೆಂದು ನಂಬಿರುತ್ತೇವೆ. ಮತ್ತು ದುರಂತದೋಷದೂಷಿತವಾದ ತಮ್ಮ ನಿರ್ಗುಣಬ್ರಹ್ಮವಾದವನ್ನೂ, ಮಾಯಾವಾದವನ್ನೂ ವಿಚಾರಮಾಡಿ, ಪರಿತ್ಯಾಗ ಮಾಡುವುದಕ್ಕೆ ಯತ್ನಿಸುವರೆಂದು ನಂಬಿರುತ್ತೇವೆ. ಹಾಗಿಲ್ಲದೇ ನಿರ್ಗುಣ ಬ್ರಹ್ಮವಾದಕ್ಕೂ, ಮಾಯಾವಾದಕ್ಕೂ ಶ್ರುತಿ, ಸೂತ್ರ, ಗೀತಾದಿಗಳು ಪ್ರಮಾಣಗಳು ಸಹಾಯಮಾಡುವುವೆಂದು ತೋರಿಸಿಕೊಡುವು ದಾದರೆ ನಾವೂ ಅವರ ಸರಣಿಯನ್ನು ಅನುಸರಿಸುವೆವು. ಮುಮುಕ್ಷುಗಳೆಲ್ಲರೂ ಒಂದು ಗುಂಪು. ನಿರ್ಣೀತವಾದ ವೈದಿಕ ಮತವು ಒಂದೇ. ಅದು ಯಾವುದು ಎಂಬುದನ್ನು ಪರಸ್ಪರ ಮೈತ್ರೀಭಾವಕ್ಕೆ ಹಾನಿ ಬರುವ ವ್ಯಕ್ತಿದ್ವೇಷವನ್ನೂ ಸಂಘದ್ವೇಷವನ್ನೂ ತ್ಯಾಗ ಮಾಡಿ ಯುಕ್ತಿಚಾಲನಗಳಿಂದ ವಿಚಾರ ಮಾಡಿ ನಿಶ್ಚಯಿಸಿಕೊಂಡು ಉತ್ತಮಗತಿಯನ್ನು ಹೊಂದೋಣ.

'ಯತ್ರವಿರುದ್ಧಗತಯೋಪ್ಯನಿಶಂ ಪತಂತಿ'' ಎಂಬ ಭಾಗವತದಲ್ಲಿ ನಮ್ಮ ಶ್ರೀಮನ್ನಾರಾಯಣನಲ್ಲಿ ಅಣುತ್ವ , ಮಹತ್ವ, ಸೂಕ್ಷ್ಮತ್ವ , ಸ್ಥೂಲತ್ವಾದಿ ಬಹುವಿರುದ್ಧ ಧರ್ಮಗಳು ವಿರೋಧವನ್ನು ಬಿಟ್ಟು ಸಹಾವಸ್ಥಿತಿಯನ್ನು ಹೊಂದುವುವು. ಅದು ಯೋಗೀಶ್ವರನಾದ ನಮ್ಮ ಕುಲಸ್ವಾಮಿಯ ಅಚಿಂತ್ಯ ಪ್ರಭಾವವು. ವಿಷ್ಣುದೇವತಾಕವಾದ ನಮ್ಮ ಗ್ರಂಥವೂ ಸಹ ವಿಚಿತ್ರ ಬಣ್ಣಗಳಿಂದ ಸಹಿತವಾಗಿರುವುದು. ಶಾಸ್ತ್ರಿಗಳ ದ್ವೇಷದಿಂದ ಬರೆಯಲ್ಪಟ್ಟುದೆಂದು ಕೆಲವರು ನಿಶ್ಚಯಿಸುವರು; ದೈವಪ್ರೀತಿಯಿಂದ ಬರೆದುದೆಂದು ಕೆಲವರು ಭಾವಿಸುವರು; ವಿದ್ಯೆಯ ಮದದಿಂದ ಬರೆದ ಕೆಚ್ಚಿನ ಅತಿಶಯವೆಂದು ಕೆಲವರು ಭಾವಿಸುವರು; ವೈದಿಕಪ್ರಜಾಪ್ರೀತಿ ಯಿಂದ ರಚಿಸಿದ ಮನೋಜವಪಿತನ ಪ್ರೀತ್ಯರ್ಥವಾದ ಮಾಣಿಕ್ಯಮಾಲೆಯೆಂದು ಇನ್ನು ಕೆಲವರು ಭಾವಿಸುವರು. ಏನಾದರೂ ಆಗಲಿ. ಬಹು ಭಾವೋದ್ದೀಪಕನಾದ ನಮ್ಮ ಕೃಷ್ಣಮೂರ್ತಿಯ ರಂಗೋತ್ಸವದಂತೆ ನಮ್ಮ ಗ್ರಂಥವೂ ಬಹುಜನಗಳಿಗೆ ಬಹುಪ್ರಕಾರ ವಾದ ಭಾವಗಳನ್ನು

ಹುಟ್ಟಿಸುವುದು. ನಮ್ಮ ಗ್ರಂಥವು ಕೃಷ್ಣಮಿತ್ರರಿಗೆ ಕೃಷ್ಣಪ್ರತಿಮೆಯಂತೆಯೂ ಭಕ್ತಜನರಿಗೆ ಸುತತ್ತ್ವಪ್ರಕಾಶಕವಾದ ಉಪದೇಶದಂತೆಯೂ, ವಿದ್ವಾಂಸರಿಗೆ ಪರಮಹಂಸರ ಉಪದೇಶಗರ್ಭಿತವಾದ ವಾಕ್ಯಾರ್ಥದಂತೆಯೂ. ರಸಿಕರಿಗೆ ಮನೋರಂಜ ಕವಾದ ಗದ್ಯದಂತೆಯೂ, ಸ್ವಮತಾಭಿಮಾನದಿಂದ ಅಂಧತೆಯನ್ನು ಹೊಂದಿದ ಜ್ಞಾನನೇತ್ರವುಳ್ಳವರಿಗೆ ಅಹಸ್ಯವಾದ 'ಜಿಗುಪ್ಸೆ' ಯನ್ನೂ ಹುಟ್ಟಿಸುವ ದೇಶಕಾಲ ವರ್ತಮಾನಗಳಿಗೆ ''ವಿರುದ್ಧವೂ ಅನುಚಿತವೂ ಅಯೋಗ್ಯವೂ'' ಆದ ಪೊಳ್ಳು ಚಮತ್ಕಾರ ದಂತೆಯೂ, ಉದಾಸೀನರಿಗೆ ಚಿತ್ತರಂಜನದ ವೈಭವ ಪ್ರದರ್ಶನದಂತೆಯೂ, ಮತ್ಸರಗ್ರಸ್ತರಿಗೆ ''ಅಧೀತೇಹಿ ಮಹಾಭಾಷ್ಯೇ'' ಎಂಬ ನ್ಯಾಯಾನುಸಾರಿಯಾದ ವ್ಯರ್ಥ ರಚನೆಯಂತೆಯೂ, ನಮ್ಮ ಸುಹೃಜ್ಜನರಿಗೆ ಹೃದಯಂಗಮವಾದ ಚಾತುರ್ಯ ಪ್ರದರ್ಶನದಂತೆ ಯೂ ಸತ್ಯಪ್ರಧಾನರಾದ ನಮ್ಮ ಗುರುಜನರಿಗೆ ಹಿತವಾದ ಗುರುದಕ್ಷಿಣೆಯಂತೆಯೂ, ನಮ್ಮ ರಂಗನಿಗೆ ಮನೋಲ್ಲಾಸಕವಾದ ಸೊಬಗಿನ ಕಾಣಿಕೆಯಂತೆಯೂ ತೋರುವುದು.

ಇಂಥಾ ಪ್ರದರ್ಶನೆಗೆ ಅವಕಾಶವು ಚಪೇಟಿಕೆಯಿಂದುಂಟಾಯಿತು. ಆದುದದರಿಂದ ಅದಕ್ಕೂ ಒಂದುಸಲಾಮು. ಕಲಿಯುಗದಲ್ಲಿ ಮಹತ್ಪುಣ್ಯ ಕಾರಣನಾದುದರಿಂದ, ದುಃಸ್ವರೂಪನಾದ ಕಲಿಯಲ್ಲೂ ಸ್ವಲ್ಪ ಗುಣಗ್ರಹಣವನ್ನು ಆರ್ಯರು ಮಾಡುವರೆಂದು ಭಾಗವತದಲ್ಲಿ ನಿರೂಪಿತವಾಗಿದೆ. ''ಕಲಿಂ ಸಭಾಜಯಂತ್ಯಾರ್ಯಾಃ''. ವಾಕ್ಯಾರ್ಥ ವಿಚಾರಕ್ಕೆ ಉತ್ತಮ ಅವಕಾಶವು ಮುಮುಕ್ಷುವಿಗೆ ಬೇಕು. ಮೋಕ್ಷಸಾಧನೆಯಲ್ಲಿ ಆಸಕ್ತನಾದವನು ದುರ್ಜನರ ಪ್ರತಿಬಂಧವು ಸ್ವಲ್ಪವೂ ಇರಕೂಡದೆಂದು ಬಯಸುವುದೇ ಅವಿವೇಕದ ವ್ಯಾಪಾರವು . ಶ್ರೀಮನ್ನಾರಾಯಣನೇ ಭಕ್ತರನ್ನೂ ಅಭಕ್ತರನ್ನೂ ನಿರ್ಮಿಸಿರುವನು. ಅಭಕ್ತರ ದೆಸೆಯಿಂದ ಭಕ್ತರು ಸನ್ಮಾನವನ್ನು ಹೊಂದುವರು. ಶಾಸ್ತ್ರಿಗಳ ಗ್ರಂಥದ ದೆಸೆಯಿಂದ ಹರತಿ ಆಚಾರ್ರಗ್ರಂಥಕ್ಕೆ ಪ್ರಾಶಸ್ತ್ಯವು ಬರುವುದು. ಬ್ರಿಟಿಷರ ದಂಡದಿಂದ ಗಾಂಧಿಗೂ ಮಾಹಾತ್ಮ್ಯ ಪ್ರಾಪ್ತಿಯು. ಸುಳ್ಳಿನಿಂದ ಸತ್ಯಕ್ಕೆ ಘನತೆಯು. ಅಲ್ಲಿಯವರೆಗೆ ಯಾತಕ್ಕೆ ಹೋಗಬೇಕು ಶಂಕರಾಚಾರ್ಯರು ದುಸ್ತತ್ತ್ವವನ್ನು ರಚಿಸಿ ಜನರುಗಳ ಮನಸ್ಸಿನಲ್ಲಿ ಅಜ್ಞಾನಾಂಧಕಾರವನ್ನು ರಾಶಿರಾಶಿಯಾಗಿ ತುಂಬಿಟ್ಟುದುದ ರಿಂದಲೇ ಸರ್ವಜ್ಞಸೂರ್ಯರಾದ ನಮ್ಮ ಆಚಾರ್ಯವರ್ಯರ ಅಂತತಿಮಿರನಿವಾರಕತ್ವ ಶಕ್ತಿಯು ನಮ್ಮಂಥಾ ಬಡತತ್ವಾರ್ಥಿಗಳಿಗೂ ಸಹ ಸ್ಪಷ್ಟವಾಗಿ ವಿದಿತವಾಗಿ ಹೋಯಿತು. ಅವರಷ್ಟೇ ''ಅತೋಽನಂತ ದೋಷ ದುಷ್ಟಂ ಚ ಹೇಯಂ ಮಾಯಾಮತಂ ಶುಭೈಃ॥'' ಇತ್ಯಾದಿ ಅನೇಕ ಬೀಗರಹಾಡುಗಳನ್ನು ರಚಿಸಿ, ಅದ್ವೈತಮುಖಭಂಗವನ್ನು ಮಾಡಿ, ದ್ವೈತತತ್ವದ ಸ್ವಾಭಾವಿಕವಾದ ಸರ್ವೋತ್ತಮತ್ವ ವನ್ನು ಪ್ರಕಾಶಪಡಿಸಿದರು! ಇನ್ನೂ ಮೊನ್ನೆ ನಡೆದ ಸಂಗತಿಯನ್ನು ವಿಚಾರ ಮಾಡಿದರೆ, ದ್ವೈತಾದ್ವೈತ ಕಲಹವಿಲ್ಲದಿದ್ದರೆ, ವ್ಯಕ್ತಿದ್ವೇಷ ದಗ್ಧಹೃದಯವುಳ್ಳ ಕೆಲವರು ಸ್ಮಾರ್ತವೈದಿಕರಿಗೆ ಸ್ಮಾರ್ತವೈಷ್ಣವದ್ವೇಷರೂಪವಾದ ವೃಕ್ಷಕ್ಕೆ ವಿಷಬೀಜವನ್ನು ಬಿತ್ತುವುದಕ್ಕೆ ಅವಕಾಶವೆಲ್ಲಿಂದ ಬರುತ್ತಿತ್ತು? ದ್ವೈತಾದ್ವೈತ ಕಲಹವಿಲ್ಲದಿದ್ದರೆ, ಅಧ್ಯಕ್ಷತೆಗೆ ಅನರ್ಹರಾದ-ಕಾರಣಗಳನ್ನು ಎರಡನೆಯ ವಾಲ್ಯೂಂ ನಲ್ಲಿ ಘನಪಾಠಿಗಳ ಮನಸ್ಸಿಗೂ ಬರುವಂತೆ ಸಾಂಗವಾಗಿ ನಿರೂಪಿಸುವೆವು-ವೇದದ ಕೆಲವು ಭಾಗವನ್ನು ಬಾಯಿಪಾಠಮಾಡಿರುವ ಅಯ್ಯಾ ಘನಪಾಠಿಗಳಿಗೆ ಅಧ್ಯಕ್ಷತೆಯ ಪ್ರಾಶಸ್ತ್ಯವೆಲ್ಲಿಂದ ಬರುತ್ತಿತ್ತು? ದ್ವೈತಾದ್ವೈತ ಕಲಹವಿಲ್ಲದಿದ್ದರೆ, ಚ್ಯುತವಾದ ದಫೇದಾರ್ ಪದವೀಸ್ಥರಾದ ವಿ॥ ರಂಗಣ್ಣನವರಿಗೆ ಓಡ್ಯಾಟದ ಪ್ರಭುತ್ವವು ಎಲ್ಲಿಂದ ಬರುತ್ತಿತ್ತು? ಹಾಗೆಯೇ ಅದ್ವೈತಿಗಳ ಕೋಟಲೆಯಿಂದ ದ್ವೈತತತ್ವದ ನೈಜವಾದ ಪ್ರಾಶಸ್ತ್ಯವು ಹೊರಬೀಳುವುದು. ದ್ವೈತವೂ ಇಲ್ಲ; ಅದ್ವೈತವೂ ಇಲ್ಲ; ತತ್ವವಿಚಾರದಿಂದ ನಮಗೇನು? ಎಂದು ಜನರು ಸುಪ್ತರಾಗಿರುವಾಗ ಸಾಂಬಶಾಸ್ತ್ರಿಗಳು ಮೊದಲಾದ ಬುಕ್ಕುಬರೆಯುವ ಅದ್ವೈತಿಪಂಡಿತರು ನಮ್ಮ ಮಂತ್ರಿಗಳು. ಪೂರ್ಣವಾದ ಮೂರುತಿಂಗಳ ಕಾಲವೂ ಸಾಕ್ಷಾತ್ ದ್ವೈತಸಿದ್ಧಾಂತ ಪ್ರತಿಷ್ಠಾಪನಾಚಾರ್ಯರೇ ಚತುರಂಗ ಬಲ ಸಮನ್ವಿತರಾಗಿ ಮುತ್ತಿಗೆಯನ್ನು ಹಾಕಿದ್ದರೂ ಸಹ ಅದ್ವೈತ ವೈದಿಕ ಸೈನ್ಯವು ಸಂದುಗೊಂದುಗಳಲ್ಲಿ ಅಡಗಿಹೋಗಿತ್ತು. ಅದರ ವಿಚಾರವೇ ಇರಲಿಲ್ಲ. ನಿಶ್ಶಬ್ದ. ಅದ್ವೈತವಾದವು ಅದ್ವಿತೀಯ ನಿರ್ಗುಣ ಬ್ರಹ್ಮಭಾವವನ್ನು ಆಗ ಧರಿಸಿತ್ತು.[1] ⊗⊗ ಅಂಥಾ ವಿಲೀನವಾದ ಮೂಲಸೈನ್ಯವನ್ನೂ ಸಹ ಸಾಂಬ ಶಾಸ್ತ್ರಿಗಳೇ ಮುಂತಾದವರು

---

⊗⊗ ನಿಜವಾಗಿಯೂ ಮೈಸೂರಿನ ಅದ್ವೈತಿ ವೈದಿಕ ಚೂಡಾಮಣಿಗಳು ಆಹೂತರಾಗಿದ್ದರೂ ಸಹ ವಾಕ್ಯಾರ್ಥಕ್ಕೆ ಯಾತಕ್ಕೆ ಬಿಜಯ ಮಾಡಲಿಲ್ಲ? ಇದರ ರಹಸ್ಯವನ್ನು ಸದ್ಯೋಮುಕ್ತರಾದ ಶುಕಾಚಾರ್ಯರು ಮುಕ್ತಕಂಠದಿಂದ ಹೇಳಬಹುದು. ವಾಮದೇವರು ವಿವರಿಸಬಹುದು. ಗುರುತಮವಾದ ಈ ರಹಸ್ಯವನ್ನು ಕುರಿತು ಅಲ್ಲಿ ಇಲ್ಲಿ ಬಹುಪಟ್ಟಣವಾಸಿಗಳು ನಮ್ಮನ್ನು ಕೇಳುವರು. ನಾವು (ಹಿಂದಿನ ಪುಟದಿಂದ) ಏನೆಂದು ಹೇಳೋಣ! ಗ್ರೀಷ್ಮಕಾಲವಾದುದರಿಂದ ಮಾಗಿಯ ಹೊಡೆತವನ್ನು ತಡೆಯಲಾರದೆ ಹೊರಗೆ ಹೊರಡಲಿಲ್ಲವೋ! ಐಕ್ಯಧ್ಯಾನದಲ್ಲಿ ತತ್ಪರರಾಗಿ ಸಮಾಧಿಪರಿಪಾಕ ವಶರಾಗಿ ದ್ವೈತವನ್ನು ಅವಲಂಬಿಸಿ ವಾದ ಮಾಡುವವರು ಹಿಂದೆ ಇರಲಿಲ್ಲ, ಈಗ ಇಲ್ಲ, ಮುಂದೆ ಇರುವುದಿಲ್ಲ ಎಂಬ ಮಿಥ್ಯಾನುಸಂಧಾನದಿಂದ ಹೊರಗೆ ಹೊರಡಲಿಲ್ಲವೋ! ಗೃಹಕೃತ್ಯ ಭಾರವಶರಾದ ಗ್ರಹಸ್ಥರಾದುದರಿಂದ ಕಾರ್ಯಗೌರವದಿಂದ ಬಿಜಯಂಗೈಯಲಿಲ್ಲವೋ! ವಾದಕ್ಕೆ ಆಹ್ವಾನವು ಪಲ್ಲಕ್ಕಿಯಲ್ಲಿ ಹಗಲು ದೀವಟಿಗೆಗಳ (ಮುಂದುವರೆದಿದೆ)

ಬಯಲಿಗೆ ತಂದು ಬಿಟ್ಟರು. ಭೂಭಾರಹರಣವನ್ನು ಮಾಡುವ ಶ್ರೀಕೃಷ್ಣನ ವ್ಯಾಪಾರದಲ್ಲಿ ಭೀಮಸೇನನು ಒಂದು ಪ್ರಧಾನಾಂಗವು. ಪುನಃ ಪುನಃ ಅಕ್ಷೌಹಿಣೀ ಸೈನ್ಯವನ್ನು ಯುದ್ಧಕ್ಕೆ ತಂದು ಬಲಿಕೊಡುತ್ತಿದ್ದ ಜರಾಸಂಧನೂ ಸಹಾಯಭೂತನೇ. ಹೀಗೆಯೇ ತತ್ವ ವಿಚಾರದಲ್ಲಿ ಸುಪ್ತರಾದ ಜನರನ್ನು ಉತ್ಥಾನಮಾಡುವ ನಮ್ಮ ವ್ಯಾಪಾರಕ್ಕೆ ಅವಕಾಶವನ್ನು ಸೃಷ್ಟಿಮಾಡುವವರು ಸಾಂಬಶಾಸ್ತ್ರಿಗಳು. ಮೊಸಳೆಯು ಗಜೇಂದ್ರನನ್ನು ಹಿಡಿಯದಿದ್ದರೆ ವೈಕುಂಠನಾಥನಾದ ನಮ್ಮ ರಂಗನು ಓಡಿ ಬರುತ್ತಿದ್ದನೇ? ದುಶ್ಶಾಸನನು ದ್ರೌಪದಿಯನ್ನು ಮಾನಗೆಡಿಸಲು ಯತ್ನಿಸದಿದ್ದರೆ ಅಕ್ಷಯವಸ್ತ್ರಗಳನ್ನು ನಮ್ಮ ಕೃಷ್ಣನು ಕೊಡುತ್ತಿದ್ದನೇ? ಹಿರಣ್ಯಕಶಿಪು ಪ್ರಹ್ಲಾದನನ್ನು ಹಿಂಸೆ ಪಡಿಸದಿದ್ದರೆ ನಮ್ಮ ನರಸಿಂಹನು ಮರದ ಕಂಬದಿಂದ ಹೊರಕ್ಕೆ ಬರುತ್ತಿದ್ದನೇ? ಹಾಗೆಯೇ ಬಿಸಿಬಿಸಿಯಾದ ಚಪೇಟಿಕೆಯನ್ನು ಶಾಸ್ತ್ರಿಗಳು ಬಡವೈಷ್ಣವರ ಕಪೋಲದಲ್ಲಿ ಕೊಟ್ಟು ಅವರನ್ನು ಅಳಿಸದಿದ್ದರೆ ನಾವು ಗಳಹಸ್ತಿಕಾವನ್ನು ಕೊಡಲು ಕಾರಣವೇನಿತ್ತು? ಆದರೆ ಇದು ನಿಮಿತ್ತ ಮಾತ್ರವು. ತತ್ವವಿಚಾರ ರೂಪವಾದ ಈ ಮಹಾಯಜ್ಞವು

---

(ಹಿಂದಿನ ಪುಟದಿಂದ)ಸಹಿತವಾಗಿ ಬರಲಿಲ್ಲವೆಂದೋ! ಅಥವಾ ನಿಶ್ಚಿತ ತತ್ವರಿಗೆ ದ್ವೈತಾದ್ವೈತಕಲಹವು ಯಾತಕ್ಕೆ ಎಂಬ ಉದಾಸೀನಭಾವದಿಂದಲೋ! ಯಾವ ಕಾರಣದಿಂದ ಅದ್ವೈತವಾದಿಗಳ ಅದ್ವಿತೀಯ ಪಾದಗಳು ವಾಕ್ಯಾರ್ಥಭೂಮಿಗೆ ಕಾಲಿಡಲಿಲ್ಲ? ಮಹಾಪ್ರಭುಗಳಿಗೆ ಕೋಪ ಬರುವುದೆಂದು ವಾಕ್ಯಾರ್ಥಕ್ಕೆ ಬರಲಿಲ್ಲವೆಂದುಕೆಲವರು ಹೇಳುವರು. ನೈಜಾಮ ಸರ್ಕಾರವೇ ಮೇಲೆ ಬೀಳಬಹುದೆಂಬ ಭಯದಿಂದ ಎಂದು ಕೆಲವರು ಹೇಳುವರು. ದ್ವೈತಸಿದ್ಧಾಂತ ಪ್ರತಿಷ್ಠಾಪನಾಚಾರ್ಯರ ಬಾಜಾಭಜಂತ್ರಿಗಳಿಂದ ವಿಸ್ಮಿತರಾಗಿ ಬರಲಿಲ್ಲವೆಂದು ಕೆಲವರು. ರಾಜಧಾನಿಗೆ ಅತಿಥಿಗಳಾಗಿ ಬಂದುದರಿಂದ ವಾಕ್ಯಾರ್ಥರೂಪವಾದ ಯುದ್ಧವು ಉಚಿತವಲ್ಲವೆಂದು ಮತ್ತೆ ಕೆಲವರು. ಹೂಡಿದ ಆಟಗಳಿಗೂ, ನಡೆದ ಸಭೆಗಳಿಗೆಲ್ಲಾ ಹೋಗಬೇಕೆಂದು ನಿರ್ಬಂಧವಿಲ್ಲದಿದುರಿಂದ ಹೋಗಲಿಲ್ಲವೆಂದು ಕೆಲವರು. ಮನೆಯಲ್ಲಿ ಸರಸಲ್ಲಾಪಗಳನ್ನು ಪರಿತ್ಯಜಿಸಿ ಅಂತ್ಯಕಾಲೋಚಿತವಾದ ತತ್ವವಿಚಾರವು ನಮಗ್ಯಾತಕ್ಕೆ ಎಂದುವಾಕ್ಯಾರ್ಥಭೂಮಿಗೆ ತೆರಳಲಿಲ್ಲವೆಂದು ಕೆಲವರು ಹೇಳುವರು. ಹೀಗೆ ನಾನಾ ಜನರು ನಾನಾರೀತಿಯಾಗಿ ಉತ್ಪ್ರೇಕ್ಷಿಸುವರು. ಕುಲವರ್ಧಕನಾದ ಜ್ಯೇಷ್ಠಪುತ್ರನು ಉದಯಿಸುವವರೆವಿಗೂ ವೇದಾಂತ ವಿಚಾರಕ್ಕೆ ಹೋಗಬಾರದೆಂದು ಕೆಲವರ ಮತವಿರುತ್ತದೆ. ಪ್ರಕೃತ ಆ ಭಾವದಿಂದಲೋ! ಅಥವಾ ಪೂರ್ವದಲ್ಲಿಯೇ ಮಠದಲ್ಲಿ ಪಡೆದ ಬಹುಮಾನಗಳಿಂದ ತೃಪ್ತರಾಗಿ ಹೆಚ್ಚು ಆಶೆಮಾಡುವುದು ವೇದಾಂತಿಗಳಿಗೆ ಉಚಿತವಲ್ಲವೆಂಬ ಭಾವದಿಂದಲೋ! (ಯಾತಕ್ಕೆಂದರೆ ಮಠದ ಲೆಕ್ಕದಲ್ಲಿ ಅದ್ವೈತಿ ಬಹುಮಾನಗಳು ಇದುವರೆವಿಗೂ ಮೂರುಲಕ್ಷಕ್ಕೆ ಮೇಲಾಗಿರುವುದಂತೆ!) ಅಥವಾ ಸಭೆಗೆ ಪ್ರಾಪ್ತರಾದರೆ ಮರ್ಯಾದಾರ್ಥವಾಗಿ ಪರಮಹಂಸರ ಧನವ್ಯಯವನ್ನು ಮಾಡಿಸುವುದು ನಮ್ಮ ಊರಿಗೇ ಪ್ರಾಪ್ತವಾಗಿರುವಾಗ ಧರ್ಮಶಾಸ್ತ್ರವಿರುದ್ಧವೆಂದೋ! ಅಥವಾ ವಾಕ್ಯಾರ್ಥದಲ್ಲಿ ಪರಾಜಿತರಾದರೆ ತಮ್ಮ ಅಲ್ಪತೆಯು ವ್ಯಕ್ತವಾಗುವುದಲ್ಲದೇ ಪುರಾತನವಾದ ಆದಿಶಂಕರರಿಂದ ರಚಿತವಾದ ತಮ್ಮ ಮತಕ್ಕೇ ಅಗೌರವವು ಬಂದುಬಿಡಬಹುದೆಂಬ ಭಾವನೆಯಿಂದಲೋ! ಅಥವಾ 'ದೇಶಕಾಲ ವರ್ತಮಾನಗಳಿಗೆ ಅನುಚಿತವೂ ವಿರುದ್ಧವೂ ಅಯೋಗ್ಯವೂ' ಆದ ಈ ತತ್ವವಿಚಾರವು ನಮಗೆ ಯಾತಕ್ಕೆ ಎಂದೋ! ಅಥವಾ ಏನೂ ಇಲ್ಲ, ಸುಮ್ಮನೇ ನೋಡಿ ನೋಡಿ ಸಹಿಸ ಲಾರದ ಜಿಗುಪ್ಸೆಯಿಂದಲೋ! ಯಾತಕ್ಕೆ ಸಭೆಗೆ ಹೋಗಿ ಕಾಶ್ಮೀರಶಹಲು ವಿಭೂಷಿತರಾದ ಅದ್ವೈತಿ ಕುಲಾವತಂಸರು ಸಭೆಗೆ ತೆರಳಿ ತಮ್ಮ ವಾಕ್ಕಿರಣಗಳಿಂದ ಪ್ರಜೆಗಳ ಜ್ಞಾನಾಂಧಕಾರವನ್ನು ಪರಿಹರಿಸಲಿಲ್ಲವೋ ತಿಳಿಯದು. ಕೆಲವರು-ಇದು ನಾವು ಕೇಳಿದ ಮಾತು- ಪೀಠಗೌರವದಿಂದ ವಾಕ್ಯಾರ್ಥಕ್ಕೆ ತೆರಳಕೂಡದೆಂದು ಯೋಗಕ್ಷೇಮಚಿಂತೆಯಿಂದ ಸಂಕಲ್ಪಿಸಿದರೆಂದು ಹೇಳುವರು. ಇರಬಹುದು. ಅಥವಾ ಕೆಲವರು-ಪ್ರಾಕೃತರು- ಹೀಗೆ ಭಾವಿಸುವರು-ಸೂರ್ಯನನ್ನು ತಿಂದು ನಾಶಮಾಡಬೇಕೆಂದಿರುವ ರಾಹುವಿನಂತೆ, ಸೀತೆಯನ್ನು ಮಾನಗೆಡಿಸಲು ಎಣಿಸಿದ ರಾವಣನಂತೆ, ಗರುಡಗರ್ವ ಭಂಗವನ್ನುಂಟುಮಾಡಲು ಉದ್ಯೋಗಿಸಿದ ವಜ್ರಾಯುಧದಂತೆ ಹುಣ್ಣಿಮೆ ಚಂದ್ರನ ಶಾಂತಿಯನ್ನು ಕೆಡಿಸುವದಕ್ಕೆಣಿಸಿದ ಅಂಧಕಾರ ದಂತೆ, ಸ್ಟ್ರೈಕ್ ಮಾಡಿ ಉದಾರನಾದ ಮಿಲ್ ಯಜಮಾನನನ್ನು ದುರಾಶೆಯಿಂದ ದುಃಖ ಕೊಡಲೆಣಿಸಿದ ದುಷ್ಟ ಕೂಲಿ ಸಮುದಾಯದಂತೆ, ಸ್ಕೂಲಿಗೆ ಅಪ್ಪಣೆಯಿಲ್ಲದೆ ಗೈರುಹಾಜರಾಗಿ ಶಾಲಾಧ್ಯಕ್ಷನ ಮಾನಭಂಗವನ್ನು ಮಾಡಲೆಣಿಸಿದ ವಿದ್ಯಾರ್ಥಿಗಳಂತೆ, ಮಸಲತ್ತುಮಾಡಿಕೊಂಡು ತಮ್ಮ ಅನಾದರಣೆಯಿಂದ ಪರಮಹಂಸರ ಮಾನಭಂಗವನ್ನು ಮಾಡಬೇಕೆಂದು ತೀರ್ಥ,ಪ್ರಸಾದ , ದಕ್ಷಿಣಾದಿಗಳಿಗೆ ಕೈ ಒಡ್ಡಲಿಲ್ಲ. ತೀರ್ಥವು ಅರ್ಥಿಗಳನ್ನು ಪವಿತ್ರಮಾಡಿತು. ಪ್ರಸಾದವು ಪ್ರಾಪ್ತರಾದವರಿಂದ ಭಕ್ಷಿತವಾಯಿತು. ದಕ್ಷಿಣೆಯು ದಕ್ಷರಾದ ರಾಮಾನುಯಾಯಿಗಳಾದ ರಾಮಾನುಜರ ವಶವನ್ನು ಹೊಂದಿತು. ನಮ್ಮ ಮನಸ್ಸಿಗೇನೋ ದ್ವೈತ ಪೀಠದಿಂದ ತಿರಸ್ಕೃತವಾದ ಅದ್ವೈತತತ್ವಸಿಂಹಾಸನವೇ ಉಸುರೆತ್ತಿದರೆ ಎಲ್ಲಿ ಯಮದಂಡವು ತಲೆಯಮೇಲೆ ಬೀಳಬಹುದೋ ಎಂಬ ಭಯದಿಂದಲೋ ಎಂಬಂತೆ ನಿಶ್ಯಬ್ದತೆಯನ್ನು ಹೊಂದಿರುತ್ತದೆಂದು ತೋರುವುದು.

ದುರ್ಜನರಿಂದಲೂ, ಸಜ್ಜನರಿಂದಲೂ ಸೇರಿ ನಡೆದೇ ಹೋಯಿತು. ಮತ್ತು ಮುಂದೂ ನಡೆಯುವುದು. ದೇವಾಸುರರು ಇಬ್ಬರೂ ಸೇರಿ ಸಮುದ್ರಮಥನ ವನ್ನು ಮಾಡಿದರು. ಫಲವೇನೋ ನಮ್ಮ ರಂಗೈಯ್ಯನು ದೇವತಾನುಯಾಯಿಗಳಾದ ದ್ವೈತಿಗಳಿಗೇ ಕೊಡುವನೆಂದು ನಿರ್ಣೀತವಾದ ಶಾಸ್ತ್ರಾರ್ಥವು ॥ ಇತಿ ಶಂ ॥

ಶ್ರೀಮಧ್ವಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು ಗ್ರಂಥಕರ್ತಾ.

## ಗ್ರಂಥಕರ್ತರ ಪ್ರತಿಜ್ಞೆಯು.

ನಮ್ಮ ತಾಂಡವೋತ್ಸವವು ಆರಂಭವಾಗುವುದು. ಅದ್ವಿತೀಯವಾದ ಸರ್ವೈಕ್ಯ ಸಹಿತವಾದ ಅದ್ವೈತದ ಮೂರ್ಛಾವನ್ನು ಮಾಡುವ ಗಾಯಕರಿಲ್ಲದುದೊಂದೇ ಕೊರತೆ. ಯಾತಕ್ಕೆಂದರೆ, ಸಾಂಬಶಾಸ್ತ್ರಿಗಳ ಕಂಠದಲ್ಲಿ ಅದ್ವೈತಮಾಧುರ್ಯವಿಲ್ಲ. 'ಅಹಂ ಬ್ರಹ್ಮಾಸ್ಮಿ, ಸೋಹಮಸ್ಮಿ , ಅಯಮಾತ್ಮಾ ಬ್ರಹ್ಮ, ಪ್ರಜ್ಞಾನಂ ಬ್ರಹ್ಮ, ಅಹಂ ಮನುರಭವಂ, ಪ್ರಾಣೋಹಮಸ್ಮಿ, ಆತ್ಮಾನಂ ಲೋಕ ಮುಪಾಸೀತ, ಅಪ್ರಾಪ್ಯ ಮನಸಾ ಸಹ, ನೇಹನಾನಾಸ್ತಿಕಿಂಚನ, ತತ್ವಮಸಿ ಶ್ವೇತಕೇತೋ, ಸರ್ವಂ ಖಲ್ವಿದಂ ಬ್ರಹ್ಮ, ಯತ್ರತ್ವಸ್ಯ ಸರ್ವಮಾತ್ಮೈವಾಭೂತ್, ಅಪಾಣಿಪಾದಂ, ಅಹಮೇವಾಹಂ, ಏಕಮೇವಾದ್ವಿತೀಯಂ ಇತ್ಯಾದಿ ಶ್ರುತಿತರಂಗಗಳಿಂದ ಮನೋಹರ ವಾದ ಅದ್ವೈತಸಮುದ್ರದಲ್ಲಿ ಸಾಂಬಶಾಸ್ತ್ರಿಗಳು ಈಜಾಡಿದವರಲ್ಲ. ವಾಸುದೇವಸ್ಸರ್ವಮಿತಿ, ಶಾಸ್ತ್ರದೃಷ್ಟ್ಯಾತು ಉಪದೇಶಃ. ಆತ್ಮೇತಿ ತೂಪಗಚ್ಛಂತಿ, ಅಹಮೇವೇತ್ಯಚಿಂತಯತ್, ಆವಯೋರಂತರಂ ನಾಸ್ತಿ ಇತ್ಯಾದಿ ಸ್ಮೃತಿ ಲಹರಿಗಳಿಂದ ವಿಚಿತ್ರವಾದ ಅದ್ವೈತಸಾಗರ ದಲ್ಲಿ ಶಾಸ್ತ್ರಿಗಳು ಮುಳುಗಿದವರಲ್ಲ. ಪುರಾತನವಾದ ಅದ್ವೈ ತಮಕರಂದವನ್ನು ಶಾಸ್ತ್ರಿಗಳು ಪಾನಮಾಡಲಿಲ್ಲ. ಚಂದನ ಗಂಧದಂತೆ ಶೀತಲವಾದ ಅದ್ವೈತತತ್ವದಿಂದ ಇವರ ಮನೋಗೃಹವು ಆಪ್ಯಾಯನವನ್ನು ಹೊಂದಿಲ್ಲ. ಶಾಂಕರ ಅದ್ವೈತಕಮಲಾಕ್ಷಿಯು ಇವರ ವಕ್ರದೃಷ್ಟಿಗೆ ಬೀಳಲಿಲ್ಲ. ಆದುದರಿಂದಲೇ ರಸಿಕ ಪ್ರಪಂಚದಲ್ಲಿ ಅನುಭವರಹಿತವಾದ ಶೈಶವ ಶಾಸ್ತ್ರಿಗಳ ಕಂಠದಿಂದ ನಮ್ಮ ದಿವ್ಯತಾಂಡವಾನುಗುಣವಾದ ಕೋಕಿಲ ಸುಸ್ವರವು ಹೊರಡುವುದೆಂತು? ಆದುದರಿಂದಲೇ ಮಧ್ಯೇ ಮಧ್ಯೇ ನಮ್ಮ ನರ್ತನವು ವಿಚ್ಛಿನ್ನವಾಗುವುದು. ಒಮ್ಮೊಮ್ಮೆ ವಿರುದ್ಧಸ್ವರದಿಂದ ಹಾವಭಾವಗಳು ಭರತಶಾಸ್ತ್ರವನ್ನು ಮೀರಿ ನಡೆಯುವುವು. ಮೇಳನವು ಸರಿಯಾದರಲ್ಲವೇ ಮೂರ್ಛೆಯ ಉತ್ಪತ್ತಿಯು. ಇನ್ನೊಮ್ಮೆ ಸರಿಯಾದ ಅದ್ವೈತಗಾಯಕನ ಸಂಗಡ ನಾವು ರಂಗಭೂಮಿಗೆ ಇಳಿಯುವೆವು. ಆಗ ನಮ್ಮ ನಿರೀಕ್ಷಕರನ್ನು ನೆಟ್ಟದೃಷ್ಟಿಯಿಂದ, ಇದ್ದ ಸ್ಥಳದಲ್ಲಿ, ಮುದ್ರಿತ ಗೊಂಬೆಗಳಂತೆ, ನಿಂತ ಕಿವಿಗಳಿಂದ, ರೋಮಾಂಚಿತಗಾತ್ರರಾಗಿ, ಸ್ತಬ್ಧರಾಗುವಂತೆ ಮಾಡುತ್ತೇವೆ.

88888888888888888888888888888888888888888

॥ ಶ್ರೀಃ ॥

ಶ್ರೀಮದ್ಧನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

ನರಸಿಂಹೋಽಖಿಲಾಜ್ಞಾನ ಮತಧ್ವಾಂತದಿವಾಕರಃ । ಜಯತ್ಯಮಿತಸಜ್ಜ್ಞಾನ ಸುಖಶಕ್ತಿಪಯೋನಿಧಿಃ ॥

# ಸಾಂಬ ಗಳಹಸ್ತಿಕಾ.

## 1. ದೂಷಣಾನುವಾದವು.

ಸಾಂಬಭಂಜನ ಚಪೇಟಿಕಾ ಎಂಬ ನಾಮಧೇಯವುಳ್ಳ ಒಂದು ಗ್ರಂಥವನ್ನು ಮುಖದ ಮೇಲೆ ಹೊಡೆದಂತೆ ಯಾರೋ ಒಬ್ಬರು ತಂದು ಕೈಯಲ್ಲಿ ಹಾಕಿದರು. ಇಂಥಾ ಗ್ರಂಥಗಳ ಪ್ರಚಾರದಿಂದ ಲೋಕಕ್ಕೆ ಆಗುವ ಅಕ್ಷೇಮವನ್ನು ತೋರಿಸುವುದಕ್ಕಾಗಿ ಸ್ವಲ್ಪ ವಿಷಯಗಳನ್ನು ನಿರೂಪಿಸುತ್ತೇವೆ.

ಕಠಿಣ ಹೃದಯದವರಾದ ಜರ್ಮನಿಯವರು ಕದನದಲ್ಲಿ ಆಂಗ್ಲೇಯರ ಮೇಲೆ ಫಿರಂಗಿ ಗುಂಡುಗಳನ್ನೂ, ಬಾಂಬುಗಳನ್ನೂ ಹಾಕಿದರು. ಇದು ವಾಗ್ಯುದ್ಧವು. ಸಾಂಬಶಾಸ್ತ್ರಿಗಳು ಉಚ್ಚಧ್ವನಿಯಿಂದ ಹೆಚ್ಚು ಬೈಯುವವರು ಜಯಶೀಲರೆಂದು ತಿಳಿದು ವಾಚಾಮಗೋಚರವಾಗಿ ವಿಷ್ಣುವೈಷ್ಣವ ನಿಂದೆಯಲ್ಲಿ ತತ್ಪರರಾಗಿರುತ್ತಾರೆ. ಮತ್ತು ಕುಂಭಕರ್ಣನು ಯುದ್ಧಕ್ಕೆ ಪ್ರಾಪ್ತನಾದಾಗ ಅವನಿಗೆ ಸ್ವಸೈನ್ಯವು ಯಾವುದು, ಪರಸೈನ್ಯವು ಯಾವುದು ಎಂಬ ವಿವೇಕವೂ ಇಲ್ಲದೆ, ಎದುರಿಗೆ ಬಂದವರನ್ನು ಭಕ್ಷಿಸಬೇಕೆಂಬ ಒಂದೇ ನಿಯಮವಿದ್ದಿತು. ಪ್ರಕೃತದಲ್ಲಿ ಸಾಂಬಶಾಸ್ತ್ರಿಗಳು ಸಹ ತಮ್ಮ ಶಾಸ್ತ್ರವು ಯಾವುದು, ಪರಶಾಸ್ತ್ರವು ಯಾವುದು ಎಂಬ ವಿವೇಕಕ್ಕೂ ಅವಸರವನ್ನು ಹೊಂದದೇ, ದ್ವೈತಿಗಳು ಹೇಳಿದುದನ್ನೆಲ್ಲಾ ಖಂಡನೆ ಮಾಡಬೇಕೆಂಬ ನಿಯಮದಿಂದ ರಂಗಭೂಮಿಗೆ ಹೊರಟಿರುತ್ತಾರೆ. ಮಾಧ್ವರ ಮೇಲೆ ಮಾಡಿರುವ

ಅವರ ಆಶೀರ್ವಾದಗಳು ಈ ರೀತಿಯಾಗಿರುತ್ತವೆ.

1. ಮಧ್ವಾಚಾರ್ಯರೂ ಮತ್ತು ಮಾಧ್ವರೂ ದೈತ್ಯದಾನವರು.

2. ಸಾಂಬಭಂಜನ ಗ್ರಂಥವು ಶುನೋಚ್ಛಿಷ್ಟದಂತೆ ಅಸ್ಪೃಶ್ಯವಾದುದು. ಹರಟೆ ಆಚಾರ್ಯರಿಂದ ಬರೆಯಲ್ಪಟ್ಟಿದ್ದು. ಅವರನ್ನು ಮೋಟು ಮಾಡುವ ಉದ್ದೇಶದಿಂದ ಚಪೇಟಿಕಾ ಗ್ರಂಥವು ಹೊರಟಿರುವುದು.

3. ಸುಧಾಕಾರರು, ರುದ್ರಾದಿದೇವತೆಗಳಿಂದ ಮಧ್ವಾಚಾರ್ಯರು ವಂದಿಸಲ್ಪಟ್ಟವರೆಂದು ಸ್ತೋತ್ರಮಾಡಿರುತ್ತಾರೆ, ಇದು ಅಸಂಬದ್ಧ ಪ್ರಲಾಪವು.

4. ಮಾಧ್ವರು ವಾಕ್ಯಾರ್ಥಸಂಪ್ರದಾಯವನ್ನು ತಿಳಿಯದವರು. ಸರಿಯಾದ ಪಂಡಿತರು ಇವರೊಡನೆ ಸಮರಸವಾಗಿ ಕುಳಿತು ವಾಕ್ಯಾರ್ಥಕ್ಕೇ ಜಿಗುಪ್ಸೆಪಡುವರು. ಹಿಂದೆ ಒಬ್ಬ ದುಷ್ಟಮಾಧ್ವನು ಒಬ್ಬ ಶಾಸ್ತ್ರಿಗಳನ್ನು ವಾಕ್ಯಾರ್ಥಕಾಲದಲ್ಲಿ ಗುದ್ದಿದನಂತೆ! ಆಗ ಜನಗಳು ಫಕ್ಕನೆ ನಕ್ಕರಂತೆ! ಇತ್ಯಾದಿ.

5. ಉತ್ತರಾದಿ ಮಠದಸ್ವಾಮಿಗಳು ತಿಲಕರ ಸಂಗಡ ಹೀಗೆಯೇ ಮೋಸದಿಂದ ಏನೋ ವಾಕ್ಯಾರ್ಥಮಾಡಿರುತ್ತಾರೆ.

6. ಮಾಧ್ವರು ಪಾಷಂಡಿಗಳು. ಶಿವದೂಷಣೆಯನ್ನು ಮಾಡುವವರು.

7. 'ಪವಿತ್ರಂತೇ' ಎಂಬ ಶ್ರುತಿಯಲ್ಲಿ ಪವಿತ್ರ ಶಬ್ದವು ಚಕ್ರವಾಚಿ ಎಂದು ನಿಘಂಟುವಿನಲ್ಲಿಲ್ಲದಿದ್ದರೂ ಇರುವುದೆಂದು ಸುಳ್ಳು ಹೇಳಿರುತ್ತಾರೆ.

8. ಮಾಧ್ವರು ಸುಳ್ಳು ಶ್ರುತಿಗಳನ್ನು ನಿರ್ಮಾಣಮಾಡುವ ವಂಚಕರು. ಇವರು ಅವೈದಿಕರು.

9. ತತ್ವವಿಮರ್ಶೆಯಲ್ಲಿ ಇವರು ಮಾಡುವ ಆಕ್ಷೇಪಗಳು ವಜ್ರಶುಂಠರ ನುಡಿಯು.

10. ಮಾಧ್ವರು ಬೌದ್ಧಪುಚ್ಛಾವಲಂಬಿಗಳು. ಇವರೇ ಪ್ರಚ್ಛನ್ನ ಬೌದ್ಧರು.

11. ಇವರು ಪ್ರಚ್ಛನ್ನ ಕ್ರಿಸ್ತರೆಂಬಲ್ಲಿ ಸಂಶಯವೇ ಇರುವುದಿಲ್ಲ.

12. ಮಾಧ್ವರು ಲೋಕದ್ರೋಹಿಗಳು. ಇವರನ್ನು ಯಾರಿಗೆ ಹೋಲಿಸಿದರೂ ಹೋಲಿಸಬಹುದು.

13. ಜ್ಞಾನಿಗಳಲ್ಲಿ ಗಣನೆಗೆ ಬರದೆ ಇರುವ ಭೋಜನ ಪ್ರಿಯನಾದ ಭೀಮನನ್ನು ಗುರುವನ್ನಾಗಿ ಮಾಡಿಕೊಂಡುದು ಹಾಸ್ಯಾಸ್ಪದವು.

14. ದಿತಿಕುಮಾರನಾದ ವಾಯುವನ್ನು ಉಪಾಸನೆ ಮಾಡುವವರಾದ ಈ ಮಾಧ್ವರು ದೈತ್ಯರು, ಮಾಯಾವಿಗಳು, ಕ್ರೋಧ ಮಾತ್ಸರ್ಯಪರಿಪ್ಲುತರು.

15. ಹರಟೇ ಆಚಾರ್ರು ಮೂರ್ಖಭಾಷಣವನ್ನು ಬರೆದಿರುತ್ತಾರೆ.

16. ಶಂಕರಾಚಾರ್ಯರ ಚರಿತ್ರೆಯನ್ನು ವರ್ಣಿಸುವ ಐದು ಗ್ರಂಥಗಳಿರುವುವು. ಅವುಗಳಲ್ಲಿ ಯಾವುದು ಸ್ವಲ್ಪ ಸರಿಯಾಗಿಲ್ಲವೋ ಅಂಥಾದ್ದನ್ನೇ ಈ ಹರಟೀ ಆಚಾರ್ರು ''ಪುರೀಷಮಿವಸೂಕರಃ'' ಎಂಬ ನ್ಯಾಯಾನುಸಾರವಾಗಿ ಆರಿಸಿಕೊಂಡಿರುತ್ತಾರೆ. ಅದರಲ್ಲೂ ಮ್ಲೇಚ್ಛ ಹೂಣರ ಸಮ್ಮತಿಯನ್ನು ತೆಗೆದುಕೊಂಡದ್ದು ಈ ನೀಚ ಗ್ರಂಥವನ್ನು ಬರೆದವನ ಯೋಗ್ಯತೆಗೆ ಅನುಗುಣವಾದದ್ದು.

17. ಮಣಿಮಂಜರೀ ಗ್ರಂಥಕಾರರು ಕುತ್ಸಿತ ಗ್ರಂಥಕಾರರು.

18. ಮಾಧ್ವರು ದೈವದ್ರೋಹಿಗಳು.

19. ಸ್ಮಾರ್ತರಾಗಿ ಹುಟ್ಟಿ ಹುಟ್ಟಿದ ಮತವನ್ನು ತ್ಯಜಿಸಿದ ಈ ಮಾಧ್ವರು ಚಂಡಾಲರು.

20. ಇವರ ಗುರುಗಳಾದ ವೇದವ್ಯಾಸರು, ಹನುಮಂತ ದೇವರು, ಭೀಮಸೇನ ದೇವರು, ಇವರೆಲ್ಲಾ ಜಾರರು, ಜಾರಜರು.

21. ಮಾಧ್ವರು ಭಾಗವತ ವಚನವನ್ನು ಉದಾಹರಿಸಿರುವುದು ನಗುಪಾಟಾಗಿರುವುದು. ಭಾಗವತವು ಅಷ್ಟಾದಶಪುರಾಣಗಳಲ್ಲೇ ಸೇರಿಲ್ಲ.

22. ಇವರು ಅಂಗಾರ ಮುಖರಾದ ಕುರೂಪಿಗಳು. ಹಣೆಯಲ್ಲಿ ಮಶಿಯನ್ನು ಬಳಿದುಕೊಂಡಿರುತ್ತಾರೆ.

23. ಹರಟೀ ಆಚಾರ್ರು ಅಸುರರು-ಪಾಮರರನ್ನು ವಂಚಿಸುವುದಕ್ಕಾಗಿ ಗಾರಡೀ ವಿದ್ಯೆಯನ್ನು ತೋರಿಸಿರುತ್ತಾರೆ.

24. 'ಸಕೃದ್ಭುಂಕ್ತೇ' ಎಂಬುದನ್ನು 'ಶಕೃದ್ಭುಂಕ್ತೇ' ಎಂಬುದೂ ಇವರಿಗೆ ಸಹ್ಯವೇ.

25. ಸತ್ಯಂಭಿದಾ ಇತ್ಯಾದಿ ಶ್ರುತಿಕಲ್ಪಕನು (ಮಾಧ್ವನು) ಬ್ರಹ್ಮಹತ್ಯಾ ಮಾಡಿದವನು, ಚಂಡಾಲನು, ಭ್ರೂಣಹತ್ಯಾ ಮಾಡಿದವನು, ಸುರಾಪಾನ ಮಾಡಿದವನು, ಇತ್ಯಾದಿ.

26. ಹರಟೀ ಆಚಾರ್ರು ಹಿಮ್ಮೇಳದ ವಂಚಕರ ಪ್ರೇರಣೆಯಿಂದ 'ಹಾಡಿದ್ದನ್ನೇ ಹಾಡೋ ಕಿಸಬಾಯಿದಾಸಾ' ಎಂಬ ಗಾದೆಗೆ ಅನುಸಾರವಾಗಿ

ಬರೆಯುವವರು, ನೀಚೋಕ್ತಿಗಳನ್ನು ಆಡುವವರು.

ಅರ್ಥಾನುವಾದ ರೂಪವಾಗಿ ನಾವು ತೋರಿಸಿರುವ ಈ ಬೈಗುಳನ್ನೆಲ್ಲಾ ಸ್ವಲ್ಪ ಪಾಂಡಿತ್ಯ ಪೂರ್ವಕವಾಗಿಯೇ ಶಾಸ್ತ್ರಿಗಳು ಮಾಡಿರುತ್ತಾರೆ.

ಮದ್ದು ತುಂಬಿದ ವಚನ ಗುಂಡುಗಳನ್ನು ಹಾರಿಸುತ್ತಿರುವಾಗಲೇ ರಣಧೀರರಾದ ಶಾಸ್ತ್ರಿಗಳಿಗೂ ಸ್ವಲ್ಪ ಸಂಕೋಚವು ಬಂದು ಹೋಗಿರುವುದು. ಪುಟ 16ರವರೆವಿಗೆ ಮಧ್ವಾಚಾರ್ಯರೂ, ಮಾಧ್ವರೂ ಇವರೆಲ್ಲಾ ದೈತ್ಯರು. ಶಂಕರಾಚಾರ್ಯರೇ ಸಾಕ್ಷಾತ್ ಮಹಾದೇವರು ಇತ್ಯಾದಿ ರೀತಿಯಾಗಿ ಮಾತುಗಳಲ್ಲಿ ಶಂಕುಗಳಿಂದ ಪೂರ್ಣವಾದ ಬಾಂಬುಗಳನ್ನು ಹಾರಿಸಿ, ನಂತರ ಇವೆಲ್ಲಾ ಬರೀ ಪುಸ್ಕಿ ಚೆಂಡುಗಳು, ಇವುಗಳಲ್ಲಿ ಮದ್ದು ಇರುವುದಿಲ್ಲ. ನಾನು ಸುಮ್ಮನೆ ಈ ಮಾತುಗಳನ್ನು ಹೇಳಿರುತ್ತೇನೆ ಎಂದು 17ನೇ ಪುಟದಲ್ಲಿ ನಿರೂಪಿಸಿ ಬಿಟ್ಟರು. ಇದು ಅವರ ಮಾತು:- ‘‘ ಅದೆಂತಾದರೂ ಇರಲಿ. ಮತಸ್ಥಾಪಕರಾದ ಸರ್ವಾಚಾರ್ಯರ ವಿಷಯದಲ್ಲಿಯೂ ನಮಗೆ ಪರಿಪೂರ್ಣಗೌರವವುಂಟು. ಆದರೂ ಈ ಕ್ಷುಲ್ಲಕೋಕ್ತಿಗಳಿಗೆ ಪ್ರತ್ಯುತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಮೇಲ್ಕಂಡ ದೂಷಕ ಶ್ಲೋಕಗಳನ್ನು ಉದಾಹರಿಸಬೇಕಾಯಿತೇ ಹೊರತು ಮತ್ತೆ ಬೇರೆ ಇಲ್ಲ.’’

ಪುನಃ 28ನೆಯ ಪುಟದಲ್ಲಿ ನಾನಾ ಉಪನ್ಯಾಸವು ಮುಗಿದ ನಂತರ ತಮ್ಮಷ್ಟಕ್ಕೆ ತಾವೇ ಪೂರ್ವದಲ್ಲಿ ಹೇಳಿದುದೆಲ್ಲಾ ಕೇವಲ ಕಲ್ಪಿತವೆಂದು ಬರೆದುಬಿಟ್ಟರು. ‘ಈ ಕಟ್ಟು ಕಥೆಗಳಂತಿರಲಿ’ ಎಂಬುದು ಅವರ ಮಾತು.

ಗ್ರಂಥದ ಅನುಪೂರ್ವಿಯನ್ನು ನೋಡಿದರೆ ಒಂದೊಂದು ವೇಳೆ ಟಿಪ್ಪುಸುಲ್ತಾನನಿಗೆ ಇದ್ದಂತೆ ಅಧಿಪತ್ಯವಿದ್ದರೆ, ಶಾಸ್ತ್ರಿಗಳೂ ಸಕಲ ಮಾಧ್ವರನ್ನು ಸಂಹರಿಸಿ ಬಿಡುತ್ತಿದ್ದರೆಂದೂ, ಅಥವಾ ಮಿಹಿರಾಗುಲನು ಜನರನ್ನು ಕಡಿದು ಕಂದಕಕ್ಕೆ ಹಾಕಿ ಆನಂದ ಪಡುತ್ತಿದ್ದಂತೆ, ಶಾಸ್ತ್ರಿಗಳೂ ವಿಷ್ಣುವೈಷ್ಣವ ನಾಶದಿಂದ ಸುಖಪಡುತ್ತಿದ್ದರೆಂದೂ ತೋರುವುದು. ಪುನಃ ಯೋಚಿಸಿದರೆ, ‘ಹರತೀ ಆಚಾರ್‍ರು’ ಮೇಲಿನ ಆಗ್ರಹವೇ ಮಾಧ್ವನಿಂದೆಯಲ್ಲಿ ಕಾರಣವೋ ಏನೋ ಎಂದೂ ತೋರುವುದು. ಉಭಯವೂ ಸಂಭಾವಿತವೇ.(β β) ಅಂತೂ ಇದು ಸತ್ಯ. ಹಳ್ಳಿಯ ಜನರು ಬಯ್ಯತಕ್ಕ ಗ್ರಾಮ್ಯಪದಗಳನ್ನು ಪುಸ್ತಕದಲ್ಲಿ ಬರೆಯುವುದು ಒಂದು ಬಾಕಿ ಉಳಿಯಿತು. ಗ್ರಂಥಕಾರರ ತಾತ್ಪರ್ಯವೇನೋ ಇಷ್ಟೇ! ‘‘ಎಲೈ ಮೂರ್ಖನೇ! ನೀನು ಬೈಯುವುದಾದರೆ ನಾನೂ ಬೈಯ್ಯಬಲ್ಲೆನು. ಶಾಸ್ತ್ರಾರ್ಥವು ನಿನಗೂ ಬರದು; ನನಗೂ ಬೇಕಿಲ್ಲ. ಈಗ ನಾನು

---

ββ ಸಾಂಬಶಾಸ್ತ್ರಿಗಳ ನಿಜವಾದ ಅಭಿಪ್ರಾಯವು ತಿಳಿಯಲಿಲ್ಲವೆಂದು ಸಂಕಟಪಡುತ್ತಿದ್ದೆವು. ಭಾದ್ರಪದ ಬಹುಳ ಅಮಾವಾಸ್ಯೆಯಲ್ಲಿ ಅಪರಾಹ್ಣದಲ್ಲಿ ದ್ವೈತಿಗಳ ನಾಶಕ್ರಮವನ್ನು ಚಿಂತಿಸುವ ಉದ್ದಿಶ್ಯ ಸೇರಿದ ಒಂದು ಸಭೆಯಲ್ಲಿ ಸೇನಾಗ್ರೇಸರರಾದ ಶಾಸ್ತ್ರಿಗಳು ತಮ್ಮ ಅಭಿಪ್ರಾಯವನ್ನು ಹೇಳಿಬಿಟ್ಟರು. ಚಪೇಟಿಕಾ ಗ್ರಂಥವು ಹೊಟ್ಟೆಕಿಚ್ಚಿನಿಂದ ಉತ್ಪನ್ನವಾದುದು. ಗರ್ಭವು ಪೂರ್ಣವಾಗುವುದಕ್ಕೆ ಮೊದಲೇ 1929ನೇ ಇಸ್ವಿಯಲ್ಲಿಯೇ ಅದು ಕ್ಷುದ್ರಕಲ್ಪಿತ ವೇದನೆಯಿಂದ ಹೊರಕ್ಕೆ ಬಂದುಬಿಟ್ಟಿತು. ಆದರೂ ನಿರಾಕಾರವಾದ ಆ ಮೂರ್ತಿಯನ್ನು ನೋಡಿ ಜನರು ಸಂಕಟಪಡಬಹುದು ಅಥವಾ ಅಸಹ್ಯಪಡಬಹುದೆಂಬ ಭಯದಿಂದ ಐದಾರು ತಿಂಗಳ ಪರ್ಯಂತ ಕೌರವ ಗರ್ಭವು ಎಣ್ಣೆಗಡಿಗೆಯಲ್ಲಿ ಇದ್ದಂತೆ ಒಳಗೆ ಅಡಗಿದ್ದಿತು. ಆದರೆ ಪಾಂಡವ ಪಕ್ಷಪಾತಿಗಳಾದ ಶ್ರೀಮದುತ್ತರಾದಿ ಮಠದ ಸ್ವಾಮಿಗಳೇ ಮುಂತಾದ ದ್ವೈತಿಗಳ ಉತ್ಸವವನ್ನೂ, ಅವರು ಅದ್ವೈತಿಗಳನ್ನು ಅಟ್ಟಿಸಿಕೊಂಡು ಓಡಿಸಿ ಮಾಡುತ್ತಿರುವ ಆರ್ಭಟವನ್ನೂ ತಡೆಯಲಾರದೇ, ಅವರ ಜಯೋತ್ಸವಕಾಲದಲ್ಲಿಯೇ, ಅಂದರೆ ಶ್ರೀಶ್ರೀಪಾದಂಗಳವರು ಪ್ರಯಾಣೋತ್ಸವ ಸಮಯದಲ್ಲಿ ಗಜಾರೋಹಣವನ್ನು ಮಾಡುವಾಗಲೇ, ಉದ್ದೇಶಪೂರ್ವಕವಾಗಿ 1930ನೆಯ ಇಸ್ವಿಯಲ್ಲಿ ಹಂಚಿಬಿಟ್ಟೆವು ಎಂದು ಸಾಂಬಶಾಸ್ತ್ರಿಗಳು ತಮ್ಮ ಗ್ರಂಥವು ಲೋಕನಾಶಕನಾದ ದುರ್ಯೋಧನನ ಉತ್ಪತ್ತಿಗೆ ಅನುಸರಿಸಿ ಹುಟ್ಟಿದುದು ಎಂದು ತಿಳಿಸಿಬಿಟ್ಟರು. ಗುಟ್ಟು ನಮಗೆ ತಿಳಿದುಹೋಯಿತು. ಸಾಂಬಶಾಸ್ತ್ರಿಗಳು ತಮ್ಮ ಗ್ರಂಥವು ಉದ್ವೇಗಕರವೆಂದು ತಿಳಿದುಕೊಂಡಿದ್ದರು. ಅದರ ಹಂಚಿಕೆಯಿಂದ ದ್ವೈತಿಗಳ ಮುಖಭಂಗವು ಆಗುವುದೆಂದು ಹಂಚಿದರು. ಇವೆರಡೂ ಅವರ ಸಂಭಾಷಣದಿಂದ ತಿಳಿದುಹೋಯಿತು ಅವರೇನೋ ಅವರ ಅಭಿನವ ಶಂಕರಾಲಯದಲ್ಲಿ ಈ ಮಾತನ್ನು ಹೇಳಿದರು. ಆದರೂ ನಮ್ಮ ಜ್ಞಾನಪ್ರಭಾವದಿಂದಲೂ. ನಮ್ಮ ಗುರುಗಳು ವಾಯುದೇವರಾದ್ದರಿಂದಲೂ ನಮಗೆ ಈ ವಿಷಯವು ತಿಳಿಯಿತು.

ಇದಕ್ಕೆ ಉತ್ತರವನ್ನು ಸ್ವಲ್ಪ ಹೇಳುವೆವು. ಶ್ರೀಶ್ರೀಪಾದಂಗಳವರು ಈ ಚಪೇಟಿಕಾ ಗ್ರಂಥವನ್ನು ನೋಡಿ ನಕ್ಕು, ಖಂಡನ ಮಂಡನವೇ ಶರೀರವಾಗಿ ಉಳ್ಳ ವೇದಾಂತವಿಚಾರವು ಬಹುಕಾಲದಿಂದ ಲುಪ್ತವಾಗಿದೆ. ಈ ರೀತಿಯಿಂದಲಾದರೂ ಆರಂಭವಾದದ್ದು ನಮ್ಮ ದೇವರ ದಯವು. ಮುಂದೆ ಕೆಸರೆಲ್ಲಾ ಕೆಳಕ್ಕೆ ಇಳಿದು ಹೋಗಿ ತಿಳಿನೀರು ಮೇಲೆ ನಿಲ್ಲುವಂತೆ, ಉದ್ವೇಗವು ತಂಗಿದ ಮೇಲೆ ಅದ್ವೈತಿಗಳು ಚೆನ್ನಾಗಿ

ನಿನ್ನ ಮೇಲೆ ಹಾಕಿರುವ ಪೆಟ್ಟುಗಳನ್ನು ಸಹಿಸಿಕೊಂಡು ನೀನು ಬದುಕಿ ಬಂದರೆ ನಾನು ನೋಡಿಕೊಳ್ಳುತ್ತೇನೆ. ಹುಷಾರ್.''

ಸಾಂಬಶಾಸ್ತ್ರಿಗಳು ಗ್ರಂಥವನ್ನೇನೋ ಬಹುಧೈರ್ಯದಿಂದ ಬರೆದಿರುತ್ತೇನೆ ಎಂದು ತಾವೇ ತಿಳಿದಿರುತ್ತಾರೆ. ಆದರೂ ಇನ್ನುಮುಂದೆ ಇಂಥಾ ಯುದ್ಧಗಳಿಗೆ ಪ್ರವರ್ತಿಸುವುದಿಲ್ಲವೆಂಬ ತಮ್ಮ ಉಪಸಂಹಾರೋಕ್ತಿಗಳಿಂದ ತಮಗೆ ಈ 'ಬೈಗಳ ಯುದ್ಧದಲ್ಲಿ' ಪ್ರಾಪ್ತವಾದ ಜಯದ ಘನತೆಯನ್ನು ಸ್ವಲ್ಪ ಕೆಡಿಸಿಕೊಂಡು ಬಿಟ್ಟರು. ಇದು ಅವರ ಮಾತು. ''ಲೋಕದಲ್ಲಿ ಅಜ್ಞಾನ ಹೆಚ್ಚಿದ ಹಾಗೆಲ್ಲಾ ಬೈಗಳಲ್ಲಿ ಪಾಂಡಿತ್ಯವು ಹೆಚ್ಚುವುದು. ಇದಕ್ಕೆ ಅಂತ್ಯಜಾದಿಗಳೇ ನಿದರ್ಶನವು. ಇವರಂತೆ ನಿಜವಾದ ಪಂಡಿತರು ಬೈಗಳನ್ನು ಕಲಿಯುವುದಕ್ಕೂ ಸಾಧ್ಯವಲ್ಲ. ಕಲಿತು ಕಲಹ ಮಾಡುವುದಕ್ಕೂ ಉಚಿತವಲ್ಲ. ಆದುದರಿಂದಲೇ ಇನ್ನುಮೇಲೆ ಸಪ್ರಮಾಣ ಶಾಸ್ತ್ರಾರ್ಥ ಹೊರತು ಇಂತಹ ದುರ್ಭಾಷಾಮಯಗಳಾದ ಕ್ಷುಲ್ಲಕ ಗ್ರಂಥಗಳಿಗೆ ಉತ್ತರವನ್ನು ಬರೆಯುವುದಿಲ್ಲವೆಂದು ಸೂಚಿಸಿ ಲೇಖನಿಯನ್ನು ನಿಲ್ಲಿಸುತ್ತೇವೆ' . ಇದರಿಂದ ಏನು ತೋರುತ್ತದೆಂದರೆ, ಪುನಃ ಇನ್ನೊಂದು ಸಾರಿ ಮದ್ದು, ಪಟಾಸು, ತಮಟೆ , ಬೂದಿ, ಬರಲುಗಳಿಂದ ಸಹಿತವಾಗಿ ಹರತಿ ಆಚಾರ್ರು ಬೈಗುಳಗಳ ಅಖಾಡಕ್ಕಿಳಿದರೆ, ಶಾಸ್ತ್ರಿಗಳು ಮನೆ ಬಾಗಲನ್ನು ಭದ್ರವಾಗಿ ಹಾಕಿಕೊಂಡು ಹೊರಗೆ ಹೊರಡುವುದಿಲ್ಲವೆಂದು ಪ್ರತಿಜ್ಞೆಮಾಡಿರುವಂತೆ ತೋರುತ್ತದೆ.

ಶಾಸ್ತ್ರಿಗಳು ಹಾಗೆ ಮಾಡಿದರೆ, ಸ್ಮಾರ್ತವೈಷ್ಣವರ ಪುಣ್ಯವೇ ಸರಿ. ಆದರೂ ಶಾಸ್ತ್ರಿಗಳು ಹಾಗೆ ಮಾಡುವುದಿಲ್ಲ. ಗ್ರಂಥದ ತುದಿಯಲ್ಲಿ ಹಾಗೆ ಬರೆದಿರುವುದು ಮಾತಿನ ಝೋಕು. ಇದು ಒಂದು ಅಲಂಕಾರಿಕೋಕ್ತಿಯು. ಕೊನೆಗೆ ಪರಿಣಾಮವೇನಾಗುವುದು ಎಂದರೆ, ದ್ವೈತಾದ್ವೈತ ತತ್ವಪರಾಮರ್ಶೆಯು ನಾಯಿಯು ಎಂಜಲುಹಾಳೆಗಳಿಗಾಗಿ ಪರಸ್ಪರ ಬೊಗಳುವಂತೆ, ಅಲ್ಪರಾದ ಸ್ಮಾರ್ತವೈಷ್ಣವರ ಗ್ರಾಮ್ಯ ಕದನದಲ್ಲಿ ಪರ್ಯವಸಾನವಾಗುತ್ತದೆ. ನಂತರ ಹೊರಗಿನ ಜನರು ಹಿಂದೂತತ್ವಗಳು ಇಂಥಾದ್ದೆಂದು ನೋಡಿ ನಗುವರು. ಪ್ರತಿವಾದಿಯು ನೀಚವಾದ ನಿಂದೋಕ್ತಿಗಳನ್ನು ಬರೆದಿದ್ದರೂ ಸಹ ವಾದಿಯಾದವನು ಕೇವಲ ವಿಷಯ ಚರ್ಚೆ ಯನ್ನು ಮಾಡಿ, ಯುಕ್ತಿಯನ್ನು ನಿರೂಪಿಸಿ, ಪ್ರತಿವಾದಿಯು ದಡ್ಡನೆಂದು ತೋರಿಸಬಹುದು. ಪ್ರತಿವಾದಿಯು ದುರಾತ್ಮನು, ಕೆಟ್ಟವನು ಎಂದು ಬೈಯ್ಯುವುದು ಅನರ್ಥದಲ್ಲಿ ಪರ್ಯವಸಾನವಾಗುವುದು. ಒಬ್ಬ ಆಂಗ್ಲೇಯ ಗ್ರಂಥಕರ್ತನೂ ಹೀಗೆಯೇ ಬರೆದಿರುತ್ತಾನೆ. ''In the intellectual arena, if your enemy be but the fiend in disguise call him stupid......... call him not wicked". ವಾಗ್ಯುದ್ಧದಲ್ಲಿ, ದುರಾತ್ಮರಲ್ಲಿ ಅಗ್ರಗಣ್ಯನಾದ ಸಾಕ್ಷಾತ್ ಕಲಿಯೇ ವಾದಿಸುವುದಕ್ಕೆ ಬಂದಿದ್ದರೂ ಸಹ, ಅವನನ್ನು ದಡ್ಡನೆಂದು ಕರೆಯಬಹುದು. ಅವನನ್ನು ದುರಾತ್ಮನೆಂದು ಕರೆಯಕೂಡದು ಎಂದು ಹೇಳಿರುತ್ತಾನೆ. ಈ ನ್ಯಾಯವನ್ನು ಅನುಸರಿಸಿ ವಿಷಯ ವಿಮರ್ಶೆಯನ್ನು ಮಾಡಿದರೆ ಬೇಡವೆನ್ನುವವರ್‍ಯಾರು?

ಎರಡನೇ ವಿಷಯವೇನೆಂದರೆ, 2. ವಾದ ಮಾಡುವವರು ಸಂಪ್ರತಿಪನ್ನವಾದ ಪ್ರಮಾಣದಿಂದ ಚರ್ಚಿಸಬೇಕು. 3. ಅಥವಾ ಅಸಂಪ್ರತಿಪನ್ನವಾದ ಪ್ರಮಾಣವನ್ನು ಉದಾಹರಿಸಿದರೆ, ಅದು ಪ್ರಾಮಾಣಿಕವೆಂದು ಯುಕ್ತಿಯಿಂದ ಸಮರ್ಥಿಸಬೇಕು. 4. ಮತ್ತು ಉದಾಹರಿಸಿರುವ ಪ್ರಮಾಣಗಳು ಇರತಕ್ಕ ಗ್ರಂಥಗಳ ಹೆಸರನ್ನೂ, ಮತ್ತು ಪುರಾಣಾದಿಗಳಾಗಿದ್ದರೆ ಪುಟಗಳನ್ನೂ ನಮೂದಿಸಬೇಕು. 5. ಮತ್ತು ನಿಯಮೇನ ಶ್ರುತಿ ಮತ್ತು ಪ್ರಸಿದ್ಧಸ್ಮೃತಿ, ಬ್ರಹ್ಮಸೂತ್ರ, ಗೀತಾ ಇತ್ಯಾದಿ ಪ್ರಮಾಣಗಳನ್ನು ಉದಾಹರಿಸಿ ಇದಕ್ಕೆ ಉಪಬೃಂಹಣ ವಾಗಿ ಇತರ ಪುರಾಣಗಳನ್ನು ಉದಾಹರಿಸ ಬೇಕು. ಕೇವಲ ಇತರ ಪುರಾಣಗಳನ್ನೇ ಉದಾಹರಿಸಿದರೆ, ಆ ವಾಕ್ಯಗಳು ಪ್ರಾಮಾಣಿಕಗಳು, ಸ್ವಾರ್ಥದಲ್ಲಿ ಸಾಧಕವಾಗುವುವೆಂಬುದನ್ನು ಯುಕ್ತಿಗಳಿಂದಲೂ, ಪುರಾಣಗಳ ಪ್ರಾಮಾಣ್ಯವ್ಯವಸ್ಥೆಯಿಂದಲೂ, ನಿಶ್ಚಯಿಸಬೇಕು.

ಇವೆಲ್ಲಾ ಮೊದಲಾದ ಲೋಕಸಿದ್ಧನ್ಯಾಯಗಳನ್ನು ತಿರಸ್ಕರಿಸಿ ಕದನ ಮಾಡಿದರೆ ಮನಸ್ತಾಪವು ವೃದ್ಧಿಯಾಗುವುದು ನಿಶ್ಚಯವು ಇಷ್ಟೇ ಅಲ್ಲ. ಇದರಲ್ಲಿ ಯಾವ ಪಕ್ಷ ಅನ್ಯಾಯವಾಗಿರುವುದೋ, ಆ ಪಕ್ಷಕ್ಕೆ ಘೋರತರವಾದ ಪಾಪವೂ ಪ್ರಸಕ್ತವಾಗುವುದು. ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ 'ದೂಷಣಾನುವಾದ' ವೆಂಬ ಪ್ರಥಮಾಧ್ಯಾಯವು ಮುಗಿದುದು.

---

(ಹಿಂದಿನ ಪುಟದಿಂದ) ವಿಚಾರಮಾಡಿ, ತಮ್ಮ ಮತದ ದೌರ್ಬಲ್ಯವನ್ನು ತಿಳಿದುಕೊಂಡು ನಮ್ಮನ್ನು ಶರಣು ಹೊಂದುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದರು.

ಅವರ ಅಭಿಪ್ರಾಯವು ಸರಿಯಾದುದು. ಶತ್ರುಗಳು ಹೊರಗೆ ಬಂದರು. ಇನ್ನು ದ್ವೈತಿಗಳಿಗೆ ಜಯವು ನಿಶ್ಚಯವು. ವೈಶಂಪಾಯನ ಮಡುವಿನಲ್ಲಿ ಮುಳುಗಿದ್ದ ದುರ್ಯೋಧನನಂತೆ ಒಳಗೆ ಅಡಗಿದ್ದರೆ ಇನ್ನೂ ಸ್ವಲ್ಪ ಯೋಚಿಸಬೇಕಾಗಿತ್ತು. ಇನ್ನು ನಮ್ಮ ಭೀಮನು ಯುದ್ಧಕ್ಕೆ ಸಿದ್ಧನಾಗುವನು.

## 2. ಕ್ಷುದ್ರಾಪವಾದ ಪರಿಹಾರವು.

ಶಾಸ್ತ್ರಿಗಳ ಗ್ರಂಥದಲ್ಲಿರುವ ಕೆಲವು ವಿಷಯಗಳಿಗೆ ನಾವು ಬಹುಸಂಕೋಚದಿಂದ ಉತ್ತರವನ್ನು ಬರೆಯುತ್ತೇವೆ. ಒಂದೊಂದು ವಿಷಯದಲ್ಲಿ ಒಂದೊಂದೇ ಪ್ರಮಾಣವಾಕ್ಯವನ್ನು ಗ್ರಂಥಗಳ ಹೆಸರು, ಪುಟವನ್ನು ನಿರೂಪಿಸಿ ಬರೆಯುತ್ತೇವೆ.

(1) ಪುಟ 3. ಮಧ್ವಾಚಾರ್ಯರು ಶರ್ವಗೀರ್ವಾಣವಂದ್ಯರು ಎಂಬ ವಿಷಯದಲ್ಲಿ ಸ್ಕಾಂದ ಪುರಾಣದ ರಜತಪೀಠಪುರೀ ಮಾಹಾತ್ಮ್ಯೆಯು( ಪ್ರಿಂಟಾಗಿರುವುದು) ಸಮಗ್ರವಾಗಿ ಪ್ರಮಾಣವಾಗಿರುವುದು.

(2)ಪುಟ 3. ಶಿವನು ಸರ್ವೋತ್ತಮನಲ್ಲ. ವಿಷ್ಣುವೇ ಸರ್ವೋತ್ತಮನು ಎಂಬುದು ವಿಶ್ವರೂಪದರ್ಶನದಿಂದ ಜ್ಞಾನಿಯಾದ ಅರ್ಜುನನು ವಿಷ್ಣುವಾದ ಶ್ರೀಕೃಷ್ಣನಿಗೆ ಮಾಡಿರುವ ಸ್ತುತಿಯಿಂದ ತಿಳಿದು ಬರುವುದು:-

''ನತ್ವತ್ಸಮೋಸ್ತ್ಯಭ್ಯಧಿಕಃ ಕುತೋನ್ಯಃ'' (11.43)

(3) ಪುಟ 8. ಪ್ರಹ್ಲಾದ, ನಾರದ, ವಿಭೀಷಣಾದಿಗಳು ''ಚಕ್ರಾಂಕಿತರಾಗಿದ್ದರೆಂದು ಸ್ಮೃತಿ ಪುರಾಣೇತಿಹಾಸಗಳಲ್ಲೆಲ್ಲಿಯೂ ಹೇಳಲ್ಪಡದಿರುವುದರಿಂದ, ಇದು ಸ್ವಕಪೋಲಕಲ್ಪಿತವಾದ ಕಟ್ಟುಕಥೆಯೇ ಹೊರತು ಬೇರೆ ಇಲ್ಲ'' ಎಂದು ಶಾಸ್ತ್ರಿಗಳು ಬರೆದಿರುತ್ತಾರೆ. ಇದು ಸುಳ್ಳು. ಮುಂಬಯಿ ವೆಂಕಟೇಶ್ವರ ಸ್ಟೀಮ್ ಪ್ರೆಸ್ ನಲ್ಲಿ ಅಚ್ಚಾದ ಮಾರ್ಗಶೀರ್ಷಮಾಸ ಮಾಹಾತ್ಮ್ಯ ಸ್ಕಂದಪುರಾಣದಲ್ಲಿ ಹೀಗೆ ಬರೆದಿರುತ್ತದೆ.

''ಧೃತಾನಾರಾಯಣೀ ಮುದ್ರಾ ಪ್ರಹ್ಲಾದೇನ ಪುರಾಕರೇ। ವಿಭೀಷಣೇನ ಬಲಿನಾ ಧ್ರುವೇಣ ಚ ಶುಕೇನ ಚ॥

ಮಾಂಧಾತ್ರಾಹ್ಯಂಬರೀಷೇಣ ಮಾರ್ಕಂಡೇಯ ಮುಖ್ಯೈರ್ದ್ವಿಜೈಃ। ಶಂಖಾದಿ ಚಿನ್ಹಿತೈಃ ಶಸ್ತ್ರೈರ್ದೇಹಂ ಕೃತ್ವಾ ಚ ಮಾನದ।

ಏವಮಾರಾಧ್ಯಮಾಂ ಪ್ರಾಪ್ತಂ ಸಮೀಹಿತ ಫಲಂ ಮಹತ್ ॥ (ಪುಟ. 4)

ಅರ್ಥವು:-ಪೂರ್ವದಲ್ಲಿ ಪ್ರಹ್ಲಾದನಿಂದ ನಾರಾಯಣ ಮುದ್ರೆಯು ಬಾಹುವಿನಲ್ಲಿ ಧರಿಸಲ್ಪಟ್ಟಿತ್ತು. ವಿಭೀಷಣನಿಂದಲೂ, ಬಲಿಯಿಂದಲೂ, ಧ್ರುವನಿಂದಲೂ, ಶುಕನಿಂದಲೂ, ಮಾಂಧಾತೃ, ಅಂಬರೀಷರುಗಳಿಂದಲೂ, ಮಾರ್ಕಂಡೇಯಾದಿ ಬ್ರಾಹ್ಮಣ ರಿಂದಲೂ, ಶಂಖಾದಿ ಚಿಹ್ನೆಗಳಿಂದ ದೇಹವನ್ನು ಮುದ್ರಿಸಿಕೊಂಡು ಈ ರೀತಿ ನನ್ನನ್ನು (ವಿಷ್ಣುವನ್ನು) ಆರಾಧನೆ ಮಾಡಿ ಅಭೀಷ್ಟವಾದ ಮಹತ್ಫಲವು ಹೊಂದಲ್ಪಟ್ಟಿರುವುದು. ಈ ವಿಷಯದಲ್ಲಿ ಇನ್ನೂ ಅನೇಕ ಪ್ರಮಾಣಗಳಿರುವುವು. ಅವುಗಳನ್ನು ಪ್ರತ್ಯೇಕವಾಗಿ ಒಂದು ಗ್ರಂಥದಲ್ಲಿ ಬರೆಯುತ್ತೇವೆ. ಪ್ರಕೃತ ಒಂದು ವಿಷಯದಲ್ಲಿ ಒಂದು ಪ್ರಮಾಣವು ಸಾಕು.

(4) ಪುಟ. 6. ''ಪವಿತ್ರಂತೇ ವಿತತಂ'' ಎಂಬ ಶ್ರುತಿಗೆ ಬೇರೆ ಅರ್ಥವಿರುವುದೆಂದು ಬೃಹನ್ನಾರದೀಯ ವಚನವಿರುವು ದೆಂದು ಬರೆದಿರುತ್ತಾರೆ. ಈ ಪುರಾಣವು ಎಲ್ಲಿಯದು? ಯಾವ ಅಧ್ಯಾಯದಲ್ಲಿ ಅದು ಪ್ರಿಂಟಾಗಿರುವುದು ಎಂಬುದನ್ನು ದಯಮಾಡಿ ನಿರೂಪಿಸಬೇಕು. ಯದ್ಯಪಿ ಈ ವಚನವು ಇದ್ದರೂ ಅದಕ್ಕೆ ಗತಿ ಕಲ್ಪಿಸಬಹುದು. ಆದರೂ ಪ್ರಮಾಣ ಸಂದೇಹವು ದುಸ್ತ್ಯಜವು. ಕಿಂಚ ಸ್ಕಾಂದ ಪುರಾಣ ಮಾರ್ಗಶೀರ್ಷಮಾಹಾತ್ಮ್ಯೆಯಲ್ಲಿ 'ಪವಿತ್ರ' ಶ್ರುತಿಯು ತಪ್ತಚಕ್ರ ಮುದ್ರಾಧಾರಣ ವಿಷಯದಲ್ಲಿಯೇ ಪ್ರಮಾಣವಾಗಿ ಉದಾಹೃತವಾಗಿರುವುದು.

''ಮಮ ಚಕ್ರಾಂಕಿತೋ ದೇಹಃ ಪವಿತ್ರಂ ಇತಿ ವೈ ಶ್ರುತಿಃ॥'' (ಪುಟ.5)

ಇನ್ನೂ ಅನೇಕ ಸ್ಥಳಗಳಲ್ಲಿ ಈ ಶ್ರುತಿಗೆ ಹೀಗೆಯೇ ಅರ್ಥಮಾಡಬೇಕೆಂದು ಪ್ರಿಂಟಾದ ಗ್ರಂಥಗಳಲ್ಲಿಯೇ ಇರುವುದು ಸಾವಕಾಶವಾಗಿ ನಿರೂಪಿಸುತ್ತೇವೆ.

''ಪ್ರತೇ ವಿಷ್ಣೋ'' ಎಂಬ ಶ್ರುತಿಯು ಉಪಲಬ್ಧವಾಗಿಲ್ಲವೆಂದು ಶಾಸ್ತ್ರಿಗಳು ಹೇಳಿರುತ್ತಾರೆ. ಅದು ವಿವಾದಾಸ್ಪದವಾದರೆ, ಬೇರೆ ಶ್ರುತಿಯನ್ನೇ ಉದಾಹರಿಸೋಣ. ವಸ್ತುತಃ ಆ ಶ್ರುತಿಯು ಸತ್ಯವಾದುದೆಂದು ಪ್ರಿಂಟಾದ ಕುಂಡಲಿ ಹಾಕದೇ ಇರುವ ಪದ್ಮಪುರಾಣದ 224ನೇ ಅಧ್ಯಾಯದ ಈ ಕೆಳಗಿನ ಶ್ಲೋಕದಿಂದ ತಿಳಿದು ಬರುತ್ತದೆ.

''ಪ್ರತೇವಿಷ್ಣೋ ಅಬ್ಜಚಕ್ರೇ ಪವಿತ್ರೇ ಜನ್ಮಾಂಬೋಧಿಂತರ್ತವೇ ಚರ್ಷಣೀಂದ್ರಾಃ। ಮಾಲೇ ಬಾಹ್ವೋ ದಧತೇಽನ್ಯೇ ಪುರಾಣಾ ಲಿಂಗಾನ್ಯನ್ಯೇ ತಾವಕಾನ್ಯರ್ಪಯಂತಿ॥ ಇತ್ಯೇವಂ ಶ್ರುತಯಃ ಸರ್ವಾಃ ಕಥಯಂತಿ ವರಾನನೇ॥ ಉತ್ತರಕಾಂಡೇ॥

ಪದ್ಮಪುರಾಣವು ಈ ಶ್ರುತಿಯನ್ನು ಪ್ರತೀಕದಿಂದಲೇ ಗ್ರಹಣಮಾಡಿ ಮುಂದೆ ಅರ್ಥವನ್ನು ಹೇಳಿರುವುದು.

(5) ಪುಟ-20. ಈಶ್ವರನಾದ ಅನಂತೇಶ್ವರನ ತಿರಸ್ಕಾರದಿಂದ ಮಧ್ವಾಚಾರ್ಯರು ದೈವದ್ರೋಹಿಗಳೆಂದು ಬರೆದಿರುವರು.

ಉಡುಪಿಯಲ್ಲಿರುವ ಅನಂತೇಶ್ವರನು ಸಾಕ್ಷಾದ್ವಿಷ್ಣುವೆಂದು ಪ್ರಿಂಟಾಗಿರುವ ರಜತಪೀಠಪುರಿ ಮಾಹಾತ್ಮ್ಯಗ್ರಂಥದಿಂದಲೇ ಸ್ಪಷ್ಟವಾಗುವುದು. ಶಾಸ್ತ್ರಿಗಳಿಗೆ ಈ ವಿಷಯವು ತಿಳಿಯದು.

(6) ಪ್ರಹ್ಲಾದನ ''ಅಹಮೇವಾವ್ಯಯೋನಿತ್ಯಃ ಪರಮಾತ್ಮೇತ್ಯಚಿಂತಯತ್'' ಎಂಬ ವಿಷ್ಣುಪುರಾಣವಾಕ್ಯವು ಅಷ್ಟು ಭಯಂಕರ ವಲ್ಲ. ಅಹಂ ಎಂದರೆ ನನ್ನಲ್ಲಿ ಸ್ಥಿತನಾದ, ನನ್ನ ಅಂತರ್ಯಾಮಿಯು ಎಂದು ಅರ್ಥವು. ಹೀಗೆ ಅರ್ಥಮಾಡಬೇಕೆಂದು ''ನವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮಸಂಬಂಧ ಭೂಮಾಹ್ಯಸ್ಮಿನ್'' ಎಂಬ ಬ್ರಹ್ಮಸೂತ್ರದಲ್ಲಿ ನಿಶ್ಚಯಿಸಿರುತ್ತಾರೆ. ಪ್ರಹ್ಲಾದನಲ್ಲಿ ಪರಮಾತ್ಮನ ಸನ್ನಿಧಾನವು ಹೆಚ್ಚಾಗಿತ್ತು ಎಂದು ಸುಪ್ರಸಿದ್ಧವು. ''ಪ್ರಹ್ಲಾದೋ ಜನ್ಮವೈಷ್ಣವಃ'' ಎಂದುಪ್ರಿಂಟಾದ ಪದ್ಮಪುರಾಣದ ಉತ್ತರಖಂಡದ ವಚನವೂ, ಪ್ರಹ್ಲಾದನು ತಾನು ವಿಷ್ಣುಭೃತ್ಯನೆಂದು ಚಿಂತಿಸುತ್ತಿದ್ದನೆಂದೇ ಹೇಳುವುದು. ವೇದವ್ಯಾಸರು ಪ್ರಹ್ಲಾದನನ್ನು ವಿಷ್ಣುಭೃತ್ಯನೆಂದೇ ಕರೆದಿರುವರು.

''ಸತ್ಯಂ ವಿಧಾತುಂ ನಿಜಭೃತ್ಯ ಭಾಷಿತಂ ವ್ಯಾಪ್ತಿಂ ಚ ಭೂತೇಷು ಅಖಿಲೇಷುಚಾತ್ಮನಃ। ಅದೃಶ್ಯತಾಗತ್ಯದ್ಭುತರೂಪಮುದ್ವಹಂ ಸ್ತಂಭೇ ಸಭಾಯಾಂ ನ ಮೃಗಂ ನ ಮಾನುಷಂ॥''

ಈ ಶ್ಲೋಕದಲ್ಲಿ ಪ್ರಹ್ಲಾದನು ಶ್ರೀನರಸಿಂಹನ ಭೃತ್ಯನೆಂದೂ, ನರಸಿಂಹನು ಸರ್ವಪ್ರಾಣಿಗಳಲ್ಲೂ ವ್ಯಾಪ್ತನಾಗಿರುವನೆಂದೂ ಹೇಳಲ್ಪಟ್ಟಿರುತ್ತದೆ. ವಿಷ್ಣುವೇ ಸರ್ವಜೀವಾಭಿನ್ನನು ಎಂದು ಹೇಳಿರುವುದಿಲ್ಲ. ಆದುದರಿಂದ ನಿರವಕಾಶವಾದ, ಬೇರೆ ಅರ್ಥಕ್ಕೆ ಸ್ವಲ್ಪವೂ ಅವಕಾಶವಿಲ್ಲದಿರುವ, ಪ್ರಸಿದ್ಧವಾದ ಭಾಗವತದ ಪುರಾಣ ಮತ್ತು ಪದ್ಮಪುರಾಣ ವಚನಾನುಸಾರವಾಗಿ, ಸಂದಿಗ್ಧವಾದ ಅರ್ಥವುಳ್ಳ, ವಿವಾದಾಸ್ಪದವಾದ ವಿಷ್ಣುಪುರಾಣ ಶ್ಲೋಕಕ್ಕೆ ಅರ್ಥಮಾಡಿರುವುದು ಉಚಿತವು.

(7) ದೇವೀಭಾಗವತವೇ ಭಾಗವತವೆಂಬ ಶಾಸ್ತ್ರಿಗಳ ಮಾತು ಸರಿಯಲ್ಲ. ಭಾಗವತದ ಅದ್ವೈತವ್ಯಾಖ್ಯಾನಕಾರರಾದ ಶ್ರೀಧರ ಸ್ವಾಮಿಗಳೇ ''ಅಂಬರೀಷ ಶುಕಪ್ರೋಕ್ತಂ ನಿತ್ಯಂ ಭಾಗವತಂ ಶೃಣು।'' ಇತ್ಯಾದಿ ವಚನಗಳನ್ನು ಉದಾಹರಿಸಿ, ''ಅತಏವ ಭಾಗವತಂ ನಾಮಾನ್ಯದಿತ್ಯಪಿ ನ ಶಂಕನೀಯಂ'' ಎಂದರೆ ಶ್ರೀಮದ್ಭಾಗವತವೇ ಸಾತ್ವಿಕವೆಂದು ಪ್ರಸಿದ್ಧವಾದ ಅಷ್ಟಾದಶಪುರಾಣಾಂತರ್ಗತವಾದ ಭಾಗವತವು, ದೇವೀಭಾಗವತವಲ್ಲವೆಂದ ತೀರ್ಮಾನ ಮಾಡಿರುತ್ತಾರೆ.

(8) ವೇದವ್ಯಾಸರು ಜಾರರು, ಹನುಮಂತ ದೇವರು, ಭೀಮಸೇನ ದೇವರು ಇತ್ಯಾದಿಗಳು ಜಾರರು, ಜಾರಜರು ಎಂಬ ನಿಂದೆಯನ್ನು ಶಾಸ್ತ್ರಿಗಳು ಸತಾತ್ಪರ್ಯದಿಂದ ಬರೆದಿರಲಾರರು. ಇವರುಗಳಂತೆ ಶಂಕರಾಚಾರ್ಯರ ಚರಿತ್ರೆಯನ್ನು ತಿಳಿಯಬೇಕೆಂದು ದೃಷ್ಟಾಂತಾರ್ಥವಾಗಿ ಎಂದು ತೋರುತ್ತದೆ. ಇದು ಸರಿಯಾಗಲಾರದು. ವೇದವ್ಯಾಸ ಹನುಮದಾದಿಗಳು ಸಂಪ್ರತಿಪನ್ನವಾದ ಪ್ರಮಾಣಗಳಿಂದ ಪ್ರಮಿತರು. ಅವರು ಜಾರಜರಲ್ಲವೆಂದು ಸಹ ಸಂಪ್ರತಿಪನ್ನವಾದ ಪ್ರಮಾಣಗಳಿಂದ ಪ್ರಮಿತವಾಗುವುವು. (ಶಾಸ್ತ್ರಿಗಳಿಗೂ ವೇದವ್ಯಾಸರ, ಹನುಮಂತನ, ಮತ್ತು ಭೀಮಸೇನನ ನಿರ್ದುಷ್ಟತೆಯ ವಿಷಯದಲ್ಲಿ ದೀಕ್ಷೆ ಇರುವುದೆಂದು ಊಹಿಸಿ ಪ್ರಮಾಣವನ್ನು ಬರೆಯಲಿಲ್ಲ). ಶಂಕರಾಚಾರ್ಯರ ಜನನ ಚರಿತ್ರಾದಿಗಳು ಶಂಕಾರ್ಹವಲ್ಲವೆಂಬಲ್ಲಿಸಂಪ್ರತಿಪನ್ನವಾದ ಪ್ರಿಂಟಾದ ಪುರಾಣ ಗ್ರಂಥಗಳು, ಇತಿಹಾಸಗಳು ಇವುಗಳಿದ್ದರೆ ಸಂತೋಷವೇ. ಅವುಗಳನ್ನು ತೋರಿಸುವ ಭಾರವು ಶಾಸ್ತ್ರಿಗಳ ತಲೆಯ ಮೇಲೆ ಇರುವುದು. ಅದುವರೆವಿಗೂ ಶಂಕರಾಚಾರ್ಯರ ಜನನ ಮತ್ತು ಚರಿತ್ರೆಯ ವಿಷಯದಲ್ಲಿರುವ ಸಂಶಯವು ಹೋಗಲಾರದು.

ವಿಲ್ಸನ್ ಸಾಹೇಬನ ವಚನವು ಕೇವಲ ಮ್ಲೇಚ್ಛನಾದುದರಿಂದ ಸ್ವೀಕಾರಾರ್ಹವಲ್ಲವೆಂಬ ನಿರ್ಣಯವು ಸರಿಯಲ್ಲ. ಮ್ಲೇಚ್ಛರು ನ್ಯಾಯಾಧಿಪತಿಗಳಾಗಿ ಮನುಧರ್ಮಶಾಸ್ತ್ರಕ್ಕೆ ಅನುಗುಣವಾಗಿಯೇ ನಿರ್ಣಯವನ್ನು ಕೊಡುತ್ತಿರುತ್ತಾರೆ. ಯದ್ಯಪಿ ಮ್ಲೇಚ್ಛರು ವೈದಿಕ ಸಂಪ್ರದಾಯವನ್ನು ಅನುಷ್ಠಾನ ಮಾಡಲಾರರು. ಆದರೆ ಅವರು ವೈದಿಕ ಸಂಪ್ರದಾಯಗಳನ್ನು ತಿಳಿಯಬಲ್ಲರು. ಕಿಂಚ ಬಾಲಾದಪಿ ಶುಕಾದಪಿ ಎಂಬ ನ್ಯಾಯವನ್ನನುಸರಿಸಿ, ಯುಕ್ತಿಗಳನ್ನು ನೋಡಿ ಖಂಡನೆ ಮಾಡುವುದು ಉಚಿತವು. ಮ್ಲೇಚ್ಛರಾದ ಡಾಸನ್, ಥಿಬೋ, ಮ್ಯಾಕ್ಡೊನೇಲ್, ಮಾಕ್ಸ್‌ಮುಲ್ಲರ್ ಮುಂತಾದವರು ಅದ್ವೈತಗ್ರಂಥಗಳನ್ನು ತಿಳಿದಿರುವಷ್ಟು ಮಟ್ಟಿಗೆ ಕೇವಲ ಸಂಸ್ಕೃತಾಭಿಜ್ಞರಾದ ಹಿಂದುಗಳು ಸರ್ವಥಾ ತಿಳಿದಿಲ್ಲವೆಂಬುದು, ಅವರ ಗ್ರಂಥ ಪರಾಮರ್ಶೆಮಾಡಿದವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಇನ್ನು ಮೇಲೆ ಸಾಂಬಶಾಸ್ತ್ರಿಗಳು ಮ್ಲೇಚ್ಛೋಕ್ತಿ ಬಂದಾಗ, ಅವರ ಗ್ರಂಥಗಳನ್ನು ತೆಗೆಸಿ, ಅಲ್ಲಿರುವ ಯುಕ್ತಿಗಳನ್ನು ಖಂಡನೆ ಮಾಡುವುದು ಗೌರವವಾದ ಕೆಲಸವು.

ಕಿಂಚ ಶಂಕರಾಚಾರ್ಯರ ಜನನ ಚರಿತ್ರೆಗಳು ನಿರ್ದುಷ್ಟವಾದ ಮಾತ್ರಕ್ಕೆ ಅವರ ಮತವು ಪ್ರಾಮಾಣಿಕವೆಂದು ನಿಶ್ಚಿತ ವಾಗುವುದಿಲ್ಲ. ಗೌತಮಾದಿ ಋಷಿಗಳು ಮಾಡಿರುವ ಶಾಸ್ತ್ರಗಳು ಅಪ್ರಮಾಣಗಳೆಂದೇ ಅದ್ವೈತಿಗಳೂ ಹೇಳಬೇಕು. ಆದುದರಿಂದ ಈ

ಮೂರುವಿಷಯದಲ್ಲಿಯೂ ಶಾಸ್ತ್ರಿಗಳು ಉಭಯ ಸಂಪ್ರತಿಪನ್ನವಾದ ಪ್ರಮಾಣಗಳಿಂದ ಚರ್ಚೆಯನ್ನು ನಡೆಸಬೇಕು. ಇಲ್ಲಿಗೆ ಚಪೇಟಿಕಾತಾಂಡವೋತ್ಸವದಲ್ಲಿಕ್ಷುದ್ರಾಪವಾದ ಪರಿಹಾರವೆಂಬ ದ್ವಿತೀಯೋಧ್ಯಾಯವು ಮುಗಿಯಿತು.

## 3. ಪರಬ್ರಹ್ಮವಿಚಾರವು- ಅದ್ವೈತಮತದ ಅವೈದಿಕತ್ವ ಪ್ರದರ್ಶನವು.

## (ಸಾಂಬ ಗಳಹಸ್ತಿಕಾ- ತೃತೀಯೋಲ್ಲಾಸವು)

ಮುಖ್ಯವಾದ ಶಾಸ್ತ್ರವಿಮರ್ಶೆಯನ್ನು ಅತ್ಯಲ್ಪವಾಗಿ ಶಾಸ್ತ್ರಿಗಳು ಮಾಡಿರುವರು. ಇನ್ನು ಮೇಲೆ ಈ ವಿಷಯದಲ್ಲಿ ಮಾತ್ರ ಯಥೇಷ್ಟವಾದ ವಿವಾದವು ನಡೆಯಲೆಂಬುದು ನಮ್ಮ ಇಚ್ಛೆಯು. ಶ್ರುತಿವಾಕ್ಯ ಪರಾಮರ್ಶರೂಪವಾದ ಕಲಹದಿಂದಲೂ ಸಹ ಜ್ಞಾನವೃದ್ಧಿಯಾಗುವುದು. ಮನಸ್ತಾಪವು ಬಂದರೆ ಚಿಂತಿಲ್ಲ. ಯಾತಕ್ಕೆಂದರೆ, ಅದು ಶಾಸ್ತ್ರವಿಷಯವನ್ನು ಅವಲಂಬಿಸಿದ ಮನಸ್ತಾಪ ವಾಗುತ್ತದೆ. ಒಬ್ಬ ಆಂಗ್ಲೇಯ ಗ್ರಂಥಕರ್ತನು ಮತದ್ವೇಷವು ಮತಿವಂತರಿಗೆ ಉಚಿತವು, ವ್ಯಕ್ತಿದ್ವೇಷವು ಮೂಢರಿಗೆ ಉಚಿತವೆಂದು ನಿರೂಪಿಸಿರುತ್ತಾನೆ. ಮತದ್ವೇಷವೆಂದರೆ ಒಂದು ಅಭಿಪ್ರಾಯದಲ್ಲಿ ಅಪ್ರಾಮಾಣಿಕತಾ ಬುದ್ಧಿಯು. ಶಾಸ್ತ್ರಿಗಳು ಇಂಥಾ ಬುದ್ಧಿಯಿಂದ 'ದ್ವೈತಸಿದ್ಧಾಂತ ವಿಚಾರ'ವೆಂಬ ಗ್ರಂಥದ ಮೊದಲನೆಯ 24 ಪುಟಗಳಲ್ಲಿ ಸಂಗೃಹೀತವಾದ ವಿಷಯಗಳಿಗೆ ಉತ್ತರವನ್ನು ಕೊಡಲಿ. ''ಪುರಾಣದ ಚಕ್ಕಂದದ ಕಥೆಯೇ ಹೊರತು'' ಎಂಬ ಅವರ ಸ್ವಂತವಾಕ್ಯದಿಂದಲೇ, ಸಾಂಬಶಾಸ್ತ್ರಿಗಳು ಪುರಾಣಗಳು ಶಾಸ್ತ್ರಾರ್ಥ ನಿರೂಪಣದಲ್ಲಿ ಪ್ರಮಾಣವಾಗಲಾರದೆಂದು ನಿರೂಪಣ ಮಾಡಿರುತ್ತಾರೆ. ಅದ್ವೈತ ತರಂಗಿಣಿ ಎಂಬ ಗ್ರಂಥದಲ್ಲಿಯೂ ಸಹ ಪುರಾಣ ಗಳು ಪ್ರಮಾಣಗಳಲ್ಲವೆಂದು ಬರೆದಿರುತ್ತಾರೆ. ಆದುದರಿಂದ ಶ್ರುತಿ, ಸೂತ್ರ, ಗೀತಾದಿ ಸಂಪ್ರತಿಪನ್ನ ವಚನಗಳಿಂದ ಅದ್ವೈತತತ್ವವನ್ನು ಸಾಧನೆ ಮಾಡಲಿ.

ಪುಟ 17 ರಲ್ಲಿ ಶಾಸ್ತ್ರಿಗಳು ಶೃತಿ-ಸ್ಮೃತಿ ಪುರಾಣೇತಿಹಾಸಗಳೆಲ್ಲವೂ ಅದ್ವೈತಿಗಳಿಗೆ ಸಾಧಕಗಳೇ ಆಗಿರುವುವು ಎಂದು ಬರೆದಿರುತ್ತಾರೆ. ಇವು ಒಂದೂ ಅದ್ವೈತಕ್ಕೆ ಸಾಧಕವಲ್ಲವೆಂದು ನಾವು ತೋರಿಸುತ್ತೇವೆ. ಶಾಸ್ತ್ರಿಗಳು (ಲಾಯರುಗಳ ಯುದ್ಧದ ನೀತಿಯನ್ನು ಅನುಸರಿಸಿ) ಉತ್ತರವನ್ನು ಸಪ್ರಮಾಣವಾಗಿ ನಿರೂಪಿಸಿದರೆ, ತತ್ವವಿಮರ್ಶಾ ಪ್ರಪಂಚದಲ್ಲಿ ಸೌಜನ್ಯವೂ, ಪ್ರಕಾಶಾವೃದ್ಧಿಯೂ, ಉಂಟಾಗುವುದು. ಅದ್ವೈತ ತತ್ವವು ಅವೈದಿಕವು ಎಂದರೆ ವೇದ ತಾತ್ಪರ್ಯಕ್ಕೆ ವಿರುದ್ಧವಾದ ತತ್ವವು ಎಂಬುದನ್ನು ಈಗ ಉಪಪಾದಿಸುತ್ತೇವೆ. ತಥಾಹಿ:-

ಬೃಹದಾರಣ್ಯಕೋಪನಿಷತ್ ಶಾಂಕರಭಾಷ್ಯದಲ್ಲಿ ಶಂಕರಾಚಾರ್ಯರು ಹೀಗೆ ಬರೆದಿರುತ್ತಾರೆ. '' ನ ಕೇವಲಮುಪನಿಷದೋ ಬ್ರಹ್ಮೈಕತ್ವಂ ಪ್ರತಿಪಾದಯಂತ್ಯಃ ಸ್ವಾರ್ಥವಿಘಾತಂ ಕರ್ಮಕಾಂಡ ವಿಘಾತಂ ಚ ಕುರ್ವಂತಿ ಪ್ರತ್ಯಕ್ಷಾದಿನಿಶ್ಚಿತ ಭೇದ ಪ್ರತಿಪತ್ಯರ್ಥ ಪ್ರಾಮಾಣ್ಯೈಶ್ಚ ವಿರುಧ್ಯಂತೇ। ತಸ್ಮಾದಪ್ರಾಮಾಣ್ಯಮೇವೋಪನಿಷದಾಂ ಅನ್ಯಾರ್ಥತಾವಾಸ್ತು ನತ್ವೇವ ಬ್ರಹ್ಮೈಕತ್ವ ಪ್ರತಿಪತ್ಯರ್ಥತಾ॥''

ಅರ್ಥವು:- ''ತತ್ವಮಸ್ಯಾದಿ ಉಪನಿಷದ್ವಾಕ್ಯಗಳು ಬ್ರಹ್ಮೈಕ್ಯವನ್ನು ಪ್ರತಿಪಾದನೆ ಮಾಡುವುವು ಎಂದು ಹೇಳುವುದಾದರೆ, ಕೇವಲ (ಸೃಷ್ಟಿ ಮತ್ತು ಉಪಸನಾ ವಿಧಾಯಕವಾದ) ಇತರ ಉಪನಿಷದ್ಭಾಗಗಳಿಗೆ ಮಾತ್ರವೇ ವಿರೋಧಮಾಡಿದಂತಾಗುವುದಿಲ್ಲ; ಮತ್ತೇನೆಂದರೆ, (ಮಂತ್ರ ಬ್ರಾಹ್ಮಣಾದಿ ರೂಪವಾದ) ಸಕಲ ಕರ್ಮಕಾಂಡ ವೇದಭಾಗಕ್ಕೂ ವಿರುದ್ಧವಾಗುವುದು; ಭೇದಬೋಧಕ ವೆಂದು ನಿಶ್ಚಿತವಾದ ಪ್ರತ್ಯಕ್ಷಾನುಮಾನ ಪ್ರಮಾಣಗಳಿಗೂ ವಿರುದ್ಧವಾಗುವುದು. ಆದುದರಿಂದ ತತ್ವಮಸ್ಯಾದಿ ಉಪನಿಷದ್ವಾಕ್ಯಗಳಿಗೆ ಅಪ್ರಾಮಾಣ್ಯವಾದರೂ ಆಗಲಿ ಅಥವಾ ಅನ್ಯಾರ್ಥವನ್ನಾದರೂ ಆಗಲಿ ಯಾತಕ್ಕೆ ಕಲ್ಪಿಸಬಾರದು?

ಇಷ್ಟು ಶಾಸ್ತ್ರಿಗಳ ಗುರುಗಳಾದ ಶಂಕರಾಚಾರ್ಯರ ಮಾತುಗಳು. ಇದರಿಂದ ಶಂಕರಾಚಾರ್ಯರ ಅಭಿಪ್ರಾಯವು ಸ್ಪಷ್ಟವಾಗಿ ಈ ರೀತಿ ತೋರಿಬರುವುದು:-

1. ಪ್ರತ್ಯಕ್ಷಪ್ರಮಾಣವು- ಭೇದಬೋಧಕವು ಮತ್ತು ಐಕ್ಯಾರ್ಥಕ್ಕೆ ವಿರೋಧಿಯು.

2. ಅನುಮಾನ ಪ್ರಮಾಣವು- ಭೇದಬೋಧಕವು ಮತ್ತು ತತ್ವಮಸ್ಯಾದಿ ವಾಕ್ಯಗಳಿಗೆ ವಿರೋಧಿಯು.

3. ಕರ್ಮಕಾಂಡ ಸಕಲವೇದಭಾಗಗಳು- ಭೇದಬೋಧಕಗಳು ಮತ್ತು ಐಕ್ಯವಿರೋಧಿಯು.

4. ಸೃಷ್ಟಿಯನ್ನು ಪ್ರತಿಪಾದಿಸುವ ಉಪನಿಷದ್ಭಾಗಗಳು- ಭೇದಬೋಧಕಗಳು ಮತ್ತು ಐಕ್ಯವಾಕ್ಯವಿರೋಧಿಗಳು.

5. ಉಪಾಸನಾದಿಗಳನ್ನು ನಿರೂಪಿಸುವ ಉಪನಿಷದ್ಭಾಗಗಳೂ- ಭೇದಬೋಧಕಗಳು ಮತ್ತು ತತ್ವಮಸ್ಯಾದಿ ವಾಕ್ಯಗಳಿಗೆ ವಿರೋಧಿಗಳು.

ಉಳಿದ ಸರ್ವಪ್ರಮಾಣವಿರುದ್ಧವಾದ ತತ್ವಮಸ್ಯಾದಿ ನಾಲ್ಕೈದು ವಾಕ್ಯಗಳು ಐಕ್ಯಕ್ಕೆ ಆಧಾರಭೂತವಾಗಿವೆ ಎಂದು ಶಂಕರಾಚಾರ್ಯರ ಕೈ ಬರಹದ ಒಪ್ಪಿಗೆಯಾಯಿತು.

ಶಂಕರಾಚಾರ್ಯರೂ ಇನ್ನೂ ಸ್ವಲ್ಪ ಹೆಚ್ಚು ಹೇಳಿರುತ್ತಾರೆ. ತತ್ವಮಸ್ಯಾದಿ ವಾಕ್ಯಗಳೂ ಸಹ ಮುಖ್ಯವೃತ್ತಿಯಿಂದ (ಸಾಂಬ ಶಾಸ್ತ್ರಿಗಳ

ರೀತಿಯಿಂದ ವಾಚ್ಯವೃತ್ತಿಯಿಂದ) ಐಕ್ಯವನ್ನು ಪ್ರತಿಪಾದಿಸುವುದಿಲ್ಲ ಎಂದು ಹೇಳಿರುತ್ತಾರೆ. ಹಾಗೆಂದರೆ, ತತ್ವಮಸಿ ಎಂಬ ವಾಕ್ಯಕ್ಕೆ ಜೀವಬ್ರಹ್ಮರು ಅಭಿನ್ನರು ಎಂದು ಅರ್ಥವಾಗುವುದಿಲ್ಲವೆಂದು ಹೇಳಿರುತ್ತಾರೆ. ಅದರಲ್ಲಿ ಯುಕ್ತಿಯನ್ನೂ ಅವರೇ ಹೇಳಿರುತ್ತಾರೆ.

''ಕಥಮೇಕತ್ವಮನಯೋರ್ಘಟತೇ ವಿಪರೀತಯೋಃ''.

ಸಾರ್ವಜ್ಞಾದಿ ಗುಣಗಳಿಂದ ಸಹಿತನಾದ ಬ್ರಹ್ಮನಿಗೂ, ಅಲ್ಪಜ್ಞನಾದ ಜೀವನಿಗೂ ಪರಸ್ಪರವಿರುದ್ಧಧರ್ಮಗಳಿರುವುದರಿಂದ ಇವರುಗಳಿಗೆ ಮುಖ್ಯೈಕ್ಯವು( ವಿಶಿಷ್ಟೈಕ್ಯವು) ಕೂಡುವುದಿಲ್ಲ. ಎಂದು ಹೇಳಿರುತ್ತಾರೆ. ಮತ್ತು ತತ್ವಮಸಿ ಎಂಬ ವಾಕ್ಯಗಳು ಅಖಂಡಾರ್ಥಬೋಧಕಗಳು ಎಂದು ಹೇಳಿಬಿಟ್ಟರು. ಐಕ್ಯಶಾಸ್ತ್ರವನ್ನು ಪ್ರತಿಪಾದಿಸುವುದಕ್ಕೆ ಆರಂಭಿಸಿ, ತತ್ವಮಸ್ಯಾದಿ ವಾಕ್ಯಗಳೆಲ್ಲಾ ಅಖಂಡಾರ್ಥನಿಷ್ಠವೆಂದು ಒಪ್ಪಿದ ಕ್ಷಣವೇ, ಶಂಕರಾಚಾರ್ಯರ ಅದ್ವೈತತತ್ವವು ಸುರುಳಿ ಮಡುವಿನಲ್ಲಿ ಬಿತ್ತು. ಅದು ಹತವಾಯಿತು. ಇನ್ನು ಸಭೆಯಲ್ಲಿ ಅದರ ಸುದ್ದಿಯು ಅಸಂಗತವು. ಹೇಗೆಂದರೆ, ತತ್ವಮಸಿ ವಾಕ್ಯವು ಅಖಂಡಾರ್ಥಬೋಧಕವೆಂದರೆ, ತತ್ ತ್ವಂ ಅಸಿ ಎಂಬ ಪದಗಳಿಗೆ ಪ್ರತ್ಯೇಕ ಅರ್ಥವಿರುವುದಿಲ್ಲ. ಮತ್ತೇನೆಂದರೆ ಲಕ್ಷಣಯಾ 'ಚಿತ್' ಎಂದು ಇಷ್ಟೇ ಜ್ಞಾನವನ್ನು ಹುಟ್ಟಿಸುವುದು ಎಂದು ಹೇಳುತ್ತಾರೆ. ಅಂತೂ ''ತತ್ವಮಸಿ'' ಎಂದರೆ ''ಚಿತ್'' ಎಂದು ಅರ್ಥವು. ಜೀವಬ್ರಹ್ಮರು ಅಭಿನ್ನರು ಎಂದರ್ಥವಲ್ಲ. ರಾವಣನ ರಾಜಧಾನಿಯಲ್ಲಿ ಬಹು ಗೋಪ್ಯವಾಗಿ ರಕ್ಷಿತವಾಗಿದ್ದ ಮೂಲಬಲದಂತೆ ಭಯಂಕರವಾಗಿದ್ದ ಈ ತತ್ವಮಸಿ ವಾಕ್ಯವು ಅದ್ವೈತಿಗಳಿಗೆ ವಾಗ್ಯುದ್ಧ ಸಮಯದಲ್ಲಿ ಥಳಕು ಸಾಕ್ಷಿ ಹೇಳುವ ಕೋಮಟಿಯಂತೆ ಕೈ ಕೊಟ್ಟಿತು. ಜೀವಬ್ರಹ್ಮರು ಅಭಿನ್ನರು ಎಂದು ಶಂಕರಾಚಾರ್ಯ ರು ಸಾಧನೆ ಮಾಡಬೇಕಾಗಿದೆ. ಈ ವಿಷಯದಲ್ಲಿ ಪ್ರಮಾಣತಮವೆಂದು ಅವರಿಂದ ಉದಾಹೃತವಾದ ತತ್ವಮಸಿ ಮುಂತಾದ ವಾಕ್ಯಗಳು ''ಚಿತ್'' ಎಂಬ ಅಖಂಡಜ್ಞಾನವನ್ನು ಹುಟ್ಟಿಸುವುವೆಂದು ಅವರೇ ಹೇಳಿರುವುದರಿಂದ, ಜೀವಬ್ರಹ್ಮರು ಅಭಿನ್ನರು ಎಂಬ ಜ್ಞಾನವು ಅವರ ರೀತಿಯಿಂದಲೇ ಹುಟ್ಟುವುದಿಲ್ಲವಾದ್ದರಿಂದ, ಐಕ್ಯಶಾಸ್ತ್ರವು ರಾಮಬಾಣಹತವಾದ ಮೂಲಬಲದಂತೆಯೇ ನಿರ್ಮೂಲವಾಯಿತು. ''ಅಹಂ ಬ್ರಹ್ಮಾಸ್ಮಿ'' ಮುಂತಾದ ವಾಕ್ಯಗಳೂ ಅಖಂಡವಾಗಿ 'ಚಿತ್' ಎಂದು ಇಷ್ಟೇ ಬೋಧವನ್ನು ಹುಟ್ಟಿಸು ವುವೆಂದು ಅದ್ವೈತಿಗಳು ಹೇಳಿರುವುದರಿಂದ, ಇವೂ ಕೋಮಟಿ ಸಾಕ್ಷಿಯಂತೆ ಆಗಿ ಹೋದವು.ΘΘ ಜೀವಬ್ರಹ್ಮರುಗಳಿಗೆ ಐಕ್ಯವೆಂಬ ಮತಕ್ಕೆ ಒಂದು ಶ್ರುತಿಯೂ ಇಲ್ಲವೆಂದು ಸಿದ್ಧವಾಯಿತು.

(2) ಅಥವಾ ಅದ್ವೈತಿಗಳು (ಶಾಸ್ತ್ರಿಗಳು) ಹೀಗೆ ಹೇಳಬಹುದು ಯಜಮಾನನನ್ನೇ ಕುಟುವುದಕ್ಕೆ ಬರುವ ಸಾಕಿದ ಚೇಳಿನಂತೆ ಇರುವ ಈ ಅಖಂಡಾರ್ಥ ನಿಷ್ಠತೆಯನ್ನು ಹೇಳುವುದು ನಮಗೆ ಬೇಡ. ತತ್ವಮಸಿವಾಕ್ಯವು ಲಕ್ಷಣಯಾ ಐಕ್ಯಜ್ಞಾನವನ್ನು ಹುಟ್ಟಿಸುವುದು. ತತ್ ಪದಕ್ಕೆ ಲಕ್ಷಣತಯಾ ಸರ್ವಜ್ಞತ್ವಾದಿ ಧರ್ಮಗಳನ್ನು ಬೋಳಿಸಿದಮೇಲೆ ಉಳಿಯುವ 'ಚಿತ್', ತ್ವಂ ಎಂದರೆ ಅಲ್ಪಜ್ಞತ್ವಾದಿ ಧರ್ಮಗಳನ್ನು ಬೋಳಿಸಿದಮೇಲೆ ಉಳಿಯುವ ಚಿತ್, ಅಸಿ ಎಂದರೆ ಇವೆರಡೂ ಒಂದೇ. ವಿರುದ್ಧಧರ್ಮಗಳು ಮಿಥ್ಯಾ ಎಂದು ಅರ್ಥಮಾಡುವೆವು. ಈಗ ನಮ್ಮ ಅಭಿಮತವು ಸಿದ್ಧವಾಯಿತು.

---

ΘΘ ಕೋರ್ಟಿನಲ್ಲಿ, ಪ್ರತಿವಾದಿಯು ಕದ್ದ ಒಂದು ತಂಬಿಗೆಯು ಚಿನ್ನದಿಂದ ಮಾಡಿದ್ದೋ ಅಥವಾ ಬೆಳ್ಳಿಯದೋ ಎಂದು ವಿವಾದ ಬರಲು , ನ್ಯಾಯಾಧಿಪತಿಗಳು ಸಾಕ್ಷಿದಾರನಾಗಿ ಒಬ್ಬ ಕೋಮಟಿಯನ್ನು ತನಿಖೆಮಾಡಲು ಕೋಮಟಿಯು ಈ ರೀತಿ ಹೇಳಿದನು:- ಸ್ವಾಮಿ! ಪ್ರತಿವಾದಿಯು ಒಂದು ತಂಬಿಗೆಯನ್ನು ಒಯ್ಯುತ್ತಿದ್ದನು. ಇಷ್ಟು ನಾನು ಬಲ್ಲೆನು. ಈ ಸಾಕ್ಷಿಗಾರನ ಮಾತು ತಂಬಿಗೆಯು ಬೆಳ್ಳಿಯದೆಂಬುವುದಕ್ಕಾಗಲೀ, ತಂಬಿಗೆಯು ಚಿನ್ನದಿಂದ ಮಾಡಿದ್ದೆಂಬುದಕ್ಕಾಗಲೀ ಸಾಧಕವಾಗಿರುವುದಿಲ್ಲ. ಇದೇ ರೀತಿ ಜೀವಬ್ರಹ್ಮರು ಭಿನ್ನರೋ ಅಭಿನ್ನರೋ ಎಂದು ವಿವಾದ ಬರಲು, ತತ್ವಮಸಿ ಎಂಬ ಅದ್ವೈತಿಗಳಿಂದ ಉದಾಹೃತವಾದ ವಾಕ್ಯವು 'ಚಿತ್' ಅಥವಾ 'ಬ್ರಹ್ಮ' ಎಂದು ಇಷ್ಟೇ ಹೇಳಿ ಸುಮ್ಮನಾಯಿತು. ಆದಕಾರಣ ಆ ವಾಕ್ಯವು ಜೀವಬ್ರಹ್ಮರು ಭಿನ್ನವೆಂದು ಹೇಳುವುದಕ್ಕಾಗಲೀ, ಅಭಿನ್ನವೆಂದು ಹೇಳುವುದಕ್ಕಾಗಲೀ ಸಾಧಕವಾಗಲಿಲ್ಲ. ಮಹಾವಾಕ್ಯಗಳೆಲ್ಲವೂ ಮಹಾ ಆಪತ್ತಿನಲ್ಲಿ ಶಾಸ್ತ್ರಿಗಳನ್ನು ವಂಚಿಸಿಬಿಟ್ಟವು. ಅದು ಯಾತಕ್ಕೆ ಹೀಗಾಯಿತು? ಸಾಂಬಶಾಸ್ತ್ರಿಗಳಾಗಿದ್ದರೆ ಹೀಗೆ ಹೇಳುತ್ತಿದ್ದರು. ಅಂಗಾರ ಮುಖರಾದ ಮಾಧ್ವರನ್ನು ನೋಡಿ 'ಚಿತ್' ಎಂದುಹೇಳಿದ ತತ್ವಮಸಿ ವಾಕ್ಯವು ಇವರ ಸಂಗಡ ವಾದವು ಸಮರಸವಲ್ಲವೆಂದು ಜುಗುಪ್ಸೆಯಿಂದ ತಲೆ ತಗ್ಗಿಸಿ ಕೊಂಡು ಬಿಟ್ಟಿತು. ಇದು ಶಾಸ್ತ್ರಿಗಳ ವಾಕ್ಯಾರ್ಥವು. ಕೋಮಲವಾಗಿ ತಲೆ ಬಗ್ಗಿಸತಕ್ಕದ್ದು ಮಾಧ್ವವಾಕ್ಯಾರ್ಥದಲ್ಲಾಗಿದ್ದರೆ ತತ್ವಮಸಿ ವಾಕ್ಯವು ಗುದ್ದುವುದಕ್ಕೆ ಬರುತ್ತಿತ್ತು. ತತ್ವಮಸಿ ವಾಕ್ಯವನ್ನು ತ್ರ್ಯಂಬಕನಿಗೇ ಹೋಲಿಸಬಹುದು. ತ್ರ್ಯಂಬಕನಿಗೆ ಮೂರು ಕಣ್ಣು. ತತ್ವಮಸಿಗೆ ಮೂರು ಅವಯವವು. ಹೀಗಿದ್ದರೂ ಇದು ಚಕ್ಕರ್ ಕೊಟ್ಟಿತು.

ಅಭಿಮತವು ಸಿದ್ಧವಾಯಿತು. ಆದರೆ ವಜ್ರವನ್ನು ಕೊಟ್ಟು ಒಂದು ಮಂಕರಿ ಬೂದಿಯನ್ನು ಕೊಂಡುಕೊಂಡಂತಾಯಿತು. ಮನೆಯ ಮಗನನ್ನು ಮಾರಿ ಹೊಲೆಯನನ್ನು ಪ್ರತಿಯಾಗಿ ಕೊಂಡುಕೊಂಡಂತಾಯಿತು. ತತ್ವಮಸಿ ವಾಕ್ಯಕ್ಕೆ ವಜ್ರದಂತೆ ಅನರ್ಘ್ಯವಾದ, ಜೇಷ್ಠಪುತ್ರನಂತೆ ಸರಿಯಾದ ಮುಖ್ಯಾರ್ಥವೇ ಭೇದಪರವಾಗಿ ಜಾಗರೂಕವಾಗಿರುವಾಗ ಲಕ್ಷಣಯಾ (ಅಮುಖ್ಯವಾದ) ಐಕ್ಯಾರ್ಥವನ್ನು ಯಾತಕ್ಕೆ ಕಲ್ಪಿಸಬೇಕು? ಸುಪಾಂ ಸುಲುಕ್ ಇತ್ಯಾದಿ ವೈದಿಕ ವ್ಯಾಕರಣ ಸೂತ್ರಾನುಸಾರವಾಗಿ ತತ್ ಪದಕ್ಕೆ ಆರು ವಿಭಕ್ತಿಗಳ ಅರ್ಥವೂ ಬರುವುದು. ಆಗ ತೇನ ತ್ವಮಸಿ, ತಸ್ಮೈತ್ವಮಸಿ, ತಸ್ಮಾತ್ ತ್ವಂ ಅಸಿ, ತಸ್ಯ ತ್ವಂ ಅಸಿ, ತಸ್ಮಿನ್ ತ್ವಂ ಅಸಿ, ಇತ್ಯಾದಿ ಬ್ರಹ್ಮನಿಂದ ನೀನು ಇರುತ್ತೀ, ಬ್ರಹ್ಮನದೆಸೆಯಿಂದ ನೀನು ಇರುತ್ತೀ, ಬ್ರಹ್ಮನ ದೆಸೆಯಿಂದ ನೀನು ಹುಟ್ಟಿರುತ್ತೀ; ಬ್ರಹ್ಮನ ಅಧೀನನು ನೀನು; ಬ್ರಹ್ಮನ ಆಶ್ರಯದಲ್ಲಿ ನೀನು ಇರುತ್ತೀ. ಇತ್ಯಾದಿ ಅನೇಕ ಅರ್ಥಗಳು ಮುಖ್ಯವೃತ್ತಿಯಿಂದಲೇ ಆಗುವುವು. ಮತ್ತು ಸನ್ಮೂಲಾಃ ಸರ್ವಾ ಇಮಾಃ ಪ್ರಜಾಃ ಎಂಬ ಶ್ರುತಿಗೂ ಅನುಗುಣವಾಗಿರುವುದು. ಹೀಗಿರುವಲ್ಲಿ ಸರ್ವಪ್ರಮಾಣವಿರುದ್ಧವಾದ, ನಿರವಕಾಶ ಪ್ರಮಾಣಾಂತರದಲ್ಲಿ ಪ್ರತಿಪಾದಿತವಲ್ಲದ ಕೊರಕಲು ಗುಂಡಿಯಂತಿರುವ ಲಾಕ್ಷಣಿಕವಾದ ಐಕ್ಯಾರ್ಥಕ್ಕೆ ಶಾಸ್ತ್ರಿಗಳ ಮನಸ್ಸು ಯಾತಕ್ಕೆ ಬಿತ್ತು?

ಹೀಗೆಯೇ ಅಹಂ ಬ್ರಹ್ಮಾಸ್ಮಿ, ಪ್ರಜ್ಞಾನಂ ಬ್ರಹ್ಮ ಇತ್ಯಾದಿ ವಾಕ್ಯಗಳು ಅಖಂಡವಾಗಿ 'ಬ್ರಹ್ಮ' ಎಂದು ಇಷ್ಟೇ ಜ್ಞಾನವನ್ನು ಹುಟ್ಟಿಸುವುವೆಂದು ಅದ್ವೈತಿಗಳು ಹೇಳುವುದರಿಂದ ಇವೂ ಜೀವಬ್ರಹ್ಮರ ಅಭೇದಕ್ಕೆ ಸಾಧಕವಾಗಲಾರವು. ಇವು ಲಕ್ಷಣಾವೃತ್ತಿಯಿಂದ ಐಕ್ಯವನ್ನು ಬೋಧಿಸುವುವು ಎಂದು ಹೇಳುವುದಾದರೆ, ದ್ವೈತಸಿದ್ಧಾಂತ ವಿಚಾರದಲ್ಲಿ ಭೇದಪರವಾಗಿ ಮುಖ್ಯಾರ್ಥವೇ ನಿರೂಪಿತ ವಾಗಿರುವುದರಿಂದ ಐಕ್ಯಾರ್ಥವು ತ್ಯಾಜ್ಯವು. ಭೇದ ಪರವಾದ ಯೋಜನೆಯು ಗ್ರಾಹ್ಯವು.

ವೇದವು ಮನೋವಾಕ್ಕುಗಳಿಗೆ ಸರ್ವಥಾ ಅಗೋಚರನಾದ (ಅಜ್ಞೇಯನಾದ) ನಿರ್ಗುಣ ಬ್ರಹ್ಮನನ್ನು ಪ್ರತಿಪಾದಿಸುವು ದೆಂಬಲ್ಲಿ ಪ್ರಮಾಣಗಳೇನು? ಶಾಸ್ತ್ರಿಗಳು ಈ ವಿಷಯದಲ್ಲಿ ನಮ್ಮ ನಿರೂಪಣ ಮಾರ್ಗವನ್ನು ಗುಡಿಸಿ, ನೀರು ಚುಮುಕಿಸಿ, ಅಲಂಕರಿಸಿ ಸಿದ್ಧಮಾಡಿಟ್ಟಿರುವರು. ಕಪ್ಪು ಮಸಿಯನ್ನು ಹಣೆಯಲ್ಲಿ ಬಳಿದುಕೊಂಡಿರುವ ಮಾಧ್ವರಿಗೂ ತಲೆಬಗ್ಗಿ ಚಾಕರಿಮಾಡಿಬಿಟ್ಟರು. (ಇಷ್ಟು ಅತಿಶಯವಾಗಿ ನಾವು ನಿರೂಪಣೆ ಮಾಡಿರುವುದಕ್ಕೆ ಕಾರಣ ಉಂಟು). ಮಾಧ್ವರಲ್ಲಿ ಶಾಸ್ತ್ರಿಗಳಿಗೆ ವಾತ್ಸಲ್ಯವೂ ಉಂಟು. ಹೇಗೆಂದರೆ, ನಿರ್ಗುಣಬ್ರಹ್ಮನು ವಾಚ್ಯವೃತ್ತಿಯಿಂದ ವೇದದಲ್ಲಿ ಪ್ರತಿಪಾದಿಸಲ್ಪಟ್ಟಿರುವುದಿಲ್ಲ ಎಂದು ಘಂಟಾಘೋಷವಾಗಿ ಒಪ್ಪಿಕೊಂಡುಬಿಟ್ಟರು. ಅಂದಮೇಲೆ ಮುಖ್ಯವೃತ್ತಿಯಿಂದ ಅದ್ವೈತಿಗಳ ಬ್ರಹ್ಮನನ್ನು ಪ್ರತಿಪಾದಿಸುವ ಒಂದು ಶ್ರುತಿಯೂ ಇಲ್ಲವೆಂದು ಶಾಸ್ತ್ರಿಗಳು ಹೇಳಿದ ಹಾಗಾಯಿತು. ಮುಖ್ಯವೃತ್ತಿಯಿಂದ ದ್ವೈತಿಗಳ ಬ್ರಹ್ಮನನ್ನು ಪ್ರತಿಪಾದಿಸುವ ಅನಂತವಾಕ್ಯಗಳಿರುತ್ತವೆ. ಆದುದರಿಂದ ಅವು ಪ್ರಬಲವಾದುವು. ಹೀಗಿರುವುದರಿಂದ ದ್ವೈತತತ್ವವು ವೈದಿಕವೂ, ಅದ್ವೈತತತ್ವವು ಅವೈದಿಕವೂ ಆಯಿತೆಂಬುವುದರಲ್ಲಿ ಸಂಶಯವೇನು? ಏನು ಶಾಸ್ತ್ರಿಗಳೇ?

ನಿರ್ಗುಣಬ್ರಹ್ಮನು ಮುಖ್ಯವೃತ್ತಿಯಿಂದ ವೇದಪ್ರತಿಪಾದ್ಯನಲ್ಲವೆಂದು ಹೇಳಿ ಸಾಂಬಶಾಸ್ತ್ರಿಗಳು ಸುಮ್ಮನಾಗಲಿಲ್ಲ. ನಿರ್ಗುಣ ಬ್ರಹ್ಮನನ್ನು ಕಂಡರೆ ಶಾಸ್ತ್ರಿಗಳಿಗೆ ದ್ವೈತಿಗಳಿಗಿಂತ ಹೆಚ್ಚು ಕೋಪ. ಒಬ್ಬೊಬ್ಬ ಮಾಧ್ವನೂ ಸ್ವಲ್ಪಸ್ವಲ್ಪ ಮಸಿಯನ್ನು ದೃಷ್ಟಿಗೆರೆಯಂತೆ ತನ್ನ ಹಣೆಯಮೇಲೆ ಹಚ್ಚಿಕೊಂಡಿರುತ್ತಾನೆ. ಶಾಸ್ತ್ರಿಗಳು ಸಕಲ ಮಾಧ್ವರ ಹಣೆಯಲ್ಲಿರುವ ಮಸಿಯನ್ನೂ ಒಟ್ಟಿಗೆ ತಮ್ಮ ಹಣೆಯಮೇಲೆ ಬಳಿದುಕೊಂಡು, ವೀರವೈಷ್ಣವರಾಗಿ, ಮೊದಲೇ ಕುಟುಕಲ ಜೀವದಿಂದಿದ್ದ ನಿರ್ಗುಣ ಬ್ರಹ್ಮವಾದವನ್ನು ನಿಸ್ಸಂಶಯವಾಗಿ ಸಂಹಾರವೇ ಮಾಡಿಬಿಟ್ಟರು. ಅದು ಹೇಗೆಂದರೆ, ಅರಮನೆಯ ದರ್ಬಾರಿನಲ್ಲಿ ವಿರಾಜಿಸುತ್ತಿರುವ ಮಹಾರಾಜರಂತೆ ನಿರ್ಗುಣ ಬ್ರಹ್ಮನು ಮುಖ್ಯವೃತ್ತಿಯಿಂದ ವೇದದಲ್ಲಿ ಕಂಗೊಳಿಸಲಾರದೇ, ಎಲ್ಲೋ ಮೂಲೆಯಲ್ಲಿ ಅವಿತುಕೊಂಡು ಸಂಕಟಪಡುತ್ತಿರುವುದನ್ನು ನೋಡಿ, ಶಂಕರಾಚಾರ್ಯರು ಮದ್ದಿನಮನೆಯಲ್ಲಿ ಅವನಿಗೂ ಸ್ವಲ್ಪ ಅವಕಾಶಮಾಡಿಕೊಟ್ಟು ಸ್ವಲ್ಪ ಇಲ್ಲಿರು ಎಂದು ಹೇಳಿದ್ದರು; ಎಂದರೆ ನಿರ್ಗುಣಬ್ರಹ್ಮನು ಮುಖ್ಯವೃತ್ತಿಯಿಂದ ವೇದಪ್ರತಿಪಾದ್ಯನಾಗದಿದ್ದರೆ ಚಿಂತಿಲ್ಲ; ಲಕ್ಷಣಯಾ ವೇದಪ್ರತಿಪಾದ್ಯನು ಎಂದು ಹೇಳಿದ್ದರು. ಸಾಂಬಶಾಸ್ತ್ರಿಗಳಿಗೆ ಮಾಧ್ವಸಂಗದಿಂದ ವೀರವೈಷ್ಣವತನವು ಬಂದು ಬಿಟ್ಟಿತು. ಶಾಸ್ತ್ರಿಗಳು ಮದ್ದಿನ ಮನೆಗೇ ಬೆಂಕಿ ಹಚ್ಚಿಬಿಟ್ಟರು. ನಿರ್ಗುಣಬ್ರಹ್ಮವಾದವು ಭೂಗತವಾಗಿ ಹೋಯಿತು. ಇಗೋ ಶಾಸ್ತ್ರಿಗಳ ಮತಾಪಿನಂತಿರುವ ಮಾತು:- ''ಬ್ರಹ್ಮವು ಲಾಕ್ಷಣಿಕ ವೃತ್ತಿಯಿಂದಲಾದರೂ ವಿಷಯವಾಗಲಾರದು. ಆದಲ್ಲಿ ಬ್ರಹ್ಮವು ಸವಿಶೇಷಣವಾಗುವುದರಿಂದ ಅದ್ವೈತಹಾನಿಯೆಂದು ಆಕ್ಷೇಪಿಸುವರು. ಇದು ಶಾಸ್ತ್ರಾನಭಿಜ್ಞರಾದ ವಜ್ರಶುಂಠರ ನುಡಿಯೇ ಹೊರತು ಮತ್ತೆ ಬೇರೆ ಇಲ್ಲ........... ವಿಶೇಷಣಕ್ಕೂ ಉಪಲಕ್ಷಣಕ್ಕೂ ಮೇರುಮಂದರದಂತೆ ತಾರತಮ್ಯವು(ಇರುವುದು). ಉಪಲಕ್ಷಕಗಳಾದ ವಸ್ತುಗಳೆಲ್ಲವೂ ಬ್ರಹ್ಮಪರಿಚಾಯಕಗಳೇ ಹೊರತು ಬ್ರಹ್ಮವಿಶೇಷಣಗಳಲ್ಲವಾದುದರಿಂದ ಬ್ರಹ್ಮನಿರ್ವಿಶೇಷಕ್ಕೆ ಯಾವ ಹಾನಿಯೂ ಇರುವುದಿಲ್ಲ.'' ಇದು ಶಾಸ್ತ್ರಿಗಳ ಮಾತು. ವಜ್ರಶುಂಠರ ನುಡಿಯಲ್ಲ. ಹುಟ್ಟಿದ ಶಿಶುಗಳ ಕರ್ಣರಂಜಕವಾದ ತೊದಲು ನುಡಿಯು. ಇದು

ಬುದ್ಧಿ ದಿವಾಳಿತನದ ಪ್ರದರ್ಶನವು.

1. ಬ್ರಹ್ಮವು ಲಕ್ಷಣಾವೃತ್ತಿಯಿಂದ ವಿಷಯನಾದರೆ ಸವಿಶೇಷಣವಾಗುವುದರಿಂದ ಅದ್ವೈತಹಾನಿಯು ಬರುವುದು. ಆದುದರಿಂದ ಲಕ್ಷಣಾವೃತ್ತಿಯಿಂದಲೂ ವಿಷಯನಾಗಲಾರನೆಂದು ಹೇಳಬೇಕೆಂದು ಹರತಿ ಆಚಾರ್ರು ಬೇಡಿಕೊಂಡರು.

2, ಬ್ರಹ್ಮನು ಲಕ್ಷಣಾವೃತ್ತಿಯಿಂದ ವಿಷಯನಾದರೆ, ಸವಿಶೇಷಣನಾಗುವುದಿಲ್ಲ, ಸೋಪಲಕ್ಷಣನಾಗುವನು. ಆದುದರಿಂದ ಅದ್ವೈತ ಹಾನಿಯು ಬರುವುದು. ಆದುದರಿಂದ ಲಕ್ಷಣಾವೃತ್ತಿಯಿಂದಲೂ ಬ್ರಹ್ಮನು ವಿಷಯನಾಗಲಾರನು ಎಂದು ಸಾಂಬಶಾಸ್ತ್ರಿಗಳು ದಾನ ಮಾಡಿದರು. ಇದು ಫಲಿತ ಸ್ಥಿತಿಯು.

ಈ ದಾನ ಕ್ರಮದಲ್ಲಿ ಮಾತ್ರ ಶಂಕರಾಚಾರ್ಯರ ಕೇಸನ್ನು ಸಾಂಬಶಾಸ್ತ್ರಿಗಳು ಕೆಡಿಸಿಬಿಟ್ಟರು. ಲಂಚ ತೆಗೆದುಕೊಂಡು ಕಕ್ಷಿಗಾರನ ಪಕ್ಷವನ್ನೇ ನಾಶಮಾಡುವಂಥಾ, ಪ್ರತಿವಾದಿಗಳಿಗೆ ಅನುಕೂಲವಾಗುವ ಒಪ್ಪಿಗೆಯನ್ನು ಕೊಡುವ ದ್ರೋಹಿಯಾದ ಲಾಯರಿನಂತೆ, ಸಾಂಬಶಾಸ್ತ್ರಿಗಳು ಕೆಲಸಕ್ಕೆ ಬಾರದ ಒಂದು ವೈಲಕ್ಷಣ್ಯವನ್ನು ತೋರಿಸಿ, ಯುಕ್ತಿಯಿಂದ ಅದು ಹತವಾದ ನಂತರ, ಲಕ್ಷಣಯಾ ಪ್ರತಿಪಾದ್ಯತ್ವವು ಬ್ರಹ್ಮನಿಗೆ ಇಲ್ಲ ಎಂದು ಹೇಳುವಷ್ಟು ಸ್ಥಿತಿಗೆ ತಂದಿಟ್ಟುಬಿಟ್ಟರು.

ಇದು ಹರತಿ ಆಚಾರ್ರ ಸಂಗದ ಪ್ರಭಾವ. ನಮಗೆ ಹೀಗೆ ತೋರುತ್ತದೆ. ಹರತಿ ಆಚಾರ್ರೂ ಸಾಂಬಶಾಸ್ತ್ರಿಗಳೂ ಒಟ್ಟಾಗಿ ಮಾತಾಡಿಕೊಂಡು, ಪುರಾತನವಾದ ಅದ್ವೈತಮತವನ್ನು ಧ್ವಂಸಮಾಡಿ, ಪೃಥಿವಿಯಲ್ಲಿ ಅದರ ಹುಟ್ಟೇ ಇಲ್ಲದಂತೆ ಮಾಡಬೇಕೆಂದು ಪ್ಲಾಟ್ ಮಾಡಿಕೊಂಡಿರುತ್ತಾರೆ. ಅದರಲ್ಲಿ ಹೊರಗಿನಿಂದ ಗುಂಡು ಹೊಡೆಯುವವರು ಹರತಿ ಆಚಾರ್ರು, ಒಳಗಿನಿಂದ ದುರ್ಬಲ ಸ್ಥಳಗಳನ್ನೂ; ಪ್ರಧಾನ ಸ್ಥಾನಗಳನ್ನೂ ತೋರಿಸಿ, ''ಅದ್ವೈತ'' ರಾಜನನ್ನು ಮಟ್ಟಮಾಡುವ ಕೆಲಸವನ್ನು ಪೂರ್ಣಮಾಡುವವರು ಸಾಂಬಶಾಸ್ತ್ರಿಗಳು. ಮೀರ್‌ಸಾದಕನು ಹಸಿರು ಛತ್ರಿಯನ್ನು ಹಿಡಿದು ಟಿಪ್ಪೂಸುಲ್ತಾನನನ್ನು ಇಂಗ್ಲೀಷರ ಬಲಿಗೆ ಒಪ್ಪಿಸಿದಂತೆ, ಸಾಂಬಶಾಸ್ತ್ರಿ ಗಳು ಅದ್ವೈತ ಮರ್ಮಸ್ಥಾನಗಳನ್ನು ಮೊದಲೇ ಸಂಕೇತವಾಗಿದ್ದ ಹರತಿ ಆಚಾರ್ರ ಬಾಣಗಳಿಗೆ ಒಡ್ಡುತ್ತಾ, ಅದ್ವೈತ ತತ್ವದ ಒಂದೊಂದು ಅವಯವವೂ ಕ್ರಮವಾಗಿ ತುಂಡುತುಂಡಾಗಿ ಬೀಳಲು, ಸುಳ್ಳು ಬಾಷ್ಪಗಳನ್ನು ಕರೆಯುತ್ತಾ, ಮಿತ್ರನಾದ ಹರತೀ ಆಚಾರ್ರನ್ನು ಕುರಿತು, ''ಅಯೋ ದುರಾತ್ಮಾ! ಪಾಪೀ! ನಮ್ಮ ರಾಜನು ಸತ್ತನಲ್ಲೋ! ನಿನ್ನನ್ನು ಧ್ವಂಸಮಾಡಿಬಿಡುತ್ತೇನೆ'' ಎಂದು ಕಪಟ ಪ್ರಲಾಪಗಳನ್ನು ಮಾಡುತ್ತಿರುವರು.

ಇದು ಸತ್ಯ; ಸಂದೇಹವೇ ಇಲ್ಲ. ನಮ್ಮನ್ನೂ , ನಮ್ಮ ಮತವನ್ನೂ ಗೌರವದಿಂದ ದ್ವೈತಿಗಳ ಕಾಟದಿಂದ ಇವರು ಉದ್ಧಾರ ಮಾಡುತ್ತಾರೆಂದು ನಂಬಿದ ಸ್ಮಾರ್ತರಿಗೆಲ್ಲರಿಗೂ ಸಾಂಬಶಾಸ್ತ್ರಿಗಳು ದ್ರೋಹಮಾಡಿದರು. ಇವರನ್ನು ನಂಬಿದ ಅದ್ವೈತತತ್ವವು ಕೆಟ್ಟಿತು. ಇಲ್ಲದಿದ್ದರೆ ಇವರು ಇಂಥಾರೀತಿಯಲ್ಲಿ ಉತ್ತರ ಕೊಡುವರೇ? ಹರತೀ ಆಚಾರ್ರು ಅದ್ವೈತಿಗಳು ಹುಚ್ಚರು ಎಂದು ಹೇಳಿದರೆ, ಸಾಂಬಶಾಸ್ತ್ರಿಗಳು 'ಛೀ ಆಚಾರ್ರೇ ನಾವು ಹುಚ್ಚರಲ್ಲ; ನಾವು ಬುದ್ಧಿಶೂನ್ಯರು. ಹುಚ್ಚುತನಕ್ಕೂ ಬುದ್ಧಿಶೂನ್ಯತೆಗೂ ಮೇರುಮಂದರ ದಂತೆ ವ್ಯತ್ಯಾಸವಿರುವುದು ಎಂದು ಹೇಳುವರು. ಈ ರೀತಿಯಾದ ಕಪಟವಾದದಿಂದಲೇ ಅದ್ವೈತಮತದಲ್ಲಿ ಬ್ರಹ್ಮವು ಲಾಕ್ಷಣಿಕ ವೃತ್ತಿಯಿಂದಲಾದರೂ ವಿಷಯನಾಗಲಾರನು ಎಂದು ತೋರಿಸಿಬಿಟ್ಟಿರುತ್ತಾರೆ.

ಅದು ಹೇಗೆಂದರೆ- ನಿಮ್ಮ ಬ್ರಹ್ಮವು ಪ್ರತಿದಿನವೂ ಹಗಲು ದರೋಡೆ ಮಾಡುವುದರಿಂದ ಕಳ್ಳನು ಎಂದು ಹರತಿ ಆಚಾರ್ರು ಹೇಳಿದರು. ಲಂಚದಿಂದ ಕೈ ಬೆಚ್ಚಗಾಗಿದ್ದುದರಿಂದ, ಸಾಂಬಶಾಸ್ತ್ರಿಗಳು ನಮ್ಮ ಬ್ರಹ್ಮನು ಮಧ್ಯರಾತ್ರಿಯಲ್ಲಿ ಒಬ್ಬರೂ ಕಾಣದಂತೆ ಮಗ್ಗಲು ಮನೆ ಅಪ್ಪಾಭಟ್ಟರ ಮನೆಗೆ ಮಾತ್ರ ಕನ್ನಹಾಕುವವನು; ಆದ್ದರಿಂದ ಅವನು ಕಳ್ಳನಲ್ಲ; ಹಗಲು ದರೋಡೆಗೂ, ಗುಟ್ಟು ಕನ್ನಹಾಕುವುದಕ್ಕೂ ಮೇರುಮಂದರದಂತೆ ವ್ಯತ್ಯಾಸವಿರುವುದು. ವಜ್ರಶುಂಠರಾದ ನಿಮಗೆ ಇದು ತಿಳಿಯದು ಎಂದು ಹೇಳಿ ಬಿಟ್ಟರು. ಈ ನಿಂದೋಕ್ತಿಯು ಕಕ್ಷಿಗಾರರಾದ ಸ್ಮಾರ್ತರ ಮನಸ್ಸಂತೋಷಾರ್ಥವಾಗಿಯೇ ಹೊರತು ಹರತಿ ಆಚಾರ್ರ ಮೇಲೆ ಕೋಪದಿಂದಲ್ಲ. ಅದ್ವೈತಮಹಾಜನರಾದರೋ ಶಾಸ್ತ್ರಿಗಳ ಫಳೀರಪ್ಪನ ಗುಡುಗುಡುಗುಡು ಎಂಬ ಓಟ, ಮೇಜಿನ ಹೊಡೆತ, ಕೊಡಲಿ ಪೆಟ್ಟಿನಂಥಾ ಪುರುಷೋಕ್ತಿಗಳು ವಾಗಾಡಂಬರಗಳು ಇವುಗಳನ್ನು ನೋಡಿ ಹರತಿ ಆಚಾರ್ರು ಬಿದ್ದರು; ದ್ವೈತವು ಭೂಗತವಾಯಿತು, ಅದ್ವೈತವು ಅದ್ವಿತೀಯಸ್ಥಾನಕ್ಕೆ ಸಾಂಬಶಾಸ್ತ್ರಿಗಳ ವಾದ ಪ್ರಭಾವದಿಂದ ಏರಿಸಲ್ಪಟ್ಟಿತು ಎಂದು ತಿಳಿದರು. ಶಾಸ್ತ್ರಿಗಳು ಇಂಥಾ ಕೈಕೊಟ್ಟಿದ್ದು ಯಾರಿಗೆ ಗೊತ್ತು? ಪುಟ 24ರಲ್ಲಿ ಅದ್ವೈತಿ ಮುಖಂಡರೆಲ್ಲರೂ ''ಅವೈದಿಕ''ರೆಂದು ಅನಾಯಾಸವಾಗಿ ಏರ್ಪಡುವಂತೆ ನಿರೂಪಿಸಿರುವುದನ್ನು ನೋಡಿದರೆ ಇದು ನಿಶ್ಚಿತವಾಗುವುದು.

ಈಗಲೂ ಕೂಡ ಬ್ರಹ್ಮನು ವಿಶೇಷಣದಿಂದ ಸಹಿತನಾದರೆ ಸವಿಶೇಷಣನಾಗುವನು. ನಿರ್ವಿಶೇಷವಾದಕ್ಕೆ ಭಂಗ ಬರುವುದು ಎಂದು ಹರತಿ ಆಚಾರ್ರು ಹೇಳಿದರು.

ಸಾಂಬಶಾಸ್ತ್ರಿಗಳು ಉಪಲಕ್ಷಣ(=ವಿಶೇಷಣ) ದಿಂದ ಸಹಿತನಾಗುವುದರಿಂದ ನಮ್ಮ ಬ್ರಹ್ಮನು ಸವಿಶೇಷಣನಾಗುವುದಿಲ್ಲ. ಆದುದರಿಂದ ನಿರ್ವಿಶೇಷವಾದಕ್ಕೆ ಹಾನಿ ಇರುವುದಿಲ್ಲ ಎಂದು ಹೇಳಿದರು. ಅಷ್ಟಕ್ಕೇ ಸುಮ್ಮನಿರದೇ, ವಿಶೇಷಣಕ್ಕೂ, ಉಪಲಕ್ಷಣಕ್ಕೂ ಮೇರುಮಂದರದಂತೆ ವ್ಯತ್ಯಾಸ ಇರುವುದು. ಹರತಿ ಆಚಾರ್ರು ಇದನ್ನು ತಿಳಿಯದ ವಜ್ರಶುಂಠರು ಎಂದು ಹೇಳಿಬಿಟ್ಟರು. ಇದಕ್ಕಿಂತ ಇನ್ನೂ ಸ್ವಜನ ದ್ರೋಹವುಂಟೇ? ಹೇಗೆಂದರೆ- ವಿಶೇಷಣ= ಉಪಲಕ್ಷಣ, ಉಪಲಕ್ಷಣ= ವಿಶೇಷಣ. ಆದರೂ ಶಾಸ್ತ್ರಿಗಳು ಹೇಳುವಂತೆ (ಎಷ್ಟು ಚಮತ್ಕಾರದಿಂದ ಹೇಳಿರುವರು) ಮೇರುಮಂದರದಂತೆ ಅವೆರಡಕ್ಕೂ ತಾರತಮ್ಯವಿರುವುದು. ಮೇರು ಶಶವಿಷಾಣದಂತೆ ಎಂದು ಹೇಳಲಿಲ್ಲ. ಉಪಲಕ್ಷಣವೆಂದರೆ ಸ್ವಲ್ಪಕಾಲ ಲಕ್ಷ್ಯಸಂಬಂಧವುಳ್ಳ ವ್ಯಾವರ್ತಕಧರ್ಮವೆಂದರ್ಥವು. ವಿಶೇಷಣವೆಂದರೆ, ಸರ್ವಕಾಲದಲ್ಲೂ ಲಕ್ಷ್ಯಸಂಬಂಧವುಳ್ಳ ವ್ಯಾವರ್ತಕಧರ್ಮವು ಎಂದರ್ಥವು. ಫಲಿತಾಂಶವೇನಾಯಿತೆಂದರೆ, ಸರ್ವಕಾಲದಲ್ಲೂ ಲಕ್ಷ್ಯಸಂಬಂಧವುಳ್ಳ ಧರ್ಮಗಳನ್ನು ನಿಮ್ಮ ಬ್ರಹ್ಮನಿಗೆ ಒಪ್ಪಿದರೆ ನಿರ್ವಿಶೇಷಬ್ರಹ್ಮವಾದವು ಹೋಗುವುದೆಂದು ಹರತಿ ಆಚಾರ್ರು ಹೇಳಿದರು. ಸ್ವಲ್ಪಕಾಲ ಲಕ್ಷ್ಯಸಂಬಂಧವುಳ್ಳ ಧರ್ಮಗಳನ್ನು ಒಪ್ಪಿರುವುದರಿಂದ ನಮ್ಮ ನಿರ್ವಿಶೇಷ ಬ್ರಹ್ಮವಾದಕ್ಕೆ ಏನೂ ಹಾನಿ ಇಲ್ಲ ಎಂದು ಕುರುಬರಿಗೂ ತಿಳಿಯುವಂಥಾ ಅಬದ್ಧೋಕ್ತಿಗಳನ್ನು ಶಾಸ್ತ್ರಿಗಳು ಆಡಿದರು. ಪರಿಣಾಮವೇನಾಯಿತೆಂದರೆ, ವಿಶೇಷಣವೂ ಧರ್ಮವೇ, ಉಪಲಕ್ಷಣವೂ ಧರ್ಮವೇ. ಆದುದರಿಂದ ಬ್ರಹ್ಮನು ಸವಿಶೇಷಣನೂ ಆಗಲಾರನು; ಸೋಪಲಕ್ಷಣನೂ ಆಗಲಾರನು. ಆದುದರಿಂದ, ಅವನು ಲಕ್ಷಣಾವೃತ್ತಿಯಿಂದಲೂ ಸಹ ವಿಷಯನಾಗಲಾರನು. ಅವನು ಸರ್ವಥಾ ವೇದಪ್ರತಿಪಾದ್ಯನಲ್ಲ.

ಏವಂ ಚ ಲಕ್ಷಣಯಾ ಪ್ರತಿಪಾದ್ಯತ್ವವೆಂಬ ಧರ್ಮವೂ ನಿರ್ಗುಣಬ್ರಹ್ಮನಿಗಿರುವುದಿಲ್ಲವೆಂದು ಶಾಸ್ತ್ರಿಗಳು ಹೇಳಿರುತ್ತಾರೆ. ಹರತೀ ಆಚಾರ್ರು ಅವಿವೇಕಿಗಳು. ಸಾಂಬಶಾಸ್ತ್ರಿಗಳು ವೀರವೈಷ್ಣವರಾಗಿ ನಿರ್ಗುಣಬ್ರಹ್ಮನನ್ನು ವೇದವೆಂಬ ಸಿಂಹಾಸನದಿಂದ ಹೊರಗೆ ದಬ್ಬಿ, ಪುನಃ ಎಲ್ಲಿ ನಿರ್ಧರ್ಮಕನಾದ ಶತ್ರುವು ಬಂದು ವೈಷ್ಣವರಿಗೆ ತೊಂದರೆ ಕೊಡುವುದೋ ಎಂದು ನಿರ್ಗುಣಬ್ರಹ್ಮವಾದವನ್ನು ಸುಟ್ಟು; ಬೂದಿ ಮಾಡಿ ಇತರ ಶಾಸ್ತ್ರಿಗಳು ಯಾರಾದರೂ ತಮ್ಮ ದ್ರೋಹವನ್ನು ಕಂಡು ನಿಂದಿಸಬಹುದೆಂಬ ಭೀತಿಯಿಂದ, ವೈಷ್ಣವರಾದ ಹರತಿ ಆಚಾರ್ರನ್ನು ಸ್ವಲ್ಪ ಬೈದಿರುತ್ತಾರೆ. ಅನರ್ಘ್ಯವಾದ ವಜ್ರವನ್ನು ದಾನಮಾಡಿದವರು ಒಂದೆರಡು ಪೆಟ್ಟುಗಳನ್ನು ಕೊಟ್ಟರೂ ಸಹಿಸಲೇಬೇಕು. ಹರತೀ ಆಚಾರ್ರೇ! ನೀವು ತಿಳಿಯದೇ ಕೋಪಿಸಬೇಡಿ. ಶಾಸ್ತ್ರಿಗಳು, ನಿರ್ಗುಣಬ್ರಹ್ಮವಾದವು (ಅದ್ವೈತವು) ಅವೈದಿಕವೆಂದು, ಉಪಪಾದಿಸಿ ತೋರಿಸಿಬಿಟ್ಟರು. ಹೇಗೆಂದರೆ, ಬ್ರಹ್ಮವಸ್ತುವು ವೇದದಲ್ಲಿ ವಚನ ವೃತ್ತಿಯಿಂದ ಪ್ರತಿಪಾದಿಸಲ್ಪಟ್ಟಿರಬೇಕು. ಅಥವಾ ಲಕ್ಷಣಾವೃತ್ತಿಯಿಂದ ಪ್ರತಿಪಾದಿಸಲ್ಪಟ್ಟಿರಬೇಕು. ಬೇರೆ ವೃತ್ತಿಗಳು ಇರುವುದಿಲ್ಲ. ಮೊದಲನೆಯ ವೃತ್ತಿಯಿಂದ ವೇದದಲ್ಲಿ ನಿರ್ಗುಣಬ್ರಹ್ಮವು ಪ್ರತಿಪಾದಿಸಲ್ಪಟ್ಟಿಲ್ಲವೆಂದು ಶಂಕರಾಚಾರ್ಯರೇ ಹೇಳಿಬಿಟ್ಟರು. ವೈಷ್ಣವ ಹಿತೈಷಿಗಳಾದ ಸಾಂಬಶಾಸ್ತ್ರಿಗಳು ಎರಡನೆಯದಾದ ಲಾಕ್ಷಣಿಕವೃತ್ತಿಯಿಂದಲೂ, ನಿರ್ಗುಣ ಬ್ರಹ್ಮನು ವೇದದಲ್ಲಿ ಪ್ರತಿಪಾದಿಸಲ್ಪಟ್ಟಿಲ್ಲವೆಂದು ಸಯುಕ್ತಿಕವಾಗಿ ತೋರಿಸಿಬಿಟ್ಟರು. ವೇದ ಬಹಿಷ್ಕೃತನಾದ ನಿರ್ಗುಣ ಬ್ರಹ್ಮನು, ನಷ್ಟೈಶ್ವರ್ಯವುಳ್ಳ, ಪ್ರಬಲ ಶತ್ರುವಿನಿಂದ ಪೀಡಿತನಾದ ರಾಜನಂತೆ, ಮರಣವನ್ನು ಹೊಂದಿದನು. ಇಷ್ಟನ್ನೂ ದ್ವೈತಿವಾತ್ಸಲ್ಯದಿಂದ ಕ್ರಮವಾಗಿ ನೆರವೇರಿಸಿದ ಶಾಸ್ತ್ರಿಗಳು, ಏನೂ ತಿಳಿಯದ ವರಂತೆ ಗುಟ್ಟಾಗಿ ತಮ್ಮ ಪಂಗಡವನ್ನು ಸೇರಿಸಿಕೊಂಡು, ತಮ್ಮ ಆತ್ಮ ಸಂರಕ್ಷಣಾರ್ಥವಾಗಿ ಹರತಿ ಆಚಾರ್ಯರನ್ನು ಬೈಯುವುದಕ್ಕಾ ರಂಭಿಸಿದರು. ನಿರ್ಗುಣ ಬ್ರಹ್ಮವಾದವು ಅವೈದಿಕವು ಎಂಬುದು ವಜ್ರಾಕ್ಷರಗಳಿಂದ ಸುವರ್ಣದ ಹಲಗೆಗಳಲ್ಲಿ ಬರೆಯಲ್ಪಟ್ಟಂತಾ ಯಿತು.

ಸಾಂಬಶಾಸ್ತ್ರಿಗಳ ರೀತಿಯಿಂದ ವಿಚಾರ ಮಾಡಿದರೆ ಇಲ್ಲಿ ಸ್ವಲ್ಪ ಗುರುದ್ರೋಹವೂ ನಡೆದು ಹೋಯಿತು. ಮೂಲಗುರು ಗಳಾದ ಶಂಕರಾಚಾರ್ಯರು ಪ್ರತಿಪಾದಿಸಿರುವ ತತ್ವಕ್ಕಿಂತ ವಿರುದ್ಧವಾದ ತತ್ವವನ್ನು ಶಾಸ್ತ್ರಿಗಳು ಉಪಪಾದನೆ ಮಾಡಿಬಿಟ್ಟರು. ನಾವು ಮೊದಲೇ ಪ್ರತಿಜ್ಞೆಮಾಡಿಕೊಂಡಿರುತ್ತೇವೆ. ಪಿಶಾಚಿಯನ್ನಾದರೂ ವಾಗ್ಯುದ್ಧದಲ್ಲಿ ದುರಾತ್ಮನೆಂದು ಬಯ್ಯಬಾರದು. ದಡ್ಡನೆಂದು ತೋರಿಸಬಹುದು. ಸಾಂಬಶಾಸ್ತ್ರಿಗಳು ಅದ್ವೈತತತ್ವಜ್ಞಾನಶೂನ್ಯರಾದ ದಡ್ಡರು. ಇದು ದಡ್ಡತನದ ಉಚ್ಚ ವೈಭವವು. ಇದು ಘೋರವಾದ ತಮಸ್ಸು, ತತ್ವಜ್ಞಾನ ನಾಶಕವಾದ ಗಾಢಾಂಧಕಾರವು.

ನಿರ್ಗುಣಬ್ರಹ್ಮನನ್ನು ವೇದದಿಂದ ಹೊರಗೆ ಓಡಿಸಿಬಿಟ್ಟು, ಅವನ ವಿಷಯದಲ್ಲಿ ''ಏತದಪ್ರಮೇಯಂ'' ಅಸ್ಥೂಲಂ, ಅನಣುಂ, ಅಹ್ರಸ್ವಂ, ಅದೀರ್ಘಂ, ಅಸಂಗಂ, ಅಚಕ್ಷುಷಂ, ಅವಾಕ್, ಅಮನಃ, ಅತೇಜಸ್ಕಂ, ಇತ್ಯಾದಿ ರೀತಿಯಾಗಿ ಶ್ರುತಿಗಳನ್ನು ಉದಾಹರಿಸಿ ದ್ದಾರೆ. ಪೂರ್ವದಲ್ಲಿ ಮೊಗಲಾಯಿ ರಾಜ್ಯದಲ್ಲಿ ಚಕ್ರವರ್ತಿಯು ಮೃತನಾಗಿದ್ದರೂ ಜನರಿಗೆ ಆ ಸಮಾಚಾರವು ಇನ್ನು ತಿಳಿಯಬಾರ ದೆಂದು ಮಂತ್ರಿಯು ಅರಮನೆಯ ಹೊರಗೆ ಬಂದು ಘಟ್ಟಿಯಾಗಿ ಸಾರ್ವಭೌಮನ ನಾಮಾವಳಿಯನ್ನು ಓದುತ್ತಿದ್ದನಂತೇ!. ಇದೂ ಹಾಗೆಯೇ ಆಯಿತು. ಶಾಸ್ತ್ರಿಗಳು

ನಿರ್ಗುಣಬ್ರಹ್ಮನು ಮುಖ್ಯವೃತ್ತಿಯಿಂದಲಾಗಲೀ, ಲಕ್ಷಣಾವೃತ್ತಿಯಿಂದಲಾಗಲೀ ಬ್ರಹ್ಮನು ವೇದ ಪ್ರತಿಪಾದ್ಯನಲ್ಲವೆಂದು ತೋರಿಸಿಕೊಟ್ಟು, ''ಅಸ್ಥೂಲಮನಣು'' ಇತ್ಯಾದಿ ಶ್ರುತಿಗಳನ್ನು ಉದಾಹರಿಸಿರುವರು. ಈ ಶ್ರುತಿಯು ಯಾರನ್ನು ಪ್ರತಿಪಾದಿಸುವುದು? ನಿರ್ಗುಣನನ್ನಲ್ಲ; ಯಾತಕ್ಕೆಂದರೆ ಆತನಿಗೆ ಉಭಯವಿಧವಾದ ವೃತ್ತಿಯಿಂದಲೂ ಪ್ರತಿಪಾದ್ಯತ್ವವು ಇಲ್ಲ. ಸಗುಣನನ್ನಲ್ಲ; ಯಾತಕ್ಕೆಂದರೆ ಅವನಲ್ಲಿ ಅದ್ವೈತಮತರೀತ್ಯಾ ಅಸ್ಥೂಲತ್ವಾದಿ ಗುಣಗಳಿರುವುದಿಲ್ಲ. ಏವಂ ಚ ಅಸ್ಥೂಲತ್ವಾದಿ ಗುಣಗಳು ಹಾಗೆಯೇ ಉಳಿದು ಹೋದವು. ಸಿಕ್ಕವರಿಗೆ ಸೀರುಂಡೆ! ಬೇಕಾದವರು ಆರಿಸಿಕೊಳ್ಳಬಹುದು.

ಆದುದರಿಂದ ಶಾಸ್ತ್ರಿಗಳ ಈ ಶ್ರುತ್ಯುದಾಹರಣವು ಅಸಂಗತವೇ! ಇದು ಹಗಲು ಕಳ್ಳತನವು. ನೋಡುತ್ತಿದ್ದಹಾಗೆಯೇ ಭಯಂಕರ ವಾದ ಪ್ರಮಾಣಗಳ ಅತಿಕ್ರಮವು.

ಒಬ್ಬ ಅಮೇರಿಕ ಗ್ರಂಥಕರ್ತನೂ ಹೀಗೆಯೇ ಹೇಳಿರುತ್ತಾನೆ.

"It tells us of an omnipresent, eternal, boundless and immutable principle on which all speculation is impossible since it is beyond the range of all thoughts and is both unthinkable and unspeakable. Then we have a right to say that we do not think that it is omnipresent or that it is eternal and immutable since such stuff is as bad as anything "

ಈ ಅದ್ವೈತತತ್ವವು ಸರ್ವವ್ಯಾಪ್ತವಾದ, ನಿತ್ಯವಾದ, ಅನಂತವಾದ, ಅಕ್ಷರವಾದ ಜಿಜ್ಞಾಸೆಗೇ ವಿಷಯವಾಗದಿರುವ, ಆದುದರಿಂದಲೇ ಮನಸ್ಸಿಗೂ, ವಾಗಿಂದ್ರಿಯಕ್ಕೂ ಸರ್ವಥಾ ಅಗೋಚರವಾದ ಒಂದಾನೊಂದು ತತ್ವವು ಉಂಟೆಂದು ಹೇಳುತ್ತದೆ. ಹಾಗಾದರೆ( ಅದು ನಮ್ಮ ಮನಸ್ಸಿಗೆ ಸುತರಾಂ ಅವೇದ್ಯವಾದರೆ, ಅದರ ಸ್ವರೂಪವೇ ನಮಗೆ ತಿಳಿಯದಿರುವುದಾದರೆ) ಅದು ವ್ಯಾಪ್ತವಲ್ಲವೆಂತಲೂ, ನಿತ್ಯವಲ್ಲ, ಅನಂತವಲ್ಲವೆಂತಲೂ ಯಾತಕ್ಕೆ ಹೇಳಬಾರದು? ಯಾತಕ್ಕೆಂದರೆ ಅಂಥಾ ಸುತರಾಂ ಅವೇದ್ಯವಾದ ಪದಾರ್ಥವು ಹೇಯಪದಾರ್ಥಗಳಲ್ಲೆಲ್ಲಾ ಅತ್ಯಂತ ಹೇಯವು.

ಇಲ್ಲಿಗೆ ಅದ್ವೈತಾವೈದಿಕತ್ವ ಪ್ರದರ್ಶನ ಪರವಾದ ಬ್ರಹ್ಮವಿಚಾರವೆಂಬ ತೃತೀಯೋಲ್ಲಾಸವು ಮುಗಿದುದು.

## 4. ಮಾಯಾವಾದದ ಅವೈದಿಕತ್ವಾದಿ ದೋಷಪ್ರದರ್ಶನವು

### ಸಾಂಬ ಗಳಹಸ್ತಿಕಾ - ಚತುರ್ಥೋಲ್ಲಾಸವು.

ನಿರ್ಗುಣಬ್ರಹ್ಮವೆಂಬ ರಾಜನನ್ನು ವೇದವೆಂಬ ರಾಜಗೃಹದಿಂದ ಹೊರಗೆ ಹಾಕಿ ಶಾಸ್ತ್ರಿಗಳು ಸಾಯಿಸಿಬಿಟ್ಟರೆಂದು ನಿರೂಪಿಸಿದೆವು. ಶಾಸ್ತ್ರಿಗಳು ಹಾಗೆ ಮಾಡಲಿಲ್ಲ, ತಮ್ಮ ಅತ್ಯುತ್ಕಟ ಕೋಪಕ್ಕೆ ಪಾತ್ರನಾದ, ಕಂಡವರ ರಾಜ್ಯವನ್ನು ಆಕ್ರಮಿಸಿರುವ 'ನಿರ್ಗುಣಬ್ರಹ್ಮ'ನೆಂಬ ದುಷ್ಟರಾಜನಿಗೆ ಸದ್ಯೋಮರಣವು ಉಚಿತವಲ್ಲವೆಂದು ಯೋಚಿಸಿ, ನಿರಂತರ ಕಾರಾಗೃಹವನ್ನು ಕಲ್ಪಿಸಿರುವರು. ಇಂಥಾ ಕಲ್ಪನಾಶಕ್ತಿಯು ಇಕ್ಕಟ್ಟಾದ ಸೆರೆಯಲ್ಲಿ ಬಹುಜನ ಆಂಗ್ಲೇಯರನ್ನು ಬಂಧಿಸಿದ ಸಿರಾಜುದ್ದೌಲನಿಗಿರಲಿಲ್ಲ.

ಅದು ಹೇಗೆಂದರೆ-ನಿರ್ಗುಣ ಚಿನ್ಮಾತ್ರನಾದ ಸಾಕ್ಷಾತ್ ಪರಬ್ರಹ್ಮನಿಗೆ ಮಾಯೆಯು ಸ್ವಾಭಾವಿಕವಾಗಿ ಸಂಬದ್ಧವಾಗಿರುವುದೆಂದು ಹೇಳಿರುತ್ತಾರೆ. ಇಗೋ! ನಿರ್ಗುಣಬ್ರಹ್ಮನಿಗೆ ಸಾಂಬಶಾಸ್ತ್ರಿಗಳು ಕೊಟ್ಟಿರುವ ಜೈಲ್ ಆರ್ಡರ್‌ನಂತಿರುವ ಅವರ ಮಾತುಗಳು:- 'ಮಾಯೆಯೆಂಬುದು ಅಗ್ನಿಯಲ್ಲಿರುವ ಔಷ್ಣ್ಯದಂತೆಯೂ, ಸೂರ್ಯನಲ್ಲಿರುವ ಪ್ರಕಾಶದಂತೆಯೂ ಬ್ರಹ್ಮಶಕ್ತಿಯೇ ಹೊರತು ಬೇರೆ ಪದಾರ್ಥವಲ್ಲ. ಶಕ್ತಿಶಕ್ತಿಮತ್ಪದಾರ್ಥಗಳಿಗೆ ವ್ಯವಹಾರದಲ್ಲಿ ಭೇದವಿದ್ದರೂ ಸ್ವರೂಪದಲ್ಲಿ ಭೇದವಿಲ್ಲ.''

ಈ ವಾಕ್ಯಗಳಲ್ಲಿ ಅಗ್ನಿಗೆ ಔಷ್ಣ್ಯವು ಹೇಗೆ ಸ್ವಾಭಾವಿಕವೋ, ಜಲಕ್ಕೆ ಶೈತ್ಯವು ಹೇಗೆ ಸ್ವಾಭಾವಿಕವೋ, ಗಾಳಿಗೆ ಬೀಸುವುದು ಹೇಗೆ ಸ್ವಾಭಾವಿಕವೋ,(ಸುರಿಯುವ ಮಳೆಯಂತೆ ಬೈಯ್ಯುವ ಬರವಣಿಗೆಯನ್ನು ಬರೆಯುವುದು ಶಾಸ್ತ್ರಿಗಳಿಗೆ ಹೇಗೆ ಸ್ವಾಭಾವಿಕವೋ ಹಾಗೆಯೇ ಆಕಾಶ,ವಾಯು, ತೇಜಸ್ಸೇ ಮೊದಲಾದ ನಾನಾ ಪರಿಣಾಮಗಳಿಗೆ ಉಪಾದಾನವಾದ ಮಾಯೆಯು ಬ್ರಹ್ಮಸ್ವರೂಪಭೂತ ವಾದ ಧರ್ಮವು ಎಂದು ಶಾಸ್ತ್ರಿಗಳು ಹೇಳಿಬಿಟ್ಟರು. ಲೋಕದ ಬಂದೀಖಾನೆಯಲ್ಲಿ ಅಪರಾಧಿಗಳ ಕಾಲಿಗೆ ಸಂಕೋಲೆಯನ್ನು ಹಾಕುವರು. ಕೈಕೋಳವನ್ನು ಹಾಕುವರು. ಶಾಸ್ತ್ರಿಗಳಿಗೆ ಇಂಥಾ ಶಿಕ್ಷೆಯನ್ನು ನಿರ್ಗುಣಬ್ರಹ್ಮನಿಗೆ ಕೊಟ್ಟರೂ ತೃಪ್ತಿಯಿಲ್ಲ. ಶಾಸ್ತ್ರಿಗಳು ನಿರ್ಗುಣಬ್ರಹ್ಮನಿಗೆ ಯಾತನಾ ಶರೀರವನ್ನು ಕೊಟ್ಟು, ಅವನ ಹೊಟ್ಟೆಗೆ ಬೆಂಕಿ ಹಾಕಿ, ಅವನನ್ನು ನಾನಾವಿಧವಾದ ಮೂಸೆಗಳಲಿಟ್ಟು ತಮ್ಮ ತಪೋಬಲದಿಂದ ಅವನ ಸ್ವರೂಪವನ್ನು ಕರಗಿಸಿ, ಅವನ ಸ್ವಭಾವದಲ್ಲೇ ವಿಕಾರಹೊಂದಿಸಿ, ಅವನನ್ನುಮಣ್ಣಾಗಿಯೂ, ಕಲ್ಲಾಗಿಯೂ, ನೀರಾಗಿಯೂ, ವಿಷ್ಠೆಯಾಗಿಯೂ ಪರಿಣಾಮ

ಹೊಂದಿಸಿಬಿಟ್ಟರು. ಸ್ವಲ್ಪತಪ್ಪುಮಾಡಿದ ಅಹಲ್ಯೆಗೆ ಕೆಲವು ಸಂವತ್ಸರ ಕಾಲದವರೆಗಿನ ಅಶ್ಮಭಾವವು ಗೌತಮರಿಂದ ಶಿಕ್ಷಾರೂಪವಾಗಿ ವಿಧಿಸಲ್ಪಟ್ಟಿತು. ವಿಷ್ಣುವೈಷ್ಣವದ್ವೇಷಿಯಾದ, ವೇದವೆಂಬ ರಾಜ್ಯಾಪಹಾರದಲ್ಲಿಯೇ ತಾತ್ಪರ್ಯವನ್ನಿಟ್ಟಿದ್ದ, ಖಳನಾದ ನಿರ್ಗುಣಬ್ರಹ್ಮನನ್ನು, ಮುಕ್ಕಣ್ಣನಾದ ಮಹಾದೇವನಿಗೂ ಮೀರಿದ ಶಕ್ತಿಯೂ, ಕೋಪವೂ ಮೂರ್ತಿಮಂತರಾದ ಸಾಂಬಶಾಸ್ತ್ರಿಗಳು ಪುನಃ ಪುನಃ ಬಂಡೇಕಲ್ಲಾಗುವಂತೆ ಮಾಡಿರುವರು; ಅವನನ್ನು ಮಣ್ಣು ಮಾಡುವರು; ಬೂದಿಮಾಡುವರು; ಒಮ್ಮೊಮ್ಮೆ ಅಪ್ಪಳಿಸಿ ನೆಲಕ್ಕೆ ಹೊಡೆಯುವರು, ನಂತರ ಗರಗರನೆ ತಿರುಗಿಸಿ ಮೇಲಕ್ಕೆ ಒಗೆಯುವರು; ಇನ್ನೊಮ್ಮೆ ಅವನ ತಲೆಯ ಜುಟ್ಟನ್ನು ಹಿಡಿದು ಮೇಲೆ ಗುದ್ದುವರು; ಇಷ್ಟಾದರೂ ಸುಡುಗಾಡು ಪ್ರಾಣವು ಹೋಗುವು ದಿಲ್ಲ. ನಿರ್ಗುಣ ಬ್ರಹ್ಮನು ತತ್ತಳಿಸುವನು. ಮೂರ್ಛಿತನಾಗುವನು. ಶಾಸ್ತ್ರಿಗಳ ವಚನ ಬೇಟೆಗೆ ಸಿಕ್ಕಿಬಿದ್ದಿರುವ ಆ ಖಳನು ಮೂರುಲೋಕದಲ್ಲಿ ಎಲ್ಲಿಹೋದರೆ ತಾನೇ ತಪ್ಪಿಸಿಕೊಳ್ಳುವನು. ಅವನ ಗತಿಯಾಯಿತು. ಅವನು ಭೂಗತನಾದನು. ಅವನಿಗೆ ಇನ್ನು ಈ ಸ್ಥಿತಿಯಿಂದ ಇನ್ನು ಬಿಡುಗಡೆಯು ಅನಾದ್ಯನಂತ ಕಾಲದಲ್ಲಿ ಯಾವಾಗಲೂ ಇಲ್ಲ. ದ್ವೈತಿಗಳು ವಿಷ್ಣುದ್ವೇಷಿಗಳಾದ ಕೆಲವು ಜನ ದುರ್ಜನರಿಗೆ ಅಂಧಂತಮಸ್ಸೆಂಬ ನಿತ್ಯ ನರಕವಾಗುವುದೆಂದು ಹೇಳುತ್ತಿದ್ದರು. ಶಾಸ್ತ್ರಿಗಳು ತಮ್ಮ ಬೇಟೆಯ ಉದ್ದಿಶ್ಯ ಅಂಧತಮಸ್ಸನ್ನೂ ತಮ್ಮ ಅಖಾಡಕ್ಕೆ ಕಿತ್ತುಕ್ಕೊಂಡುಬಿಟ್ಟು, ನಿರ್ಗುಣಬ್ರಹ್ಮನನ್ನು ಅಲ್ಲಿ ಅದುಮಿ, ಅಲ್ಲಿ ಅವನು ಅಯ್ಯೋ! ಕುಯ್ಯೋ! ಮುರ್‍ಯೋ! ಉಸ್! ಅಪ್ಪ! ಅಮ್ಮಮ್ಮ! (XX) ಎಂದು ಹೇಳಿದರೆ, ''ನೀಚನೇ! ಇದು ನಾರಾಯಣನ ನಾಮಗಳಲ್ಲ. ನಿನ್ನನ್ನು ಈ ಗೋಳುಗಳು ಕಾಪಾಡಲಾರವು'' ಎಂದು ಹೇಳುತ್ತಲೇ ಪಾದದಿಂದ ತಾಡನೆ ಮಾಡುತ್ತಾ, ಇನ್ನೂ ಮನಸ್ತೃಪ್ತಿಯು ಆಗದೇ, ಬಂದಿಯಾದ ನಿರ್ಗುಣಬ್ರಹ್ಮನನ್ನು ಹರತೀ ಆಚಾರ್ರೇ ಮುಂತಾದಂಥಾವರ ವಶಮಾಡಿ, ದುಶ್ಯಾಸನನು ದ್ರೌಪದೀ ವಸ್ತ್ರಾಪಹರಣದಿಂದ ಮನಸ್ಸಿನಲ್ಲಿ ತೃಪ್ತಿಯಿಲ್ಲದಿದ್ದರೂ ಉಪರಮ ಹೊಂದಿದಂತೆ, ಸ್ವಲ್ಪ ಕೋಲಿಜಿಯೇಟ್ ಹೈಸ್ಕೂಲಿನಲ್ಲಿ ಹುಡುಗರ ಸಂಗಡ ಸಾಹಿತ್ಯದ ಚಕ್ಕಂದದ ಮಾತಿನಿಂದ ವಿಶ್ರಾಂತಿ ಯನ್ನು ಹೊಂದುತ್ತಿರುವರು.

ವಾಚಕ ಮಹಾಶಯರೇ! ಶಾಸ್ತ್ರಿಗಳ ತಾತ್ಪರ್ಯವು ನಿಮಗೆ ವಿದಿತವಾಗಿರಬಹುದು. ಜಗತ್ಪರಿಣಾಮಿಕಾರಣವಾದ ಮಾಯೆಯು ಬ್ರಹ್ಮನಿಗೆ ಸ್ವಾಭಾವಿಕ ಧರ್ಮವೆಂದರೆ ಬ್ರಹ್ಮನೇ ಮಾಯೆಯು, ಬ್ರಹ್ಮನೇ ಮಾಯೆಯ ಪರಿಣಾಮವು ಎಂದು ಅರ್ಥವು. ಎಂದರೆ ಬ್ರಹ್ಮನೇ ಆಕಾಶವು, ಬ್ರಹ್ಮನೇ ವಾಯುವು, ಬ್ರಹ್ಮನೇ ತೇಜಸ್ಸು, ಪೃಥಿವಿಯು, ಸಪ್ತಸಮುದ್ರಗಳು, ಮತ್ತು ಮಹಾತಮಸ್ಸು; ಬ್ರಹ್ಮನೇ ಹಂದಿಯು; ಕೋಳಿಯು, ಕುರಿಯು, ನಾಯಿಯು, ವೈತರಣಿಯಲ್ಲಿ ಮಗ್ನನಾದ ನಾರಕಿಯು ಮತ್ತು ತಮಸ್ಸಿನಲ್ಲಿ ಕೊರಗುವ ವಿಮೂಢನು. ಸರ್ವಸಂಸಾರವೂ ಬ್ರಹ್ಮನಿಗೆ ಸ್ವಾಭಾವಿಕವು.ಇದು ಶಾಸ್ತ್ರಿಗಳ ತತ್ತ್ವವು. ಈ ರೀತಿಯಾದ ಮಾತನ್ನು ಶಾಸ್ತ್ರಿಗಳ ದೃಷ್ಟಿಯಿಂದ ನೋಡಿದ್ದರೆ ಇದಲ್ಲವೇ ಸ್ಮಾರ್ತವಾಕ್ಯಾರ್ಥವು! ಎಂದು ಹೇಳುತ್ತಿದ್ದರು. ಸಾಂಬಶಾಸ್ತ್ರಿಗಳು ತಪ್ಪು ಬರೆದರೆ, ಸ್ಮಾರ್ತ ಬ್ರಾಹ್ಮಣರು ಮಾಡಿದ ಪಾಪವೇನು? ಆದುದರಿಂದ ನಾವು ಅಷ್ಟು ಹೇಳುವುದಿಲ್ಲ. ನಾವು ಶಾಸ್ತ್ರಿಗಳಿಗೆ ಅದ್ವೈತತತ್ತ್ವವು ಸರ್ವಥಾ ತಿಳಿಯದೆಂದು ಹೇಳುತ್ತೇವೆ. ಮಾಯೆಯು ಬ್ರಹ್ಮನಿಗೆ ಸ್ವಾಭಾವಿಕ ಧರ್ಮವು ಎಂಬ ಅವರ ವಾದವು ದಡ್ಡತನದ ಪರಾಕಾಷ್ಠೆಯನ್ನು ತೋರಿಸುವುದು. ಇದು ಅಗಾಧವಾದ ವಿಪರೀತಜ್ಞಾನವು. ದುರಂತ ಪಾಪಮೂಲವಾದ ಅಪ್ರಾಮಾಣಿಕವಾದವು.

ಮಾಯೆಯು (ಅಥವಾ ಅವಿದ್ಯೆಯು) ಬ್ರಹ್ಮನಿಗೆ ಸ್ವಾಭಾವಿಕವೆಂದು ವಾದಿಸಿದರೆ ಬರುವ ಮುಖ್ಯವಾದ ಕೆಲವು ದೋಷಗಳನ್ನು ನಿರೂಪಿಸುತ್ತೇವೆ.

1. ಮಾಯೆಯು ಬ್ರಹ್ಮನಿಗೆ ಸ್ವಾಭಾವಿಕವಾದುದು ಎಂದರೆ ಮಾಯಾತ್ಮಕವಾದ ಈ ಯಾವತ್ತು ಪ್ರಪಂಚವು( ದುಃಖಮಯವಾದ ಸಂಸಾರವು) ಬ್ರಹ್ಮನಿಗೆ ಸ್ವಾಭಾವಿಕವೆಂದು ಪ್ರಾಪ್ತವಾಗುವುದು.

2. ''ಸ್ವಾಭಾವಿಕಸ್ಯ ಅನಪಾಯಾತ್'' ಎಂಬ ನ್ಯಾಯಾನುಸಾರವಾಗಿ ಒಂದು ವಸ್ತುವಿನ ಸ್ವಾಭಾವಿಕಧರ್ಮವು ವಸ್ತುನಾಶವಾಗುವ ವರೆಗೂ ನಾಶವಾಗತಕ್ಕದ್ದಲ್ಲ. ಮಾಯೆಯು ಬ್ರಹ್ಮನಿಗೆ ಸ್ವಾಭಾವಿಕವಾದರೆ, ಬ್ರಹ್ಮನು ನಿತ್ಯನಾದುದರಿಂದ ಮಾಯೆಯೂ ನಿತ್ಯವಾಗಿ ಯಾವಾಗಲೂ

---

XX ನಾರಾಯಣನು ಸರ್ವಶಬ್ದವಾಚ್ಯನಾದರೆ ಮರಣಕಾಲದಲ್ಲಿ ''ಅಯ್ಯೋ ಅಮ್ಮಾ'' ಇತ್ಯಾದಿ ಮೇಲ್ಕಂಡ ಶಬ್ದೋಚ್ಚಾರಣದಿಂದ ಯಾಕೆ ಮುಕ್ತಿಯಾಗಬಾರದು? ಎಂದು ಶಾಸ್ತ್ರಿಗಳು ಕೇಳಿರುತ್ತಾರೆ. ಆ ಶಬ್ದಗಳಿಂದ ಬೋಧ್ಯವಾದ ಭಗವದ್ಗುಣಗಳ ಜ್ಞಾನಪೂರ್ವಕವಾಗಿ ಭಕ್ತಿಯನ್ನು ನಾರಾಯಣನನ್ನು ಧ್ಯಾನಮಾಡಿ ಪ್ರಾಣ ಬಿಡುವ ಜ್ಞಾನಿಯು ಮುಕ್ತನಾಗುವನೆಂದು ಶಾಸ್ತ್ರಸಿದ್ಧಾಂತವು.

ಬ್ರಹ್ಮನನ್ನು ಬಿಡುವುದಿಲ್ಲ ಎಂದು ಪ್ರಾಪ್ತವಾಯಿತು. ಅಥವಾ ಮಾಯೆಯು ಅನಿತ್ಯವಾದರೆ, ಬ್ರಹ್ಮನೂ ಅನಿತ್ಯವೆಂದು ಒಪ್ಪಬೇಕಾಗುವುದು. ಕೆಲವು ಪಿಶಾಚಿಗಳು ತಾವು ಹಿಡಿದ ಗರ್ಭಿಣಿಯರನ್ನು ಕೊಂದು ಅವರ ಸಂಗಡಲೇ ಆ ದೇಹವನ್ನು ಬಿಡುತ್ತವೆ. ಅನಿತ್ಯವಾದ ಮಾಯೆಯು ಬ್ರಹ್ಮನಿಗೆ ಸ್ವಾಭಾವಿಕವಾದರೆ ನಿರ್ಗುಣಬ್ರಹ್ಮನನ್ನು ಕೊಂದೇ ತಾನೂ ನಿವೃತ್ತವಾಗಬೇಕು. ಸ್ವಾಭಾವಿಕ ಧರ್ಮಧರ್ಮಿಗಳು ನಿತ್ಯಾವಿಯೋಗಿಯಾದ ದಂಪತಿಗಳು. ಬ್ರಹ್ಮಮಾಯೆಗಳೆರಡೂ ಅನಿತ್ಯವು ಅಥವಾ ಎರಡೂ ನಿತ್ಯವೆಂದು ಪ್ರಾಪ್ತವಾಗುವುದು.

3. ಕಿಂಚ ಶಾಸ್ತ್ರಿಗಳ ಈ ಉಪಪಾದನೆಯಿಂದ ಜಗತ್ತು ಸತ್ಯವೆಂದೇ ಪ್ರಾಪ್ತವಾಯಿತು. ''ಬ್ರಹ್ಮಸತ್ಯಂ'' ಎಂದು ಶಾಸ್ತ್ರಿಗಳೇ ಒಪ್ಪಿರುತ್ತಾರೆ. ಅಂಥಾ ಬ್ರಹ್ಮನಿಗೆ ಸ್ವಾಭಾವಿಕ ಧರ್ಮವಾದ ಮಾಯೆಯೂ ಸಹ ಸತ್ಯವೆಂತಲೇ ಪ್ರಾಪ್ತವಾಗುವುದು. ಆದುದರಿಂದ ಮಾಯಾತ್ಮಕ ವಾದ ಈ ಜಗತ್ತು ಸತ್ಯವೇ. ಅಥವಾ ಸ್ವಾಭಾವಿಕ ಧರ್ಮವಾದ ಮಾಯೆಯು ಅಸತ್ಯವಾದರೆ, ಧರ್ಮಿಯಾದ ಬ್ರಹ್ಮನೂ ಅಸತ್ಯನಾಗ ಬೇಕು. ಶಾಸ್ತ್ರಿಗಳು ಮಾಯೆಯೆಂಬ ದೊಡ್ಡ ಬಂಡೆಕಲ್ಲನ್ನು ಬ್ರಹ್ಮನ ಕೊರಳಿಗೆ ಕಟ್ಟಿರುವರು. ಅಥವಾ ತಮ್ಮ ಮಂತ್ರಸಾಮರ್ಥ್ಯದಿಂದ ಮಹಾ ಪಿಶಾಚಿಯನ್ನು ಆಕರ್ಷಣೆಮಾಡಿ ಬ್ರಹ್ಮನ ಹೊಟ್ಟೆಯಲ್ಲಿ ತುರುಕಿರುವರು. ಮಿಥ್ಯಾಭೂತವಾದ ಸ್ವಾಭಾವಿಕ ಧರ್ಮವಾದ ಮಾಯೆಯು ಬ್ರಹ್ಮನನ್ನು ಮಿಥ್ಯಾಮಾಡದೇ ಬಿಡಲಾರದು.

4. ಕಿಂಚ ಮಾಯೆಯು ಬ್ರಹ್ಮನ ಸ್ವಾಭಾವಿಕ ಧರ್ಮವಾದರೆ ಮಾಯಾಮಯವಾದ ಈ ಯಾವತ್ತು ಪ್ರಪಂಚವುಬ್ರಹ್ಮನ ಧರ್ಮವಾದಂತಾಗುವುದು. ಬ್ರಹ್ಮನೇ ಕಲ್ಲು! ಬ್ರಹ್ಮನೇ ಮಣ್ಣು! ಔಷ್ಣ್ಯವು ಅಗ್ನಿಗಿರುವಂತೆ ಬ್ರಹ್ಮನೇ ಸ್ವಾಭಾವಿಕವಾದ ಮಾಯಾಪರಿಣಾಮವಾದ ಗೂನುಬೆನ್ನುಳ್ಳವನು, ಕೊಳೆತಕಾಲುಳ್ಳವನು, ಮತ್ತು ಉಬ್ಬಿದ ಹೊಟ್ಟೆಯುಳ್ಳವನು. ಗೂರಲು ರೋಗವು ಬ್ರಹ್ಮನ ಸ್ವಾಭಾವಿಕ ಧರ್ಮವು, ಪ್ಲೇಗು , ಕಾಲರ, ಇನ್‌ಫ್ಲೂಯೆಂಜಾ, ಉಬ್ಬಸ, ಪರಿಣಾಮಶೂಲೆ ಮುಂತಾದ ಸಕಲ ಮಾಯಾಪರಿಣಾಮಗಳೆಲ್ಲವೂ ಅಗ್ನಿಗೆ ಔಷ್ಣ್ಯದಂತೆ ಬ್ರಹ್ಮನಿಗೆ ಸ್ವಾಭಾವಿಕ ಧರ್ಮಗಳು.

ಇದು ಹರತಿ ಆಚಾರ್‍ರನ್ನು ಮೋಟುಮಾಡುವುದಕ್ಕೆ ಹೊರಟ ಶಾಸ್ತ್ರಿಗಳ ಉಜ್ಜ್ವಲವಾದ ಜ್ಞಾನದ ಕಾಂತಿಯು. ಇದು ಶಾಸ್ತ್ರಿಗಳ ಅಪ್ರತಿಹತವಾದ ವಾಕ್ಯಾರ್ಥವು.೧೧ ಹರತಿ ಆಚಾರ್‍ರು ಒಂದೆರಡು ಕುರೂಪಗಳನ್ನು ನಿರ್ಗುಣಬ್ರಹ್ಮನಿಗೆ ಶಾಸ್ತ್ರಿಗಳು ಹೇಳಿರುತ್ತಾರೆ ಎಂದು ಹೇಳಿದುದರಿಂದ, ಶಾಸ್ತ್ರಿಗಳು ಸಿಟ್ಟುಮಾಡಿಕೊಂಡು ಅದನ್ನು ಹರತಿ ಆಚಾರ್ಯರ ಮುಖದಲ್ಲಿ ಹಚ್ಚಿಬಿಟ್ಟರು. ಸಹಸ್ರ ರೂಪಾಯಿಗಳನ್ನು ಕೊಡಬೇಕಾದವನಿಗೆ ಒಂದು ಕಾಸನ್ನು ಕೊಡುವುದು ಯಾವನ್ಯಾಯವು? ಅನಂತ ಕುರೂಪಗಳನ್ನು ಶಾಸ್ತ್ರಿಗಳು ಬ್ರಹ್ಮನಿಗೆ ಉಂಟುಮಾಡಿ ಸಕಲ ಜನರಿಗೂ ನಾಟಕ ಶಾಲೆಯನ್ನು ಕಲ್ಪಿಸಿರುವರು. ಈ ಜ್ಞಾನದ ಸೊಬಗು ಹಳ್ಳಿ ಮೂಲೆಯಲ್ಲಿರುವ ಹರತಿ ಆಚಾರ್‍ರಿಗೆ ಬರುವುದೆಂತು? ಶಾಸ್ತ್ರಿಗಳ ಈ ಕಲಾವಿದ್ಯಾಪಾರಂಗತೆಯು ರಾಜಧಾನಿಯಲ್ಲಿ ಸಾಕ್ಷಾತ್ ಶ್ರೀಮಹಾರಾಜರ ಆಸ್ಥಾನದಲ್ಲಿ ಶಿಕ್ಷಿತವಾದುದು. ಹರತೀ ಆಚಾರ್‍ರೇ! ಹುಷಾರ್! ಆಸ್ಥಾನದ ಮಲ್ಲನ ಸಂಗಡ ಹೋರಾಡುವುದಕ್ಕೆ ಹೊರಡಬೇಡಿ. ನಿಮ್ಮ ಮೂಲೆಯಲ್ಲಿ ನೀವು ಕುಳಿತು ರಾಜಧಾನಿಯ ರಂಗಸ್ಥಳದಿಂದ ಶಾಸ್ತ್ರಿಗಳು ಪ್ರಕಟಮಾಡುವ ದಿಗಂತವಿಸ್ತೃತವಾದ ಬ್ರಹ್ಮನ ಕುರೂಪ ಸಮುದಾಯವನ್ನು ನೋಡಿ, ಇವೆಲ್ಲಾ ಬ್ರಹ್ಮನ ಸ್ವಾಭಾವಿಕ ಧರ್ಮಗಳು. ಇಷ್ಟು ಕುರೂಪಗಳನ್ನು ಮಾಡಲಾರದುದ ರಿಂದಲೇ ನಿಮಗೆ ''ಚಪೇಟಿಕಾ''ವನ್ನು ಶಾಸ್ತ್ರಿಗಳು ಕೊಟ್ಟಿರುತ್ತಾರೆ. ಅದು ನಿಮಗೆ

---

೧೧ ಗುದ್ದುವುದು ಮಾಧ್ವವಾಕ್ಯಾರ್ಥವೆಂದು ಶಾಸ್ತ್ರಿಗಳು ಗ್ರಂಥದಲ್ಲಿ ಬರೆದಿರುತ್ತಾರೆ. ಪೂರ್ವದಲ್ಲಿ ತ್ರ್ಯಂಬಕ ಶಾಸ್ತ್ರಿಗಳನ್ನು ಒಬ್ಬ ಮಾಧ್ವನು ಸಭೆಯಲ್ಲಿ ಗುದ್ದಿದನೆಂದು ಶಾಸ್ತ್ರಿಗಳು ಬರೆದಿರುತ್ತಾರೆ. ನಾವು ರೀಸರ್ಚವರ್ಕಮಾಡಿನೋಡಿದೆವು. ಆಳವಾಗಿ ಭೂಮಿಯನ್ನು ಬಗೆದು ಈ ವಿಷಯವನ್ನು ವಿಚಾರಿಸಿದೆವು. ನಡೆದ ಸಂಗತಿಯು ಇದು:- ಸಭೆಯಲ್ಲಿ ತ್ರ್ಯಂಬಕ ಶಾಸ್ತ್ರಿಗಳ ಪೂರ್ವಪಕ್ಷ ನಿರಾಕರಣ ಪೂರ್ವಕವಾಗಿ ''ವ್ಯಾಸಸ್ಮೃತಿಯ'' ಒಂದು ವಾಕ್ಯವನ್ನು ಮಾಧ್ವಪಂಡಿತರು ಉದಾಹರಿಸಿದರು. ಸಾಂಬಶಾಸ್ತ್ರಿಗಳು ಹೇಳಿರುವ ಮೇರೆಗೆ ಸ್ಮಾರ್ತ ವಾಕ್ಯಾರ್ಥದಲ್ಲಿ ಪ್ರವಿಷ್ಟರಾದ ತ್ರ್ಯಂಬಕ ಶಾಸ್ತ್ರಿಗಳು ''ವ್ಯಾಸಸ್ಮೃತಿ ಅಪಸ್ಮೃತಿ'' ಎಂದು ಅಪಹಾಸ ಮಾಡಿ ನಕ್ಕರು. ಮಾಧ್ವವಾಕ್ಯಾರ್ಥದಲ್ಲಿ ನಿಸ್ಸೀಮರಾದ ಮಾಧ್ವಪಂಡಿತರು ಛಟೀರ್ ಎಂದು ಶಾಸ್ತ್ರಿಗಳ ಕೆನ್ನೆಗೆ ಹೊಡೆದರು. ''ಬುರ್'' ಎಂದುಕೆನ್ನೆ ಊದಿಕೊಂಡಿತು. ಮಾಧ್ವಪಂಡಿತರು ಸ್ವಲ್ಪವಿಹ್ವಲಿತರಾಗಿ ಓಡಿಹೋಗಿದ್ದರಂತೆ. ಆಗ ಕೃಷ್ಣರಾಜ ಒಡೆಯರು ಅವರನ್ನು ಕರೆಸಿ ನಡೆದ ಸಂಗತಿಯನ್ನು ಕೇಳಿದಮೇಲೆ ''ನೀವು ಒಂದು ಕೆನ್ನೆಗೆ ಹೊಡೆದದ್ದರಿಂದ ಒಂಟಿ ಶಾಲನ್ನು ಕೊಟ್ಟಿರುತ್ತೇನೆ'' ಎಂದು ಹೇಳಿ ಒಂಟಿ ಶಾಲನ್ನು ಇನಾಮು ಕೊಟ್ಟರಂತೆ. ಭೂಪತಿರಂಗ! ಎಂದು ಭುಜವನ್ನು ಚಪ್ಪರಿಸುತ್ತಾ ಮಾಧ್ವಪಂಡಿತರು ಮನೆಗೆ ಹೋದರಂತೆ! ನಂತರ ತ್ರ್ಯಂಬಕ ಶಾಸ್ತ್ರಿಗಳು ಕಾಶಿ ತಿಮ್ಮಣ್ಣಾಚಾರ್ಯರಿಂದ ವಾದದಲ್ಲಿ ಪರಾಜಿತರಾದರು. ತಿಮ್ಮಣ್ಣಾಚಾರ್ಯರು ವಾಕ್ಯಾರ್ಥದಲ್ಲಿ ಹೇಳಿದ ಯುಕ್ತಿಗಳನ್ನು 'ಕುಮತಖಂಡನ' ಎಂಬ ತಮ್ಮ ಗ್ರಂಥದಲ್ಲಿ ಬರೆದಿರುತ್ತಾರೆ. ಅದು ಕಾಶೀಪ್ರಾಣೇಶಾಚಾರ್ಯರಿಂದ ಪ್ರಿಂಟ್ ಮಾಡಲ್ಪಟ್ಟಿದೆ.

ಉಚಿತವು. ಇನ್ನಾದರೂ ಪಂಚಾಕ್ಷರಿಯಾದ ''ಗಳಹಸ್ತಿಕಾ'' ವನ್ನು ಜಪಿಸಿ.

ಶಾಸ್ತ್ರಿಗಳು ನಿರೂಪಣೆ ಮಾಡಿರುವ ಬ್ರಹ್ಮನ ಸ್ವಾಭಾವಿಕ ಧರ್ಮಗಳನ್ನು ನಾವು ನೋಡಿದೆವು. ಆದರೆ ಅಂಥಾ ಸ್ವಾಭಾವಿಕ ಧರ್ಮಗಳುಳ್ಳ ದುರ್ದೈವವನ್ನು ನಾವು ಮನಃಪೂರ್ವಕವಾಗಿ ತಿರಸ್ಕರಿಸುವೆವು. ಅದು ವೇದ ತಾತ್ಪರ್ಯಕ್ಕೆ ಸಮ್ಮತವಾದ ಪರಬ್ರಹ್ಮವಸ್ತುವಲ್ಲ. ಮಾಯಾ ಅಥವಾ ಅವಿದ್ಯೆಯು ಯಾವ ರೀತಿಯಿಂದಲೂ ಅದ್ವೈತತತ್ವದಲ್ಲಿ ನಿರೂಪಿತವಾಗಲಾರದೆಂದು ಅನೇಕ ಗ್ರಂಥಕರ್ತರು ಸಮ್ಮತಿ ಕೊಟ್ಟಿರುತ್ತಾರೆ. ಕೆಲವು ವಾಕ್ಯಗಳನ್ನು ಮಾತ್ರ ಉದಾಹರಿಸುತ್ತೇವೆ:-

(1)''But whence come this Avidya the principal cause of ignorance, sin and misery? No satisfactory answer has been given to the question." The Vedantha by V.S.Ghate. M.A. (Bombay) (cantab) Doctor of university of Paris. P.25.

ಅರ್ಥವು:- ಅಜ್ಞಾನ, ಪಾಪ, ದುಃಖಗಳಿಗೆಲ್ಲಾ ಮೂಲ ಕಾರಣವಾದ ಅವಿದ್ಯೆಯು ಎಲ್ಲಿಂದ ಬಂತು? (ಅಂದರೆ ಬ್ರಹ್ಮನಿಗೆ ಹೇಗೆ ತಾನೇ ಸಂಬಂಧಿಸುವುದು) ಈ ಪ್ರಶ್ನೆಗೆ ಅದ್ವೈತತತ್ವದಲ್ಲಿ ಸರಿಯಾದ ಉತ್ತರವನ್ನು ಕೊಟ್ಟಿರುವುದಿಲ್ಲ.

(2) "' It (Maya) is something which cannot obviously be connected with the one Great Being" W.S.Urquahart. M.A. D. Litt, Vice Chancellor of the Calcutta University.

ಬ್ರಹ್ಮನು ಒಬ್ಬನೇ ಸತ್ಯನೆಂದು ಒಪ್ಪಿದಮೇಲೆ ಈ ತತ್ವದಲ್ಲಿ ಅವನಿಗೆ ಮಾಯಾಸಂಬಂಧವನ್ನು ಯಾವರೀತಿಯಿಂದಲೂ ಯೋಜನೆ ಮಾಡವುದಕ್ಕೆ ಆಗುವುದಿಲ್ಲ ಎಂದು ತಾತ್ಪರ್ಯವು.

(3) "The word Maya is a mere name! it is no explanation". Rabindranath Tagore.

ಮಾಯಾ ಎಂಬುದು ಒಂದು ಹೆಸರಾಯಿತೇ ಹೊರತು ತತ್ವವಿಷಯಕ ಪ್ರಶ್ನೆಗಳಿಗೆ ಉತ್ತರವಾಗಲಿಲ್ಲ.

(4)"The primeval Avidya is left unexplained. It is not to be accounted for as little as Brahma can be accounted for" Max Muller.

ಜಗತ್ಪರಿಣಾಮಗಳಿಗೆ ಮೂಲಭೂತವಾದ ಅವಿದ್ಯೆಯ ವಿಷಯದಲ್ಲಿ, ಅಜ್ಞೇಯನಾದ ಬ್ರಹ್ಮನವಿಷಯದಲ್ಲಿ ಹೇಗೋ ಹಾಗೆಯೇ ಅದ್ವೈತಿಗಳು ಯಾವ ಉತ್ತರವನ್ನೂ ನಿರೂಪಿಸಿರುವುದಿಲ್ಲ.

(5) Sankara has not reconciled the claims of relative experience and transcedent consciousness.... This plurality of relation of relative consciousness is due to Nesceience. It has no raison d'etre in the Absolute" (P.114) Mahendranath sirear M.A. Phil.

ಪರಮಾರ್ಥತತ್ವವು ಬ್ರಹ್ಮನು ಒಂದೇ ಎಂಬ ತತ್ವದಲ್ಲಿ ಯಾವ ರೀತಿಯಿಂದಲೂ ಅವಿದ್ಯೆಯನ್ನು ನಿರೂಪಿಸುವುದಕ್ಕಾಗುವುದಿಲ್ಲ ಎಂದು ಸಾಮಾನ್ಯಾರ್ಥವು.

ಮಾಯಾ ತತ್ವವು ವೇದದಲ್ಲಿ ಎಲ್ಲೂ ಭೂತಕನ್ನಡಿಯನ್ನು ಹಾಕಿಕೊಂಡು ನೋಡಿದರೂ ಸಿಕ್ಕಲಾರದೆಂದು ಸಾಂಬಶಾಸ್ತ್ರಿಗಳಿಗೆ ಸಮ್ಮತ ವಾದ ಪಂಡಿತರು ಹೇಳಿರುತ್ತಾರೆ:-

(6)."In inquiring whether the Upanishads maintain the Maya doctrine,............ not a word to that effect is met with anywhere." George Thibaut.

ಉಪನಿಷತ್ತುಗಳು ಮಾಯಾವಾದವನ್ನು ಎಲ್ಲಿಯಾದರೂ ಪ್ರತಿಪಾದಿಸುವುವೇ ಎಂದು ವಿಚಾರಮಾಡಿದರೆ........... ಎಲ್ಲಿಯಾದರೂ ಅದರ ಸದ್ಭಾವ ವಿಷಯದಲ್ಲಿ ಒಂದು ಪದವೂ ಇಲ್ಲ.™

ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ ಮಾಯಾವಾದದ ಅವೈದಿಕತ್ವಾದಿ ದೋಷ ಪ್ರದರ್ಶನವೆಂಬ ಚತುರ್ಥೋಲ್ಲಾಸವು

---

™ ವೈದಿಕ ಸಂಪ್ರದಾಯಾನಭಿಜ್ಞನಾದ ಮ್ಲೇಚ್ಛನ ಸಮ್ಮತಿಯನ್ನು ತನ್ನ ಅಭಿಪ್ರಾಯಕ್ಕೆ ಉಪೋದ್ಬಲಕವಾಗಿ ಕೊಡುವ ಈ ಹರತಿ ಆಚಾರ್ರು ನೀಚರೆಂದು ಸಾಂಬಶಾಸ್ತ್ರಿಗಳು ತಮ್ಮ ತೀರ್ಮಾನವನ್ನು ಬರೆದು, ತಾವು ದ್ವೈತಿಗಳು ಪ್ರಚ್ಛನ್ನ ಕ್ರಿಸ್ತರೆಂಬಲ್ಲಿ ಜಾನ್‌ಸನ್, ಥಿಬೋ ಎಂಬ ಇಬ್ಬರು ಮ್ಲೇಚ್ಛರನ್ನು ಸಹಾಯಕ್ಕೆ ಕರೆದುಕೊಂಡರು. ಹರತಿ ಆಚಾರ್ರು ಗೊಡ್ಡು ವೈದಿಕರು. (ಮುಂದುವರೆದಿದೆ)

ಮುಗಿದುದು.

5. ದ್ವೈತತತ್ವದ ಅನಾದಿತ್ವ ಮತ್ತು ವೈದಿಕತ್ವ ಸಮರ್ಥನವು.

ಶಾಸ್ತ್ರಿಗಳು ಮಧ್ಯೇ ಮಧ್ಯೇ ಅನೇಕ ನಿಂದಾಸುರಿಮಳೆಗಳನ್ನು ಸುರಿಸಿರುತ್ತಾರೆ. ಮತ್ತು ಸುಳ್ಳುಗಳನ್ನು ಬರೆದಿರುತ್ತಾರೆ. ''ಭದ್ರಂ ಕರಃ ಶಂಕರಃ'' ಎಂದುಹೇಳಿ, ಆ ಭದ್ರಂಕರನಾದ ಶಂಕರನ ಕೀರ್ತಿಗೇ ಭದ್ರಾಕರಣಮಾಡುವಂಥಾ ಮೂರುನಾಲ್ಕು ಮಾತುಗಳನ್ನು ಆದ್ಯ ಶ್ಲೋಕದಲ್ಲೇ ಸೇರಿಸುತ್ತಾರೆ. ಶಂಕರಾಚಾರ್ಯರ ಕೀರ್ತಿನಾಶಕವಾದಂಥಾ ಒಂದೆರಡು ಮಾತುಗಳನ್ನೂ ಸಹ ಬರೆದಿರುತ್ತಾರೆ. ನಾವು ಸಣ್ಣ ವಿಷಯದಲ್ಲಿ ದೃಷ್ಟಿಯಿಡುತ್ತಾ ಹೋದರೆ ಗ್ರಂಥವು ವಿಸ್ತಾರವಾಗುವುದು. ಮುಖ್ಯವಾಗಿ ಶಾಸ್ತ್ರಿಗಳ ನಿಂದೆಯನ್ನು ಮಾತ್ರ ವಿವರಿಸಬೇಕಾಗಿದೆ. ಜನಮನೋಲ್ಲಾಸಕವಾದುದರಿಂದಲೂ ಅವುಗಳ ಚುನಾವಣೆಯು ಉಚಿತವು.

ಹರತೀ ಆಚಾರ್ರು ಮಾಧ್ವರೇ ಅನಾದಿಯಾದ ವೈದಿಕರು, ಅವರೇ ಬ್ರಹ್ಮದೇವರ ಪರಂಪರೆಯಿಂದ ಬಂದ ನಿಜವಾದ ವೇದತತ್ವವನ್ನು ಅವಲಂಬಿಸಿದ ಪ್ರಾಜ್ಞರು, ಇತರ ಸರ್ವಮತಗಳೂ ಕಲ್ಪಿತಗಳು, ನವೀನವಾಗಿ ಜನ್ಮವನ್ನು ಹೊಂದಿರುವ ಜಲಬುದ್ಬುದಗಳು ಮತ್ತು ವೈದಿಕ ಸಂಪ್ರದಾಯದ ಗಂಧವನ್ನೇ ಅರಿಯದ ತಾಂತ್ರಿಕ ತತ್ವಗಳೆಂದು ಮನಸ್ಸಿನಲ್ಲಿಯೇ ವಿಶಾಲವಾದ ಉಪ್ಪರಿಗೆಯ ಮನೆಯನ್ನು ಕಟ್ಟಿಕೊಂಡು ಸಮಕಕ್ಷೆಯಿಂದ ಆಸ್ಥಾನ ವಿದ್ವಾಂಸರಾದ ಶಾಸ್ತ್ರಿಗಳ ಸಂಗಡಕ್ಕೆ ಹೋರಾಟಕ್ಕೆ ಹೊರಟರು. ಶಾಸ್ತ್ರಿಗಳು ರಾಜಧಾನಿ ವಿದ್ವಾಂಸರು. ಕೇಳಬೇಕೇ! ಅವರು ಜರ್ಮನೀ, ಆಂಗ್ಲೇಯರ ಯುದ್ಧ ಸಮಯದಲ್ಲಿ ನೂತನವಾಗಿ ಕಂಡುಹಿಡಿದಿರುವ ಸಕಲ ಯುದ್ಧೋಪಕರಣಗಳ ಸಾಮಗ್ರಿರಚನೆಯಲ್ಲಿಯೂ, ಪ್ರಯೋಗದಲ್ಲಿಯೂ ಅದ್ವಿತೀಯ ಕೌಶಲ್ಯವನ್ನು ಪಡೆದು ಬಿರುದು ಹೊಂದಿದವರು.

ಶಾಸ್ತ್ರಿಗಳು ಹೇಳುವುದೇನೆಂದರೆ:- ಅದ್ವೈತವೇ ವೈದಿಕಮತವು. ಅನಾದಿ ಕಾಲದಿಂದ ಅದ್ವೈತವಾದವನ್ನು ಯೋಗ, ಸಾಂಖ್ಯ, ಕಣಾದ, ಗೌತಮರೇ ಮೊದಲಾದ ಸಕಲ ದರ್ಶನಾನುಯಾಯಿಗಳೆಲ್ಲರೂ ಬೈದಿರುತ್ತಾರೆ. ಹಾಗೆ ಅವರು ಅದ್ವೈತವನ್ನು ನಿಂದಿಸಬೇಕಾದರೆ, ಅದ್ವೈತಮತವು ಹಿಂದಿನಿಂದ ಇರಬೇಕು ಎಂದು ಸಿದ್ಧವಾಯಿತೋ ಇಲ್ಲವೋ? ಫ್ರೆಂಚರು, ಅಮೇರಿಕಾ ದವರು, ಆಂಗ್ಲೇಯರು, ಇವರೆಲ್ಲರೂ ಜರ್ಮನಿಯವರ ನಾಶವನ್ನು ಉದ್ದೇಶಮಾಡಿ ಗುಂಡು ಹಾರಿಸಬೇಕಾದರೆ, ಜರ್ಮನಿಯವರು ಇದ್ದರು ಎಂದು ಸಿದ್ಧವಾಗಲಿಲ್ಲವೋ? ಬರೀ ಆಕಾಶಕ್ಕೆ ಯಾರಾದರೂ ಮದ್ದು ಹಾರಿಸುವರೋ? ಆದುದರಿಂದ ಅನಾದಿಯಾಗಿ ಅದ್ವೈತವು ಮೆರೆಯುತ್ತಿತ್ತು. ಅದೇ ವ್ಯಾಸ-ಶುಕ-ಗೌಡಪಾದ-ಗೋವಿಂದ ಯೋಗೀಂದ್ರ- ಶಂಕರ ಭಗವತ್ಪಾದರ ಪರಂಪರೆಯಿಂದ ಬಂದ ಅನಾದಿ ನಿಜತತ್ವವು ಎಂದು ಸಿದ್ಧವಾಯಿತು. ಇನ್ನು ಕೆಲವು ಶಾಸ್ತ್ರಿಗಳು ನಾಮಮಹಿಮೆಯಿಂದಲೇ ಸರ್ವಾರ್ಥಸಿದ್ಧಿಯಾಗುವು ದೆಂಬ ಪುರಾಣ ವಚನವನ್ನು ಅಧಾರವಾಗಿಟ್ಟುಕೊಂಡು ಸ್ಮಾರ್ತರೆಂಬ ನಾಮವೇ ಅದ್ವೈತತತ್ವದ ವೈದಿಕತ್ವದಲ್ಲಿ ನಿಸ್ಸೀಮವಾದ ಪ್ರಮಾಣವೆಂದು ನಂಬಿರುವರು. ಅಂತೂ ಇಂತೂ ಉಭಯ ಪ್ರಮಾಣಗಳಿಂದಲೂ ಅದ್ವೈತತತ್ವದ ಅನಾದಿತ್ವವು ಮತ್ತು ವೈದಿಕತ್ವವು ಕಬ್ಬಿಣದ ಪೆಟ್ಟಿಗೆಯಂತೆ ಭದ್ರವಾಗಿರುವುದು. ಇದರಮೇಲೆ ಹರತೀ ಆಚಾರ್ರ ತೃಣ ಸಮುದಾಯದಂತಿರುವ ಎಂಜಲು ಮಾತುಗಳು ಏನು ಮಾಡುವುವು?

ಇನ್ನೂ ವಿಚಾರ ಮಾಡಿ ಶಾಸ್ತ್ರಿಗಳು ಸೂಚಿಸುವುದೇನೆಂದರೆ, ಅಪ್ಪಯ್ಯದೀಕ್ಷಿತರೇ ಮೊದಲಾದ ಗುರುಪರಂಪರೆಯಿಂದ ಪ್ರಾಪ್ತವಾಗಿರುವ ಅದ್ವೈತತತ್ವವನ್ನು ಪರಿತ್ಯಾಗ ಮಾಡಿರುವ ಈ ಮಾಧ್ವರು ದೈವದ್ರೋಹಿಗಳು, ಚಂಡಾಲರು ಮತ್ತು ಅನ್ಯರೇತಸ್ಸಿಗೆ ಹುಟ್ಟಿರುವರು ಇತ್ಯಾದಿ. ಮತ್ತು ತಮ್ಮ ಮತಕ್ಕೆ ಆಧಾರವಾದ ಒಂದು ಶ್ರುತಿಯನ್ನೂ ಕಾಣದ ಈ ಅಜ್ಞರು ಸತ್ಯಂಭಿದಾ ಇತ್ಯಾದಿ ಕೆಲವು

---

(ಹಿಂದಿನಪುಟದಿಂದ) ಸಾಂಬಶಾಸ್ತ್ರಿಗಳ ಬಾಹ್ಯದ್ವೇಷದಿಂದ ಮಾತ್ರ ಸ್ವಲ್ಪ ಜಾತಿಕೆಟ್ಟು , ಶಂಕರಾಚಾರ್ಯರ ಉತ್ಪತ್ತಿಯಲ್ಲಿ ಏನೋ ತೋರಿಸುವುದಕ್ಕಾಗಿ ಬಲಗೈಯಿಂದ ವಿಲ್ಸನ್ ಸಾಹೇಬನನ್ನು ಹಿಡಿದುಕೊಂಡು, ಎಡಗಡೆಕಿವಿಯಲ್ಲಿ ತುಳಸೀದಳವನ್ನು ಇಟ್ಟುಕೊಂಡು ಸ್ವಲ್ಪ ಪವಿತ್ರನಾಗುತ್ತೇನೆಂದು ಭಾವಿಸಿದ್ದರು. ಸಾಂಬಶಾಸ್ತ್ರಿಗಳು ''ನ ವರ್ಣಾ ನವರ್ಣಾಶ್ರಮಚಾರಧರ್ಮಾಃ'' ಎಂಬ ತಮ್ಮ ತತ್ವವನ್ನು ಜಾರಿಗೆ ತಂದು, ಅಖಾಡಾಕ್ಕೆ ಬಂದಮೇಲೆ ಜಾತಿನೋಡಬಾರದು ಎಂದು ನಿಶ್ಚಯಿಸಿ ಎರಡೂ ಕಡೆಗಳಲ್ಲಿಯೂ ಇಬ್ಬರು ಮ್ಲೇಚ್ಛರನ್ನು ತಬ್ಬಿಕೊಂಡು ಬಂದರು. ಮತ್ತು ಅವರನ್ನು ಪಂಡಿತರೆಂದೇ ಗೌರವದಿಂದ ವ್ಯವಹರಿಸಿರುವರು. ಶಾಸ್ತ್ರಿಗಳು ಹೀಗೆ ಅವಕಾಶ ಕೊಟ್ಟುದುದರಿಂದಲೇ, ನಾವೂ ಮ್ಲೇಚ್ಛಪರಿವಾರವನ್ನೇ ಸಂಬಳ ಕೊಟ್ಟು ಹತ್ತಿರದಲ್ಲಿಟ್ಟುಕೊಂಡೆವು.

ಶ್ರುತಿಗಳನ್ನು ಕಲ್ಪಿಸಿಕೊಂಡು ಸಾಂಬಶಾಸ್ತ್ರಿಗಳ ಅಭಿಪ್ರಾಯಾನುಗುಣವಾಗಿ ಭ್ರೂಣಹತ್ಯಾದಿ ದೋಷಗಳಿಗೆ ಭಾಗಿಗಳು. ಪೈರು ಬೆಳೆದು ಧಾನ್ಯ ಸಮೃದ್ಧವಾಗಿರುವ ಗದ್ದೆಯು ಅದ್ವೈತ ತತ್ವಕ್ಕೆ ಸೇರಿದುದು. ಸಸಿ ರಹಿತವಾದ ಶುಷ್ಕವಾದ ತೃಣಭೂಯಿಷ್ಟವಾದ ತೆವರು ಭೂಮಿಯು ಪಶುಗಳಂತಿರುವ ದ್ವೈತತತ್ವವೇ ಮುಂತಾದ ಮಂದಭಾಗ್ಯರಿಗೆ ಸೇರಿದುದು.

ಇಷ್ಟು ಶಾಸ್ತ್ರಿಗಳ ಉಭಯಗ್ರಂಥಗಳ ವಾಕ್ಯಾರ್ಥ ಸಂಕ್ಷೇಪವು. ನಮ್ಮ ಪರಾಂಬರಿಕೆಗೆ ಸಕಲ ರಿಕಾರ್ಡುಗಳೂ ಬಂದಿರುವುವು. ಅನಾದಿಯಾದ ಬ್ರಹ್ಮದೇವರ ಪರಂಪರೆಗೆ ಬಂದಿರುವ ನಿಜವಾದ ತತ್ವವು ಯಾವುದು? ಸರ್ವ ವೇದಗಳಿಗೆ ಸಮ್ಮತವಾದ ಸತ್ಯಭೂತ ವಾದ ತತ್ವವು ಯಾವುದು? ಯಾವುದು ನವೀನವಾಗಿ ಕಲ್ಪಿತವಾದ ತತ್ವವು? ಹಾಗೆ ಯಾವುದಾದರೂ ಒಂದು ಕಲ್ಪಿತವಾಗಿದ್ದರೆ ಕಲ್ಪನಾಕ್ರಮವು ಹೇಗೆ? ಈ ನಾಲ್ಕು ಪ್ರಶ್ನೆಗಳಿಗೂ ಕ್ರಮವಾಗಿ ಯುಕ್ತಿ ಪರಾಮರ್ಶಸಹಿತವಾದ ನಿರ್ಣಯವನ್ನು ತೋರಿಸುವೆವು . ತಥಾಹಿ-

ಕೃತಯುಗದ ರಿಕಾರ್ಡನ್ನು ಪರಿಶೀಲಿಸಿ ನೋಡಿದರೆ, ದ್ವೈತವು ಅದರಲ್ಲಿಯೂ ವಿಷ್ಣುಸರ್ವೋತ್ತಮತ್ವವು ಬ್ರಹ್ಮಪರಂಪರೆ ಯಿಂದ ಪ್ರಾಪ್ತವಾದ ನಿಜ ತತ್ವವೆಂದೂ, ಆದುದರಿಂದ ವೈದಿಕ ಸಿದ್ಧಾಂತವೆಂತಲೂ, ಇತರ ಸರ್ವ ಮತಗಳೂ ಹಿರಣ್ಯಕಶಿಪು ಪ್ರಭೃತಿ ಗಳ ಕಲ್ಪನೆಯೆಂದೂ, ಸಿದ್ಧವಾಗುವುದು. ಅದೆಂತೆಂದರೆ:- ''ಪ್ರಹ್ಲಾದೋ ಜನ್ಮವೈಷ್ಣವಃ'' ಎಂಬ ಪ್ರಿಂಟಾದ ಪದ್ಮಪುರಾಣದ ವಚನಾನುಸಾರದಿಂದಲೂ, ''ಶ್ರವಣಂ ಮನನಂ ವಿಷ್ಣೋಃ ಸ್ಮರಣಂ ಪಾದಸೇವನಂ। ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ'' ಎಂಬ ನವವಿಧ ಭಕ್ತಿಮಾಡುವುದರಲ್ಲಿ ಅಗ್ರಗಣ್ಯನಾದುದರಿಂದಲೂ, ಪ್ರಹ್ಲಾದನು ವಿಷ್ಣುಕಿಂಕರನೆಂದು ನಿಶ್ಚಿತ ವಾಗುವುದು. ಜ್ಞಾನಿಯಾದ ಪ್ರಹ್ಲಾದನ ಉಪಾಸನೆಗೆ ವಿಷಯನಾದುದರಿಂದಲೇ ವಿಷ್ಣುವು ಪರಬ್ರಹ್ಮನೆಂದು ನಿರ್ಧರಿಸಬಹುದು. ಅಯಥಾರ್ಥ ಅಬ್ರಹ್ಮ ವಸ್ತುವನ್ನು ಯಾವ ಜ್ಞಾನಿಯು ಉಪಾಸನೆ ಮಾಡುವನು? ಕಿಂಚ ನವವಿಧಭಕ್ತಿಪ್ರದರ್ಶನವು ದ್ವೈತತತ್ವದಲ್ಲಿ ಉಪಪನ್ನವಾಗುವುದು. ಅದ್ವೈತತತ್ವದಲ್ಲಿ ಉಪಪನ್ನವಾಗುವುದಿಲ್ಲ. ಹೇಗೆಂದರೆ, ಇಗೋ ಶಂಕರಾಚಾರ್ಯರ ಮಾತುಗಳು:-

''ಹರಿರಹಮಸ್ಮಿ ಹರೋಸ್ಮ್ಯಹಂ ವಿಧಿರಹಮಸ್ಮಿ ಕಾರಣಂ ತೇಷಾಂ।'' ಅರ್ಥವು:- ನಾನೇ ಹರಿಯು, ನಾನೇ ಹರನು, ನಾನೇ ಬ್ರಹ್ಮನು, ಇವರುಗಳಿಗೆಲ್ಲಾ ಕಾರಣನು ನಾನೇ.

ಇದರಂತೆಯೇ ಹಿರಣ್ಯಕಶಿಪುವಿನ ಅಪರಾವತಾರವಾದ ರಾವಣನ ಬಂಧುಗಳಾದ ಮಾಲ್ಯವಂತ, ಸುಮಾಲಿ, ಮಾಲಿ ಪ್ರಭೃತಿಗಳಾದ ಸರ್ವರಾಕ್ಷಸರೂ ಹೀಗೆಯೇ ತಿಳಿದಿರುತ್ತಾರೆಂದು, ಸರ್ವದೇವತೆಗಳೂ ನಾರಾಯಣನನ್ನು ಕುರಿತು ಮೊರೆಯಿಟ್ಟಿರು ವರು. ಪುಟ.14. ಉತ್ತರಕಾಂಡ ರಾಮಾಯಣದಲ್ಲಿ ಹೀಗೆ ದೇವತೆಗಳು ವಿಷ್ಣುವಿನಲ್ಲಿ ದೂರು ಹೇಳುತ್ತಿದ್ದಾರೆ:-

''ಅಹಂ ವಿಷ್ಣುರಹಂ ರುದ್ರೋ ಬ್ರಹ್ಮಾಣಂ ದೇವರಾಡಹಂ। ಅಹಂ ಯಮಶ್ಚ ವರುಣಶ್ಚೇಂದ್ರೋಹಂ ರವಿರಪ್ಯಹಂ॥

ಇತಿ ಮಾಲೀ ಸುಮಾಲೀ ಚ ಮಾಲ್ಯವಾಂಶ್ಚೈವರಾಕ್ಷಸಾಃ। ಬಾಧಂತೇ ಸಮರೋದ್ಧರ್ಷಾಃ ಯೇ ಚ ತೇಷಾಂ ಪುರಸ್ಸರಾಃ॥

ಈ ವಾಕ್ಯಗಳಿಂದ ಪ್ರಹ್ಲಾದನ ಮತವು ವಿಷ್ಣೂತ್ಕರ್ಷವಾದವೆಂದೂ ಹಿರಣ್ಯಕಶಿಪ್ವಾದಿಗಳು ಅವೈಷ್ಣವರು ಎಂದರೆ ವಿಷ್ಣುವು ಸರ್ವೋತ್ತಮನೆಂದು ಒಪ್ಪದಿರುವರೆಂದೂ ಸಿದ್ಧವಾಯಿತು. ವೇದವ್ಯಾಸರು ಭಾಗವತ ಸಪ್ತಮಸ್ಕಂಧದಲ್ಲಿ ಸ್ಪಷ್ಟವಾಗಿಯೂ ಹೇಳಿದ್ದಾರೆ:- ''ಸತ್ಯಂ ವಿಧಾತುಂ ನಿಜಭೃತ್ಯ ಭಾಷಿತಂ ವ್ಯಾಪ್ತಿಂ ಚ ಭೂತೇಷ್ವಖಿಲೇಷುಚಾತ್ಮನಃ। ಅದೃಶ್ಯತಾದ್ಭುತರೂಪಮುದ್ವಹಂ ಸ್ತಂಭೇ ಮೃಗಾಯಾಂ ನ ಮೃಗಂ ನ ಮಾನುಷಂ॥''

ಈ ವಾಕ್ಯದಲ್ಲಿ ವೇದವ್ಯಾಸರು ಪ್ರಹ್ಲಾದನು ವಿಷ್ಣುವಿನ ನಿಜಭೃತ್ಯನು ಎಂದರೆ ಸ್ವಾಭಾವಿಕವಾದ ಸತ್ಯವಾದ ದಾಸನು ಎಂದು ಸಾಕ್ಷಿ ಹೇಳಿರುವರಾದುದರಿಂದ, ಪ್ರಹ್ಲಾದನು ವ್ಯಾಪ್ತನಾದ ಪರಬ್ರಹ್ಮನಾದ ವಿಷ್ಣುವಿಗೂ ತನಗೂ ಪಾರಮಾರ್ಥಿಕ ಭೇದವನ್ನೇ ಚಿಂತಿಸುತ್ತಿರುವ ದ್ವೈತಿಯೆಂದು ಸಿದ್ಧವಾಯಿತು.

ದೈತ್ಯಬಾಲಕರು ಪಿತೃದ್ರೋಹಿಯಾಗಿ, ಚಂಡಾಮರ್ಕರಂಥಾ ಗುರುದ್ರೋಹಿಯಾಗಿ, ವೈಷ್ಣವ ಮುದ್ರೆಯನ್ನು ಸ್ವೀಕರಿಸಿ, ಮಂದಿಯನ್ನೂ ತನ್ನ ಉಪದೇಶದಿಂದconvert ಎಂದರೆ ಪರಿವರ್ತನೆ ಮಾಡುವುದಕ್ಕೆ ಆರಂಭಿಸಿದ ಪ್ರಹ್ಲಾದನನ್ನು ಕುರಿತು ನಿನಗೆ ಈ ಜ್ಞಾನವು ಹೇಗೆ ಬಂತೆಂದು ಕೇಳಲು, ಗರ್ಭದಲ್ಲಿದ್ದಾಗಲೇ ಅಮೋಘವಾದ ನಾರದರ ಉಪದೇಶದಿಂದ ಬಂತೆಂದು ಹೇಳಿದನು. ದೇವರ್ಷಿಗಳಾದ ನಾರದರು ''ಉತ್ಸಂಗಾನ್ನಾರದೋ ಜಜ್ಞೇ'' ಎಂಬ ಪ್ರಮಾಣಾನುಸಾರವಾಗಿ ಬ್ರಹ್ಮದೇವರ ಸಾಕ್ಷಾತ್ ಪುತ್ರರಾದುದರಿಂದ ತಮ್ಮ ಗುರುಗಳಾದ ಬ್ರಹ್ಮದೇವರಿಂದ ಜೀವಬ್ರಹ್ಮರ ಭೇದವನ್ನೂ , ವಿಷ್ಣೂತ್ಕರ್ಷವನ್ನೂ ಉಪದೇಶ ಹೊಂದಿದವರೆಂದು ನಿಶ್ಚಯವಾಗುವುದು. ಚತುರ್ಮುಖ ಬ್ರಹ್ಮದೇವರು ಪರಬ್ರಹ್ಮನ ಸಾಕ್ಷಾನ್ನಾಭಿಕಮಲದಿಂದ ಹುಟ್ಟಿದವರಾದುದ ರಿಂದ ಪದ್ಮನಾಭನು ತನ್ನ

ಪುತ್ರನಿಗೆ ಉಪದೇಶಮಾಡಿದ ನಾಲ್ಕು ವೇದಗಳಲ್ಲೂ, ಅಣುಭಾಗವತದಲ್ಲೂ ವಿಷ್ಣುವಿನ ಉತ್ಕರ್ಷವೂ, ಜೀವಬ್ರಹ್ಮರ ಭೇದವೂ ಇರಬೇಕೆಂದೇ ಸಿದ್ಧವಾಯಿತು. ಏವಂ ಚ ಶ್ರೀಪದ್ಮನಾಭ, ಚತುರ್ಮುಖಬ್ರಹ್ಮದೇವರೂ, ನಾರದಾದಿ ದೇವತೆಗಳೂ ಮತ್ತು ಋಷಿಗಳೂ, ಪ್ರಹ್ಲಾದಾದಿ ಭಕ್ತರು ಇವರೆಲ್ಲರೂ ಭೇದವಾದಿಗಳೆಂದೂ, ಅತ ಏವ ದ್ವೈತವೇ ವೈದಿಕ ಸಿದ್ಧಾಂತ ವೆಂದೂ ಇದಕ್ಕೆ ಭಿನ್ನವಾದ ಸಕಲ ತತ್ವಗಳೂ ಈ ನಿಜಪರಂಪರೆಗೆ ಸೇರಿಲ್ಲವಾದುದರಿಂದ, ಸ್ವಕಪೋಲಕಲ್ಪಿತವೆಂದೂ, ಅತ ಏವ ಅವೈದಿಕವಾದಗಳೆಂದೂ ಪ್ರಾಪ್ತವಾಯಿತು. ಪ್ರಹ್ಲಾದನು ನಾನೇ ವಿಷ್ಣುವು ಎಂದು ಚಿಂತಿಸುತ್ತದ್ದನೆಂದು ಯಾವುದಾದರೂ ಸಾವಕಾಶ ಶ್ಲೋಕವು ಇದ್ದರೂ ಅದು ಮಾಲ್ಯವಂತಾದಿಗಳ ಉಪಾಸನೆಗೆ ಸದೃಶವಾಗುವುದರಿಂದ, ಆ ವಾಕ್ಯಗಳಿಗೆ ನಿರವಕಾಶವಾದ 'ನಿಜಭೃತ್ಯ ಭಾಷಿತಂ' ಎಂಬ ವಾಕ್ಯಾನುಸಾರವಾಗಿ ಯೋಜನೆಯನ್ನು ಮಾಡಬೇಕು. ಏವಂ ಚ ಕೃತಯುಗದ ರಿಕಾರ್ಡುಗಳು ಭೇದವನ್ನೂ ವಿಷ್ಣೂತ್ಕರ್ಷವನ್ನೂ ಬೋಧಿಸುವುವು.

ತ್ರೇತಾಯುಗದ ರಿಕಾರ್ಡುಗಳು ಹಾಗೆಯೇ ಇರುವುವು. ಜ್ಞಾನಿಶ್ರೇಷ್ಠನಾದ ಹನುಮಂತನು ಶತ್ರುವಾದ ರಾವಣನ ಸಭೆಯಲ್ಲಿ ತನ್ನ ಆತ್ಮಸಾಮರ್ಥ್ಯವನ್ನು ಹೇಳಿಕೊಳ್ಳಬೇಕಾದ ಕಾಲದಲ್ಲಿ ಪರಬ್ರಹ್ಮನಾದ ನಾರಾಯಣನ ಅವತಾರವಾದ ಶ್ರೀರಾಮನಿಗೂ, ತನಗೂ ಇರುವ ಸಂಬಂಧವನ್ನು ಹೀಗೆ ವರ್ಣಿಸಿರುವನು:-

''ದಾಸೋಹಂ ಕೋಸಲೇಂದ್ರಸ್ಯ ರಮಸ್ಯಾಕ್ಲಿಷ್ಟ ಕರ್ಮಣಃ||'' ನಾನು ರಾಮನ ಕಿಂಕರನೆಂದು ಜೀವೇಶ್ವರರ ಭೇದವನ್ನೂ ರಾಮನ ಸರ್ವೋತ್ತಮತ್ವವನ್ನೂ ಪ್ರತಿಪಾದಿಸಿರುವನು. ಶ್ರೀರಾಮನು ಈ ಭಾವವನ್ನು ಅನುಮೋದಿಸಿರುವನು. ಹನುಮಂತನು ಶ್ರೀರಾಮನು ಮಿಥ್ಯಾ ಎಂದಾಗಲೀ, ನಾನೇ ವಿಷ್ಣುವು ಎಂದಾಗಲೀ ಹೇಳಲಿಲ್ಲ.

ಆದುದರಿಂದ ತ್ರೇತಾಯುಗದ ರಿಕಾರ್ಡುಗಳು ದ್ವೈತತತ್ವವೇ ಶ್ರೀರಾಮನಿಗೆ ಸಮ್ಮತವೆಂದೂ ''ವಿಷ್ಣುರಹಂ'' ಇತ್ಯಾದಿ ಉಪಾಸನೆಗಳು ಮಾಲ್ಯವಂತಾದಿಗಳದ್ದೆಂದೂ ಬೋಧಿಸುವುವು.

ಇಷ್ಟೇ ಅಲ್ಲ! ಮುಂದಿನ ಕಲ್ಪದಲ್ಲಿಯೂ ಹನುಮಂತನ ತತ್ವವೇ ಮಾನ್ಯವಾಗಿ ಪ್ರವರ್ತಿಸುವುದೆಂಬಲ್ಲಿ ಪ್ರಮಾಣವಿರುವುದು. ರಾಮಾಯಣದ ಉತ್ತರಕಾಂಡದಲ್ಲಿ ಹನುಮಂತನು ಜಗದ್ಗುರುವು ಮತ್ತು ಚತುರ್ಮುಖಪದವಿಯನ್ನು ಹೊಂದತಕ್ಕವನೆಂದೂ ಹೇಳಿರುವುದು:- ಪುಟ 114ರಲ್ಲಿ ''ನಹ್ಯಸ್ಯ ಕಶ್ಚಿತ್ಸದೃಶೋಸ್ತಿ ಶಾಸ್ತ್ರೇ ವೈಶಾರದೇ ಛಂದಗತೌ ತಥೈವ | ಸರ್ವಾಸು ವಿದ್ಯಾಸು ತಪೋ ವಿಧಾನೇ ಪ್ರಸ್ಪರ್ಧತೇ ಯೋಹಿ ಗುರು ಸುರಾಣಾಂ || ಸೋಯಂ ನವವ್ಯಾಕರಣಾರ್ಥವೇತ್ತಾ ಬ್ರಹ್ಮಾ ಭವಿಷ್ಯತ್ಯ ಪಿತೇಪ್ರಸಾದಾತ್ ||' ಪರಬ್ರಹ್ಮನಾದ ರಾಮನ ಪ್ರಸಾದದಿಂದಲೇ ಹನುಮಂತನಿಗೆ ಚತುರ್ಮುಖ ಬ್ರಹ್ಮಪದವಿಯು ಮುಂದಿನ ಕಲ್ಪದಲ್ಲಿ ಬರುವುದೆಂದು ಹೇಳಿರುವುದರಿಂದ, ಜೀವಬ್ರಹ್ಮರ ಭೇದವು ಅನಂತಕಲ್ಪಗಳಲ್ಲಿಯೂ ಆಯಾಯಕಲ್ಪದ ಚತುರ್ಮುಖ ಬ್ರಹ್ಮದೇವರಿಗೆ ನಿತ್ಯೈಕ ಸ್ವರೂಪನಾದ ವಿಷ್ಣುವಿನಿಂದಲೇ ಉಪದಿಷ್ಟವಾಗಿ ಪರಂಪರೆಯಿಂದ ಬರುವುದೆಂದು ಸಿದ್ಧವಾಯಿತು. ಅದರಿಂದಲೇ ''ಭೇದವು'' ವೈದಿಕಸಿದ್ಧಾಂತವೆಂದೂ, ಇದಕ್ಕೆ ಭಿನ್ನವಾದ ಸರ್ವತತ್ವಗಳೂ ಸ್ವಕಪೋಲಕಲ್ಪಿತವೆಂದೂ ಅತ ಏವ ಅವೈದಿಕವೆಂದೂ ಸಿದ್ಧವಾಯಿತು.

ದ್ವಾಪರಯುಗದ ರಿಕಾರ್ಡುಗಳನ್ನು ಪರಾಂಬರಿಸಿ ನೋಡಿದರೂ ಇದೇ ನಿರ್ಣಯವು ಬಂದೊದಗುವುದು. ''ಅನನ್ಯ ಶರಣಾತ್ಮನಃ'' ಎಂದು ವರ್ಣಿಸಲ್ಪಟ್ಟಿರುವ ಪಾಂಡವರು ಪರಬ್ರಹ್ಮನಾದ ನಾರಾಯಣಾವತಾರನಾದ ಕೃಷ್ಣನ ಭಕ್ತರೆಂದು ನಿಶ್ಚಿತವಾಗುವುದು. ತತ್ವೋಪದೇಶವನ್ನು ಹೊಂದಿದನಂತರ ಜ್ಞಾನಿಯಾದ ಅರ್ಜುನನು ಶ್ರೀಕೃಷ್ಣನನ್ನು ಹೀಗೆ ಸ್ತುತಿಸಿರುವನು:-

''ಪರಂಬ್ರಹ್ಮ ಪರಂಧಾಮ ಪವಿತ್ರಂ ಪರಮಂಭವಾನ್ | ಅಸಿತೋ ದೇವಲೋವ್ಯಾಸಃ ಸ್ವಯಂ ಚೈವ ಬ್ರವೀಷಿಮೇ ||
ಸರ್ವಮೇತದೃತಂ ಮನ್ಯೇ ಯನ್ಮಾಂ ವದಸಿ ಕೇಶವ | ಭೂತಭಾವನ ಭೂತೇಶ ದೇವದೇವ ಜಗತ್ಪತೇ ||''

ಅರ್ಥವು:- ಎಲೈ ಸ್ವಾಮಿಯೇ! ನೀನೇ ಪರಬ್ರಹ್ಮನು, ಪರಮ ಆಶ್ರಯನು, ಪರಮ ಪವಿತ್ರನು, ಅಸಿತ ಋಷಿಗಳೂ, ದೇವಲರೂ, ವೇದವ್ಯಾಸರೂ, ನನಗೆ ನೀನು ಪರಬ್ರಹ್ಮನೆಂದೇ ಹೇಳಿರುವರು. ನೀನು ಹಾಗೇ ಹೇಳುತ್ತೀ. ಎಲೈ ಕೇಶವನೇ! ನೀನು ಹೇಳುವು ದನ್ನೆಲ್ಲಾ ನಾನು ಸತ್ಯವೆಂದೇ ನಂಬಿರುತ್ತೇನೆ. ಹೇ ಸೃಷ್ಟಿಕರ್ತ! ಭೂತೇಶ! ದೇವೇಶ! ಹೇ ಜಗತ್ಪತೇ!

ವಿಶ್ವರೂಪದರ್ಶನಾನಂತರವೂ ಸಹ:-

ನತ್ವತ್ಸಮೋಸ್ತ್ಯಭ್ಯಧಿಕಃ ಕುತೋಽನ್ಯಃ || ಅನಂತವೀರ್ಯಾಮಿತ ವಿಕ್ರಮಸ್ತ್ವಂ | ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ||

ಎಂಬಲ್ಲಿ ಶ್ರೀಕೃಷ್ಣನೇ ಸರ್ವೋತ್ತಮನೆಂದೂ ಹೇಳಿ ''ವಾಸುದೇವಸ್ಸರ್ವಮಿತಿ ಮಹಾತ್ಮಾ ಸುದುರ್ಲಭಃ'' ಎಂಬ ಶ್ರೀಕೃಷ್ಣನ ಸಂದಿಗ್ಧ ಶ್ಲೋಕಕ್ಕೆ ಸರ್ವತ್ರ ವ್ಯಾಪ್ತನಾದುದರಿಂದ ನಿನಗೆ ಸರ್ವನೆಂದು ಹೆಸರು, ನೀನು ಸರ್ವಾಭಿನ್ನವಾದ ಪ್ರಯುಕ್ತವಲ್ಲ ಎಂದು ವ್ಯಾಖ್ಯಾನ

ಮಾಡಿರುವನು.

ಇದೇ ಕಾಲದಲ್ಲಿನಾನು ವಾಸುದೇವನೆಂದು ಭಂಗಾರದ ಗರುಡನನ್ನೇರಿ ಶ್ರೀವತ್ಸಾದಿ ಚಿನ್ಹೆಗಳಂತೆ ಲಾಂಛನಗಳನ್ನು ವಕ್ಷಸ್ಥಳದಲ್ಲಿ ಸುಡಿಸಿಕೊಂಡು ಕಲ್ಪಿತ ಚತುರ್ಭುಜಗಳಿಂದ ಸಹಿತವಾಗಿ ಯುದ್ಧಕ್ಕೆ ಪ್ರಾಪ್ತನಾದ ಪೌಂಡ್ರಕ ವಾಸುದೇವನನ್ನು ಐಕ್ಯತತ್ವದ ನಿತರಾಂ ದ್ವೇಷಿಯಾದ ಶ್ರೀಕೃಷ್ಣನು ತನ್ನ ಚಕ್ರದ ಅಲಗುಗಳಿಗೆ ಬಲಿಯನ್ನಾಗಿ ಅರ್ಪಿಸಿದನು. ಎಂದು ಭಾಗವತವು ಸಾಕ್ಷಿ ಹೇಳುತ್ತಿರು ವುದು. ಆದುದರಿಂದ ಪಾಂಡವರ ಮತವು ದ್ವೈತಮತವೆಂದೂ, ಇದೇ 'ದೇವಲೋ ವ್ಯಾಸಃ' ಎಂಬ ವಚನದಿಂದ ಸರ್ವ ಋಷಿಗಳ ಮತ್ತು ವೇದಾಂತ ಸೂತ್ರಕಾರರಾದ ಬಾದರಾಯಣರ ಮತವೆಂದೂ, ಅತ ಏವ ಪರಮವೈದಿಕ ಸಿದ್ಧಾಂತವೆಂದೂ ನಿರ್ಣೀತವಾಗು ವುದು. ''ನಾಸ್ತಿನಾರಾಯಣಸಮೋ ನಭೂತೋ ನಭವಿಷ್ಯತಿ'' ಎಂಬ ಗಾರುಡ ಮತ್ತು ಮಹಾಭಾರತ ವಚನಗಳಿಂದಲೂ ಸಹ ಅನಾದ್ಯನಂತಕಾಲದಲ್ಲೂ ವಿಷ್ಣುವೇ ಸರ್ವೋತ್ತಮನೆಂದು ನಿಶ್ಚಿತವಾಗುವುದು. ''ಅಗ್ನಿರ್ವೈದೇವಾನಾಮವಮಃ ವಿಷ್ಣುಃ ಪರಮಃ'' ಎಂದು ಶೃತಿಯು ನಿರವಕಾಶವಾಗಿ ಇದೇ ಅರ್ಥವನ್ನು ಬೋಧಿಸುವುದು.

ಏವಂಚ ಈ ರಿಕಾರ್ಡುಗಳ ಪರಾಮರ್ಶದಿಂದ ಜೀವಬ್ರಹ್ಮರ ಭೇದವು ಅನಾದಿಯಾದ ವೈದಿಕತತ್ವವೆಂದೂ, ಅಭೇದವೇ ಮುಂತಾದ ಸಕಲತತ್ವಗಳೂ ವೇದಾದಿಗಳಿಂದ ಬಹಿರ್ಭೂತವಾದ ಪ್ರಾಚೀನಸಂಪ್ರದಾಯ ರಹಿತವಾದ, ಕಲಿಯುಗದಲ್ಲಿ ಮಾತ್ರ ಅನುಷ್ಠಿತವಾದ, ಅವಿಚಾರರಮಣೀಯವಾದ ''ಪ್ರಜ್ಞಾವಾದ''ವೆಂದೂ, ಸಿಡಿಲಿನಂತೆ ಭಯಂಕರವಾದ ನಿರ್ಣಯವು ಪ್ರಾಪ್ತವಾಯಿತು.

ಇನ್ನು ಮುಂದಿನ ವ್ಯಾಪಾರಗಳನ್ನು ಹರತೀ ಆಚಾರ್ರು ಮಾಡುವುದರಲ್ಲಿ ಸಂದೇಹವಿಲ್ಲ. ಅದ್ವೈತಕ್ಕೆ ವೇದದಿಂದ ಬಹಿಷ್ಕಾರವು ಪ್ರಾಪ್ತ ವಾಯಿತು. ಅದು ವೈದಿಕ ಸಂಪ್ರದಾಯಾಭಿಜ್ಞರಾದ ಬ್ರಹ್ಮಾದಿ ದೇವತೆಗಳಿಗೂ, ನಾರದ, ಅಸಿತ, ದೇವಲಾದಿ ಋಷಿಗಳಿಗೂ, ಜಗದ್ಗುರುಗಳಾದ ವೇದವ್ಯಾಸರಿಗೂ ಸಮ್ಮತವಲ್ಲ. ಹೀಗೆ ಅದ್ವೈತಾದಿ ಸಕಲ ಅವೈಷ್ಣವ ತತ್ವಗಳೂ ದೇವಮತ ವಿರೋಧಿಯೂ, ಋಷಿಮತವಿರೋಧಿಯೂ, ಸೂತ್ರಕಾರರಿಗೆ ವಿರೋಧಿಯೂ ಆದ ಮೇಲೆ, ಯುಧಿಷ್ಠಿರ ಸಭೆಯಲ್ಲಿವಿಪ್ರಶಾಪದಗ್ಧನಾದ ಕ್ಷುಲ್ಲಚಾರ್ವಾಕನ ಗತಿಯನ್ನು ಹೊಂದಿರುವುದು ನಿಶ್ಚಯವೆಂದು ಹರತೀ ಆಚಾರ್ರು ಹೇಳಿಬಿಡುವರು.

ಆದುದರಿಂದಲೇ ವ್ಯಾಸ, ಶುಕ, ಗೌಡಪಾದರೆಂಬ ಪರಂಪರೆಯು ಸಾಂಬಶಾಸ್ತ್ರಿಗಳ ಮನಸ್ಸಿನ ಮಂಡಿಗೆಯೆಂದೇ ತೀರ್ಪು ಏರ್ಪಟ್ಟಿತು. ಕಿಂಚ ಈ ಪರಂಪರೆಯನ್ನು ಹೇಳಿದ ಘನ ಹೊಂದಿದ ಸಾಂಬಶಾಸ್ತ್ರಿಗಳೇ ಚಪೇಟಿಕಾ ಗ್ರಂಥದಲ್ಲಿ ಶುಕಾಚಾರ್ಯರು ಸದ್ಯೋಮುಕ್ತರು ''ಪರೀಕ್ಷಿದ್ರಾಜನ ಕಾಲಕ್ಕೆ ಮುಂಚೆಯೇ ಶುಕರು ಮುಕ್ತರಾಗಿದ್ದರೆಂದು ನಿರ್ಣಯವಾಗಿ'' ಇರುವುದು ಎಂದು ಬರೆದಿರುತ್ತಾರೆ. ಈ ಸಂದರ್ಭದಲ್ಲಿ ನಿಶ್ಚಯವಾಗಿಯೂ, ಹರತಿ ಆಚಾರ್ರು ಶಾಸ್ತ್ರಿಗಳ ತಲೆಯ ಮೇಲಕ್ಕೆ ಒಂದೇ ಕುಪ್ಪಿನಿಂದ ಹಾರಿ ತಮ್ಮ ಮಾಧ್ವತನವನ್ನು ಗುದ್ದುವುದರ ಮೂಲಕ ಪ್ರದರ್ಶನೆ ಮಾಡುವುದು ನಿಶ್ಚಯವು. ನಿಮ್ಮ ಗೌಡಪಾದರಿಗೆ ಸದ್ಯೋಮುಕ್ತರಾದ ಶುಕಾಚಾರ್ಯರು ಅದ್ವೈತತತ್ವವನ್ನು ಉಪದೇಶ ಮಾಡಿದುದು ಹೇಗೆ? ಹರತೀ ಆಚಾರ್ರು ಹೀಗೆ ಕೇಳುತ್ತಾರೆ. ಮಾಧ್ವವಾಕ್ಯಾರ್ಥ ದಲ್ಲಿಪ್ರವಿಷ್ಟರಾದುದರಿಂದ ಗುದ್ದುತ್ತಾರೆ. ನಾವು ಸಭ್ಯರು, ನಾವು ಅಷ್ಟಕ್ಕೆಲ್ಲಾ ಹೋಗುವವರಲ್ಲ, ನಾವು ಈ ಸಂದರ್ಭದಲ್ಲಿಶಾಸ್ತ್ರಿಗಳ ತಲೆಯು ಸ್ವಲ್ಪಹಾರಿಹೋಗಿತ್ತೆಂದು ಹೇಳಿಬಿಡುತ್ತೇವೆ. ಸ್ಕೂಲು ಉಪಾಧ್ಯಾಯ ರಾಮೇಶ್ವರೈಯ್ಯನವರು ಹೇಳುತ್ತಿದ್ದಂತೆ ಹೇಳಬಹುದು. "His head is full of potatoes and charcoal". ಶಾಸ್ತ್ರಿಗಳ ಮೆದುಳಿನಲ್ಲಿ ಆಲೂಗೆಡ್ಡೆ ಮತ್ತು ಕಲ್ಲಿದ್ದಲು ತುಂಬಿಹೋಗಿರುವುದು. ಇಷ್ಟು ಸಾಕು. ಗುದ್ದುವ ವಾಕ್ಯಾರ್ಥವು ನಮಗೆ ಬೇಡ. ನಾವು ಶಾಸ್ತ್ರಿಗಳು ವರ್ಣನೆ ಮಾಡಿರುವಂಥಾ ವೀರವೈಷ್ಣವರಲ್ಲ. ಶುಕಾಚಾರ್ಯರಿಗೂ, ಗೌಡಪಾದರಿಗೂ, ಜಂಟಿಯನ್ನು ಕಲ್ಪಿಸುವ ಯಾವ ಸೇತುವೆಯೂ ಕಂಡುಬರುವುದಿಲ್ಲ.

ಷಡ್ದರ್ಶನವನ್ನು ಮಾಡಿದ ಪರಮಋಷಿಗಳೆಲ್ಲರೂ ವೇದಾಂತದಲ್ಲಿ ಹೇಳಿರುವ ಅನಿರ್ವಚನೀಯವಾದವು ದುಷ್ಟವು ಎಂದು ನಿಂದಿಸಿರುವುದರಿಂದ, ಅದ್ವೈತವು ಅನಾದಿಯು ಎಂಬ ಶಾಸ್ತ್ರಿಗಳ ಉಕ್ತಿಯೂ ಸಹ ನಮ್ಮ ಪೂರ್ವೋಕ್ತರೀತಿಯಿಂದಲೇ ಭಸ್ಮೀಭೂತವಾಗಿರುವುದು.

1. ತತ್ವ ವಿಚಾರದಲ್ಲಿಸಂಭಾವಿತ ಆಕ್ಷೇಪಗಳನ್ನು ಎಷ್ಟೋ ಮಾಡಿಕೊಂಡಿರಬಹುದು. ದ್ವೈತಪಕ್ಷದವರೆಲ್ಲರೂ ಅದ್ವೈತಪೂರ್ವಪಕ್ಷವನ್ನು ಪ್ರದರ್ಶಿಸುವರು. ಅದ್ವೈತಪಕ್ಷಾವಲಂಬಿಗಳೆಲ್ಲರೂ ದ್ವೈತಪಕ್ಷವನ್ನು ಉಪಪಾದಿಸುವರು. ಆದರಿಂದ ಆ ತತ್ವವು ಇದ್ದೇ ಇರಬೇಕೆಂದು ಏರ್ಪಡುವುದಿಲ್ಲ. ''ಅಪಸರ್ಪಂತು ಯೇ ಭೂತಾಃ'' ಎಂದು ಸಂಧ್ಯಾಕಾಲದಲ್ಲಿನಾವು ಪ್ರತಿದಿವಸವೂ ರಾಕ್ಷಸರು ಓಡಿಹೋಗಲಿ ಎಂದು ಮಂತ್ರವನ್ನು ಜಪಿಸುತ್ತೇವೆ. ಆದರಿಂದ ರಾಕ್ಷಸರ ಗುಂಪು ಪ್ರತಿದಿವಸವೂ ನಮ್ಮ ಸುತ್ತಮುತ್ತ ಇರುವುದೆಂದು ಸಿದ್ಧವಾಗುವುದಿಲ್ಲ.

2. ಮತ್ತು ದ್ವೈತವೂ ಅನಾದಿಯೆಂದು ಇದರಿಂದ ಸಿದ್ಧವಾಯಿತು. ಅದ್ವೈತಮತವು ದ್ವೈತನಿಷೇಧಮಾಡದೇ ಬದುಕಲಾರದು. ಆದುದರಿಂದ ದ್ವೈತವು ಅನಾದಿಯು.

3. ಕಿಂಚ ವ್ಯಾಸರು ಪರಮ ದ್ವೈತಿಗಳು ಎಂದು ನಾವು ತೋರಿಸಿಯೇ ಇರುತ್ತೇವೆ. ವ್ಯಾಸರೇ ಮೊದಲಾದ ಆರು ದರ್ಶನಕಾರರಾದ ಪರಮ ಮಹರ್ಷಿಗಳಿಂದ ನಿಂದಿತವಾದ ಮತವು ಕುಶಾಸ್ತ್ರವೆಂದೇ ಸಿದ್ಧವಾಯಿತು. ಒಬ್ಬ ಪರಮಹಂಸರು ಬಹಿಷ್ಕಾರ ಕೊಟ್ಟರೆ, ಅಥವಾ ಒಬ್ಬ ಋಷಿಯು ಶಪಿಸಿದರೇ ಭಯಂಕರವು. ವ್ಯಾಸಾದಿ ಷಡ್ದರ್ಶನಕಾರರಿಂದ ನಿರಾಕೃತವಾದ ತತ್ವವು ಹೇಗೆ ತಾನೇ ಶ್ರುತಿ ಸ್ಮೃತಿಗಳಲ್ಲಿ ಮಾನ್ಯಸ್ಥಾನವನ್ನು ಹೊಂದುವುದು. ಅದರಲ್ಲಿಯೂ ವಿಶೇಷವೇನೆಂದರೆ:- ಗೌತಮ ಕಣಾದಿಗಳು ಒಂದೊಂದು ಕಡೆಯಲ್ಲಿ ಅದ್ವೈತವನ್ನೂ ಅನಿರ್ವಚನೀಯವಾದವನ್ನೂ ಖಂಡಿಸಿದ್ದರು. ಭಗವಾನ್ ವ್ಯಾಸರು ಸಮಗ್ರವಾಗಿ 564 ಸೂತ್ರಗಳಲ್ಲೂ ಅದ್ವೈತಭಂಜನವನ್ನು ಮಾಡಿ ಮಾಯಾವಾದಕ್ಕೆ ಪಾರಮಾರ್ಥಿಕವಾದ ಚಪೇಟಿಕೆಯನ್ನು ಕೊಟ್ಟರು. ಇದು ಊರ್ಧ್ವಲೋಕದ ವಾಸವನ್ನು ತೀರ್ಪುಮಾಡುವ, ದೇವಮತದಿಂದ ಬಹಿಷ್ಕಾರ. ಬ್ರಾಹ್ಮಣಾದಿ ಚತುರ್ವರ್ಣ ರಹಿತನಿಗೆ ವೇದೋಕ್ತಕರ್ಮವಿಲ್ಲದಂತೆ, ಷಡ್ದರ್ಶನಗಳಿಂದ ಬಹಿಷ್ಕೃತವಾದ ಅದ್ವೈತಕ್ಕೆ ವೇದದಲ್ಲಿ ಆಸನವು ದೊರಕಲಾರದು.®®

4. ಅಥವಾ ಅನಾದಿಯು ಆದರೂ ಯಥಾರ್ಥವಾಗಲಾರದು. ಸುಳ್ಳೂ ಅನಾದಿಯು, ಸತ್ಯವೂ ಅನಾದಿಯು. ಹೀಗೆ ವ್ಯಾಸ ಪಾಂಡವರ, ಬ್ರಹ್ಮನಾರದಪ್ರಹ್ಲಾದಾದಿಗಳ, ರಾಮ ಹನುಮಂತ ವಿಭೀಷಣಾದಿಗಳ ಪರಂಪರೆಗೆ ಸೇರಿದುದರಿಂದ ದ್ವೈತವು ವೈದಿಕ ಸಂಪ್ರದಾಯಾನುವರ್ತಿಯೆಂದೂ, ಅದ್ವೈತವು ಅವೈದಿಕ ಸಂಪ್ರದಾಯವನ್ನು ಅನುಸರಿಸಿದ ಸೂತಸಂಹಿತಾ, ಯೋಗಾ, ವಾಸಿಷ್ಠ, ತಾಮಸ ಪುರಾಣಗಳ ಏಕದೇಶ, ಕಲ್ಪಿತ ಮನುಕೃತ ಮಾನವ ಪುರಾಣಾದಿಗಳಿಂದ ಗಾಣದಲ್ಲಿ ಹಿಂಡಿ ಇಳಿಸಿದ, ಅಪವಿತ್ರವಾದಂಥಾ ಮತ್ತು ಅಜೀರ್ಣ ಮತ್ತು ವ್ರಣವನ್ನು ಹೊಡಯುವಂಥಾ ಕೈಯಣ್ಣೆಯಂತೆ, ಪೂರ್ವಪಕ್ಷಮಾಡಿಕೊಂಡು ತತ್ವವಿಚಾರ ಮಾಡುವುದಕ್ಕೆ ಯೋಗ್ಯವಾಗುವ ತಾಂತ್ರಿಕ ಮತವೆಂದೂ, ಸಿದ್ಧವಾಯಿತು. ಶಾಸ್ತ್ರಿಗಳು ಹೇಳಿರುವ ಇನ್ನು ಕೆಲವು ಹೆಚ್ಚು ವಿಷಯಗಳಿಗೆ ನಮ್ಮಎಂದರೆ ಪಾದಸೂಚನೆಯಲ್ಲಿ ನಿರೂಪಿಸಿರುತ್ತೇವೆ.(see end note marked Appendix A)™™

ಈ ರೀತಿಯಾಗಿ ರೆಕಾರ್ಡು ಪರಾಮರ್ಶದಿಂದ ಐಕ್ಯತ್ವಕ್ಕೆ ವೇದದಲ್ಲಿ ಸ್ಥಳವನ್ನು ಕೊಡದೇ, ವೇದಾಂತ ಸೂತ್ರಕಾರರೇ ಮೊದಲಾದ ಸರ್ವರೂ ಓಡಿಸಿಬಿಟ್ಟಿರುವುರೆಂದು, ಈಚೆಗೆ ಕಲಿಕಾಲದಲ್ಲಿ ಪರೀಕ್ಷಿದ್ರಾಜನ ಸಂತತಿಯು ಕ್ಷೀಣವಾದ ನಂತರ ಬುದ್ಧನಿಂದ ಪ್ರವರ್ತಿಸಲ್ಪಟ್ಟ ಶೂನ್ಯವಾದವೂ, ಗೌಡಪಾದರಿಂದ ನಿರ್ಮಿತವಾದ ಐಕ್ಯವಾದವೇ ಮೊದಲಾದ ಅನೇಕವಾದಗಳೂ ಪಿಶಾಚಿಗಳು ಗರ್ಭಿಣಿಯನ್ನು ಹಿಡಿಯುವಂತೆ, ಶ್ವಾನವು ಪುರೋಡಾಶವನ್ನು ಇಚ್ಛಿಸುವಂತೆ, ಗೂಬೆಯು ಪ್ರಾಸಾದ ಶಿಖರದಲ್ಲಿ ಆರೂಢವಾಗಿ ಕುಳಿತುಕೊಳ್ಳುವಂತೆ, ಪವಿತ್ರತಮವಾದ ವೇದವನ್ನು ಅಕ್ರಮದಿಂದ ಪ್ರವೇಶಿಸಿ ಚತುರ್ವೇದಗಳ ರಕ್ಷಣಾರ್ಥವಾಗಿ ನಾಲ್ಕು ದಿಕ್ಕಿನಲ್ಲೂ ಕಟ್ಟಿದ್ದ ವೇದಾಂತ ಸೂತ್ರಗಳನ್ನು ಸಡಿಲಿಸಿ, ವೇದಗೃಹವು ನನ್ನದು ನಾನೇ ಅನಾದಿಕಾಲದಿಂದ ತೆರಿಗೆಯನ್ನು ಕೊಟ್ಟುಕೊಂಡು ಈ ಮನೆಯಲ್ಲಿ ವಾಸ ಮಾಡಿರುತ್ತೇನೆ, "Possession is nine points of law". ಇತ್ಯಾದಿ ನೀತಿಗಳನ್ನು ಉದಾಹರಿಸಿ ಅರ್ಜಿಯನ್ನು ಹಾಕಿರುವರು.

ಸಕಲ ವೇದಗಳೂ ವಿಷ್ಣುವನ್ನೇ ಸರ್ವೋತ್ತಮನಾದ ಪರಬ್ರಹ್ಮವಸ್ತುವೆಂದು ಪ್ರತಿಪಾದನೆ ಮಾಡುವುವು. ಎಂಬ ವಿಷಯದಲ್ಲಿ ಮೂರು ನಾಲ್ಕು ವಾಕ್ಯಗಳನ್ನು ಉದಾಹರಿಸುವೆವು.

(1) ''ಸರ್ವೇವೇದಾಯತ್ಪದಮಾಮನಂತಿ'' ಎಂಬ ಶೃತಿಯು ಸರ್ವವೇದಗಳೂ ಒಬ್ಬ ಪರಬ್ರಹ್ಮನನ್ನು ಪ್ರತಿಪಾದಿಸುವುವು ಎಂದು

---

®® ಈ ಕಾರಣದಿಂದ (ವ್ಯಾಸರು ದ್ವೈತಿಗಳಾದುದರಿಂದಲೇ) ಕಲ್ಪಿತ ಶ್ರುತಿಗಳು ಅಥವಾ ಕಲ್ಪಿತಭೇದ ನಿಷೇಧ ಶ್ರುತಿಗಳು ಅದ್ವೈತಕ್ಕೆ ಆಧಾರವು ಎಂದು ಸಿದ್ಧವಾಯಿತು. ಆದುದರಿಂದಲೇ ಸಾಂಬಶಾಸ್ತ್ರಿಗಳು ಮಿಥ್ಯಾವಾದವು ''ಬ್ರಹ್ಮ ಸತ್ಯಂ ಜಗನ್ಮಿಥ್ಯಾ'' ಎಂದು 15ನೆಯ ಪುಟದಲ್ಲಿ ಬರೆಯುವಾಗ ಒಂದು ದೊಡ್ಡ ಕುಕಲ್ಪನೆಯನ್ನು ಮಾಡಿದರು. ''ಬ್ರಹ್ಮ ಸತ್ಯಂ ಜಗನ್ಮಿಥ್ಯಾ'' ಎಂಬ ಶ್ರುತಿಸ್ಮೃತಿಯನ್ನು ನಾವು ಕಂಡಿಲ್ಲ, ಇದು ಇದ್ದರೂ ದ್ವೈತಕ್ಕೆ ಬಾಧಕವಿಲ್ಲ, ಅದು ಹಾಗಿರಲಿ, ಆದರೆ ಗಂಧರ್ವನಗರದಲ್ಲಿ ರೀಸರ್ಚ ಮಾಡಿರುವ ಮತ್ತು ಆರ್ಕಿಯಾಲಜಿ ಮ್ಯೂಸಿಯಂ ನಲ್ಲಿ ಪರಿಶ್ರಮ ಹೊಂದಿದ ಶಾಸ್ತ್ರಿಗಳ ದರ್ಶನಶಕ್ತಿಯು ಅಲೌಕಿಕವಾದುದರಿಂದ ಅವರ ತಲೆಯಲ್ಲಿದ್ದುದೇ ತತ್ವವು. ಅವರು ಕೂಗಿದ ಕೂಗೇ ಶಾಸ್ತ್ರಾರ್ಥವು. ಶ್ರುತಿಸ್ಮೃತಿ ಕಲ್ಪಕರುಗಳಿಗೆ ಶಾಸ್ತ್ರಿಗಳು ಮಾಡಿರುವ ಆಶೀರ್ವಾದಗಳೆಲ್ಲಾ ಒಮ್ಮೆಲೇ ಅವರ ಮೇಲೇ ಪ್ರಾಪ್ತವಾಯಿತು.

ಹೇಳುವುದು.

(2) ಶ್ರೀ ಕೃಷ್ಣನು:- ''ವೇದೈಶ್ಚ ಸರ್ವೈರಹಮೇವ ವೇದ್ಯಃ '' ಎಂದರೆ ಸರ್ವವೇದಗಳಲ್ಲೂ ನಾನೇ ಮುಖ್ಯ ಪ್ರತಿಪಾದ್ಯನು ಎಂದು ನಿಜತತ್ವವನ್ನು ಹೇಳಿ, ಪೂರ್ವೋಕ್ತಶ್ರುತಿಗೂ ಅರ್ಥವನ್ನು ಮಾಡಿರುವನು. ಮತ್ತು ''ವೇದಾಂತಕೃದ್ವೇದವಿದೇವಚಾಹಂ'' ಎಂದು ಈ ವಿಷಯದಲ್ಲಿ, ನಾನು ವೇದವ್ಯಾಸರೂಪದಿಂದ ಬ್ರಹ್ಮಸೂತ್ರಗಳನ್ನು ರಚಿಸಿದವನು ಎಂದು ಯುಕ್ತಿಯನ್ನೂ ಹೇಳಿರುವುದರಿಂದ ಸಕಲ ವೇದಾಂತಗಳಿಗೂ ವಿಷ್ಣುಸರ್ವೋತ್ತಮತ್ವದಲ್ಲಿಯೇ ತಾತ್ಪರ್ಯವಿರುವುದೆಂದೂ ಸಿದ್ಧವಾಯಿತು.

(3) ''ನಾರಾಯಣ ಪರಾವೇದಾಃ'' ಎಂಬ ಮತ್ತೊಂದು ಶ್ರುತಿಯೂ ಇದೇ ಅರ್ಥವನ್ನೇ ಹೇಳುವುದು.

(4) ನಾರಾಯಣ ಪರಾವೇದಾಃ- ಭಾಗವತ.

(6) .....ನಹ್ಯನ್ಯತ್ರ ಫಲಭಾಗ್ವೇದೋ। ವೇದೋಽಯಂ ವಾಸುದೇವೈಕ ಸಂಶ್ರಯಃ॥ ಭಾಗವತ 11ನೇಸ್ಕಂದ.

ವೇದವು ಅನ್ಯತ್ರ ತಾತ್ಪರ್ಯವುಳ್ಳದ್ದಲ್ಲ. ಈ ವೇದವು ವಾಸುದೇವನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡತಕ್ಕದ್ದು. ನಿರ್ಗುಣ ಬ್ರಹ್ಮನನ್ನಲ್ಲ ಎಂದು ಏಕ ಶಬ್ದದ ಭಾವವು.

ಈ ವಾಕ್ಯಗಳ ಪರ್ಯಾಲೋಚನೆಯಿಂದ ದ್ವೈತ ತತ್ವವೇ ಸಕಲ ವೇದಸಮ್ಮತವಾದ ಕೃಷ್ಣನ ಮತವೆಂದು ಸಿದ್ಧವಾಯಿತು. ಇದೇ ಮತವು ನಾರಾಯಣ, ಚತುರ್ಮುಖಾದಿ ಪರಂಪರೆಯಿಂದ ಪಾಂಡವರ ಕಾಲದವರೆವಿಗೂ ''ಧೃತಾ ನಾರಾಯಣೀ ಮುದ್ರಾ'' ಇತ್ಯಾದಿ ಪ್ರಮಾಣಾನುಸಾರವಾಗಿ ಮುದ್ರಾಂಕಿತರಾದ ಸಜ್ಜನರಿಂದ ಸೇವಿತನಾಗಿ, ನಂತರ ಕಲಿಗಾಲದ ಸಾವಿರವರ್ಷಗಳು ಕಳೆದ ನಂತರ, ಬೌದ್ಧಮತವು ಕಲಿಪ್ರಭಾವದಿಂದಲೇ ಪ್ರಾಬಲ್ಯವನ್ನು ಹೊಂದಿ, ಅನಂತರ ಪ್ರಚ್ಛನ್ನ ಬೌದ್ಧಮತವಾದ, 'ನಿರ್ಗುಣ ಬ್ರಹ್ಮವಾದ' ವಾದ ಅದ್ವೈತ ತತ್ವದಿಂದ ಆವೃತವಾಗಿ ಸಾಂಬಶಾಸ್ತ್ರಿಗಳು ಉದಾಹರಿಸಿರುವ-

''ರಾಕ್ಷಸಾಃ ಕಲಿಮಾಶ್ರಿತ್ಯ ಜಾಯಂತೇ ಬ್ರಹ್ಮಯೋನಿಷು। ಬ್ರಾಹ್ಮಣಾನೇವಬಾಧಂತೇ ತತ್ರಾಪಿ ಶ್ರೋತ್ರಿಯಾನ್ ಕೃಶಾನ್॥''

ಎಂಬ ಪ್ರಮಾಣ ವಚನಾನುಸಾರವಾಗಿ ವೇದವು ಮಿಥ್ಯಾ, ಸ್ವರ್ಗನರಕಗಳು ಮಿಥ್ಯಾ, ಕರ್ಮವನ್ನು ಮುಮುಕ್ಷುವು ಮಾಡಬಾರದು ಇತ್ಯಾದಿಗಳನ್ನು ಹೇಳುವ ಅನೇಕ ಅಜ್ಞರು ಹುಟ್ಟಿದಾಗ, ಗೌಡಪಾದ ಶಂಕರಾಚಾರ್ಯರುಗಳ ಬ್ರಾಹ್ಮಣ್ಯೋದ್ಧಾರರೂಪವಾದ ಸಾಹಸದ ಸಮಯದಲ್ಲಿ ಭೂತಲದಲ್ಲಿ ಪುನರ್ಭಾವ ಹೊಂದಿದ, ಸೂಕ್ಷ್ಮ ವಿಚಾರಮಾಡದ ತಾಮಸರಿಂದ ಸ್ವೀಕೃತವಾದ ಐಕ್ಯವಾದದಿಂದ ಪರಮ ನಾಸ್ತಿಕತೆಯು ಜಗತ್ತಿನಲ್ಲಿ ತಲೆದೋರಲು ( ಗೌಡಪಾದರು ಮಾಡಿದ ಈ ಕಾರ್ಯದ ವರ್ಣನೆಯು ಸಾಂಬ ಗಳಹಸ್ತಿಕಾ ಪ್ರಥಮಭಾಗದ ಕೊನೆಯಲ್ಲಿ ಅಪೆಂಡಿಕ್ಸ್ ''ಬಿ'' ಯಲ್ಲಿ ಬರೆದಿರುವುದು.)ΨΨΨ ನಷ್ಟಪ್ರಾಯವಾದ ತನ್ನ ಮತವನ್ನು ಪುನಃ ಉಜ್ಜೀವನ ಮಾಡುವ ಉದ್ದಿಶ್ಯ ಶ್ರೀಕೃಷ್ಣನು 'ಆಶುಗತಿ' ಎಂದು ಹೆಸರುಳ್ಳ ವಾಯುದೇವರ ಅವತಾರವಾದ ಭೀಮನನ್ನು ಕಳುಹಿಸಿದನು. ಪ್ರಿಂಟಾದ ಗರುಡ ಪುರಾಣ ಹದಿನಾರನೇ ಅಧ್ಯಾಯದಲ್ಲಿ 67-73 ಶ್ಲೋಕಗಳು ಈ ವಿಷಯವನ್ನು ವಿಶದವಾಗಿ ಹೇಳುವುವು. ನಿಜತತ್ವ ವನ್ನು ನಿರೂಪಿಸಿದರೂ, ಕಾರುಣ್ಯದಿಂದ ಆ ಶ್ಲೋಕಗಳನ್ನು ನೋಡಿಕೊಳ್ಳಬೇಕೆಂದು ಶಾಸ್ತ್ರಿಗಳಿಗೆ ಸೂಚಿಸಿರುತ್ತೇವೆ.

ಶ್ರೀ ಕೃಷ್ಣನು ವಾಯುದೇವರನ್ನು ಒಂದು ಬೆಟಾಲಿಯನ್ ಸಂಗಡ ತತ್ವಯುದ್ಧಕ್ಕೆ ಕಳುಹಿಸಿದನು. ಆಗೀಗ ನಮ್ಮ ಹರತಿ ಆಚಾರ್ರ ಗುರುಗಳಾದ ಶ್ರೀಮನ್ಮಧ್ವಾಚಾರ್ಯರು ರಂಗಭೂಮಿಗೆ ಇಳಿದರು. ಈ ವೃತ್ತಾಂತವೆಲ್ಲಾ ಬಳಿತ್ಥಾಸೂಕ್ತವೇ ಮೊದಲಾದ ಶೃತಿಗಳಲ್ಲಿ ಇರುವುದು. ಅದನ್ನು ಪ್ರತ್ಯೇಕವಾಗಿ ಒಂದು ಗ್ರಂಥಮಾಡಿ ನಿರೂಪಿಸುತ್ತೇವೆ. ಇದು ವಜ್ರಪುಡಿ ಅಂಗಡಿ. ಇಲ್ಲಿ ಗಟ್ಟಿ ನಗಗಳ ವ್ಯಾಪಾರಕ್ಕೆ ಪುರಸೊತ್ತು ಇಲ್ಲ. ಗುದ್ದುವ ವಾಕ್ಯಾರ್ಥದಲ್ಲಿ ಮಾಧ್ವರು ಮೇಲು ಎಂದು ಸಾಂಬಶಾಸ್ತ್ರಿಗಳು ಹೇಳಿರುತ್ತಾರೆ. ಶ್ರೀಮನ್ಮಧ್ವಾ ಚಾರ್ಯರು ಮಾಧ್ವರಿಗೆಲ್ಲಾ ಮೂಲಪುರುಷರು. ಸೈನ್ಯವನ್ನು ತೆಗೆದುಕೊಂಡು ಮುಂದೆ ನುಗ್ಗಿ ಬಂದು ಛಾರ್ಜು ಮಾಡಿದರು. ವಾದಿಸಿಂಹನು ಬಿದ್ದನು. ಬುದ್ಧಿಸಾಗರನು ಶುಷ್ಕನಾದನು. ಅಭಿನವ ಶಂಕರನೆಂಬ ಸನ್ಯಾಸಿಗಳು ಮೋರೆಗೆ ಮುಸುಕು ಹಾಕಿಕೊಂಡು ಕಣ್ಣೀರನ್ನು ಒರೆಸಿಕೊಂಡರಂತೆ; ಯುದ್ಧಕಾಲದಲ್ಲಿ ಎಲ್ಲಾ ಸಂಭಾವಿತವೇ. ಏವಂ ಚ ಮಧ್ವಾಚಾರ್ಯರು ಅದ್ವೈತಿಗಳಿಂದ ಕೃಷ್ಣನ ವೇದವನ್ನು ಕಸುಗೊಂಡರು. ಅವರ ಶಿಷ್ಯರೆಲ್ಲರೂ ಕೃಷ್ಣನ ಎಂಜಲನ್ನು ತಿಂದು ಮಠದಲ್ಲಿ ತಿಂದು ಉಬ್ಬಿ ಬೆಳದವರು; ಲೂಟಿ ಹೊಡೆದರು. ಇದ್ದ ಶಾಸ್ತ್ರವನ್ನೆಲ್ಲಾ ಮಠದಲ್ಲಿ ಗಂಟುಮಾಡಿ ವಿಭೀಷಣ, ಬಲಿ, ಧ್ರುವ, ಪ್ರಹ್ಲಾದರಂಥಾ ತಪ್ತಮುದ್ರೆಯನ್ನು ಹೊಂದಿದ ಶಿಷ್ಯರಿಗೆ ಉಪದೇಶ ಮಾಡುತ್ತಿರುತ್ತಾರೆ. ಅದ್ಯಾಪಿ ವಿಜಯಿಷ್ಣುಗಳಾಗಿ ಕೃಷ್ಣಪಾದ ಸಂಶ್ರಿತರಾಗಿ ಆನಂದದಿಂದ ಇರುತ್ತಾರೆ.

ಅದ್ವೈತ ತತ್ವವು ಗೌಡಪಾದರಿಂದ ಮೊದಲು ಕಲಿಯುಗದಲ್ಲಿ ಪ್ರಾದುರ್ಭವಿಸಿತು. ಅವರಿಗೆ ಅದು ಪರಂಪರೆಯಿಂದ ಬಂದುದಲ್ಲ ಎಂದು ಚರಿತ್ರಕಾರರು ಹೇಳಿರುವರು.

(1) "There is no uninterrupted tradition between Badarayana and Sankara"__ A.A. Macdonnel, Emeritus professor in Sanskrit in the university of Oxford.

ಅರ್ಥವು:- ಬಾದರಾಯಣರಿಗೂ ಶಂಕರಾಚಾರ್ಯರಿಗೂ ಅವಿಚ್ಛಿನ್ನವಾದ ಉಪದೇಶ ಪರಂಪರೆಯು ಇರುವುದಿಲ್ಲ. ♣ ♣

(2)"The Maya doctrine" is first met with in the karikas of Goudapada. -A.A. Macdonnel

ಅರ್ಥವು:- ಮಾಯಾವಾದವು ಮೊದಲು ಗೌಡಪಾದರ ಕಾರಿಕೆಯಲ್ಲಿ ಉಪಲಬ್ಧವಿರುವುದು.

(3) Goudapada is the first systematic exponent of the Advaita Vedantha- S. Radhakrishnan. M.A.

ಅರ್ಥವು:- ಗೌಡಪಾದರು ಅದ್ವೈತ ತತ್ವದ ಪ್ರಥಮೋಪಾದಕರು.

(4) " I do not know of any Hindu writer previous to Goudapada who attempted to give an exposition of the monistic doctrine.......... either by writing a commentary as did Sankara or by writing an independent treatise as bid Goudapada" S.Dasgupta. M.A.

ಮತ್ತೊಂದು ಗ್ರಂಥಕ್ಕೆ ವ್ಯಾಖ್ಯಾನರೂಪದಿಂದಾಗಲೀ, ಸ್ವತಂತ್ರಗ್ರಂಥರೂಪದಿಂದಾಗಲೀ, ಗೌಡಪಾದರಿಗಿಂತ ಹಿಂದೆ ಅದ್ವೈತ ತತ್ವವನ್ನು ಪ್ರತಿಪಾದನೆ ಮಾಡುವುದಕ್ಕೆ ಪ್ರಯತ್ನಪಟ್ಟ ಯಾವ ಹಿಂದೂ ಗ್ರಂಥಕರ್ತನನ್ನು ನಾನು ತಿಳಿದಿಲ್ಲ.

(5) There is reason to believe that the Brahmasutras were first commented by some Vaisnava writers who held some form of modified Buddhism. S.Dasgupta. M.A.

ಅರ್ಥವು:- ಬ್ರಹ್ಮಸೂತ್ರಗಳಿಗೆ ಮೊಟ್ಟಮೊದಲು ಕೆಲವು ವೈಷ್ಣವ ಗ್ರಂಥಕರ್ತರು ಯಾವುದೋ ಒಂದು ವಿಧವಾದ ದ್ವೈತ ತತ್ವವನ್ನು ಪ್ರತಿಪಾದನೆ ಮಾಡುವವರಾಗಿ ಭಾಷ್ಯವನ್ನು ರಚಿಸಿದ್ದಾರೆಂದು ನಂಬುವದಕ್ಕೆ ಕಾರಣಗಳಿರುತ್ತವೆ.

ಈ ವಾಕ್ಯಗಳ ಪರ್ಯಾಲೋಚನೆಯಿಂದ ಅದ್ವೈತತತ್ವವು ಸತ್ಸಂಪ್ರದಾಯದಿಂದ ಪ್ರಾಪ್ತವಲ್ಲದ ಸ್ವಕಪೋಲ ಕಲ್ಪಿತವಾದ ಶಂಕರಾಚಾರ್ಯರಿಗೆ ಪರಮಗುರುಗಳಾದ ಗೌಡಪಾದರ ರಚನೆಯೆಂಬುದು ನಿಶ್ಚಿತವಾಗುವುದು. ∞ ∞ ಪುರಾತನವೆಂದು ಒಪ್ಪಿದರೂ ವ್ಯಾಸಾದಿ ಸಾತ್ವಿಕ ಸಂಪ್ರದಾಯ ಪರಂಪರೆಗೆ ಪ್ರಾಪ್ತವಲ್ಲ. ನಾರಾಯಣ ಮುದ್ರಾದಿಗಳಿಂದ ಪವಿತ್ರರಾದ ಪ್ರಹ್ಲಾದ, ವಿಭೀಷಣ, ಶುಕ, ಅಂಬರೀಷ, ಮಾರ್ಕಂಡೇಯರುಗಳಿಗೆ ಪರಮ ವಿರುದ್ಧವಾದವು ಎಂದು ನಿರ್ಣೀತವಾಗಿರುವುದು. ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ ದ್ವೈತತತ್ವದ ಅನಾದಿತ್ವ ಮತ್ತು ವೈದಿಕತ್ವ ಸಮರ್ಥನವೆಂಬ ಪಂಚಮೋಲ್ಲಾಸವು ಮುಗಿದುದು.

### 6. ಅದ್ವೈತಮತದ ಪ್ರಚ್ಛನ್ನ ಬೌದ್ಧತ್ವ ಪ್ರದರ್ಶನವು.

ಈಗ ಭಾವಿಯಂತೆ ಆಳವಾದ ಒಂದು ಗುಟ್ಟನ್ನು ಹೇಳಬೇಕಾಗಿರುವುದು. ನಾಲ್ಕು ಕಡೆಗಳಲ್ಲಿಯೂ ಪ್ರಬಲವಾದ ಹಗ್ಗಗಳಿಂದ (ಸೂತ್ರಗಳಿಂದ) ರಕ್ಷಿಸಲ್ಪಟ್ಟು, ವೇದರೂಪವಾದ ವಿಸ್ತಾರವಾದ ಸಿಂಹಾಸನದಲ್ಲಿ ಸ್ಥಿತವಾದ ವೈಷ್ಣವ ದ್ವೈತ ತತ್ವವನ್ನು ನೋಡಿ ಅಸೂಯೆಯಿಂದ ಕೆಲವರು ಮಾಯಾವಿಗಳು ದ್ವೈತಿಗಳ(ವೇದವೆಂಬ) ರಾಜ್ಯವನ್ನು ಅಪಹಾರ ಮಾಡಬೇಕೆಂದು ಮಸಲತ್ತು ಮಾಡಿಕೊಂಡು ತಂತ್ರಗಳನ್ನು ಮಾಡುತ್ತಾ, ರಾಜನು ಇಲ್ಲವೇ ಇಲ್ಲ; ಎಲ್ಲಾ ಸುಳ್ಳು; ಇತ್ಯಾದಿ ಪಿತೂರಿಗಳನ್ನು ಪ್ರಕಟಿಸುವುದಕ್ಕೆ ಆರಂಭಿಸಿದರು. ದ್ವೈತಮತಪಕ್ಷಪಾತಿಯಾದ ವಿಷ್ಣುವು ಇದನ್ನು ಸಹಿಸಲಾರದೇ, ಇವರ ಕಪಟವನ್ನು ಹೊರಗೆ ಚೆಲ್ಲಬೇಕೆಂದು ಯೋಚಿಸಿ, ಅವೈಷ್ಣವರ ಪ್ರಭೇದಿಗಳಾದ ವೇದಮಾರ್ಗವನ್ನೇ ಅಂಗೀಕರಿಸದಿರುವ, ಐಕ್ಯವಾದಿಗಳ ಶತ್ರುಗಳಾದ ಬೌದ್ಧರಲ್ಲಿ ಹರಡಿ ಬಿಟ್ಟನು. ಮಾಯಾವಾದಿಗಳು ಮಾಡಿಟ್ಟ ಪರಮಾನ್ನದಂತಿರುವ ನವೀನ ಪಾಕವನ್ನು ವಿಷ್ಣುವು ಅಪವಿತ್ರರಾದ ಬೌದ್ಧರಿಗೆ ದಾನ ಮಾಡಿ ವಂಚಿಸಿಬಿಟ್ಟನು.

'' ದೈತ್ಯಾನಾಂ ನಾಶನಾರ್ಥಾಯ ವಿಷ್ಣುನಾ ಬುದ್ಧರೂಪಿಣಾ। ಬೌದ್ಧಶಾಸ್ತ್ರಮಸತ್ಪ್ರೋಕ್ತಂ ನಗ್ನನೀಲಪಟಾದಿಕಂ॥''

ಇತ್ಯಾದಿ ಪದ್ಮಪುರಾಣದ ಶ್ಲೋಕಗಳಿಂದಲೂ. ಇನ್ನೂ ಅನಂತರಿಕಾರ್ಡುಗಳಿಂದಲೂ ಈ ವಿಷಯವು ನಿಶ್ಚಿತವಾಗುವುದು. ಏವಂ ಚ ಐಕ್ಯವಾದಿಗಳು ಒಂದೆರಡು ಸೂತ್ರಭಾಗಗಳಲ್ಲಿ ಜೀರ್ಣವಾಗಿರುವ ಭಾಗಗಳನ್ನು ನೋಡಿ, ಅವಿದ್ಯಾರೂಪವಾದ ಮೂಷಕದಿಂದ ಕಚ್ಚಿಸಿ,

ವೇದರಾಜ್ಯವನ್ನು ತತ್ವಮಸ್ಯಾದಿ ಐದಾರು ಆಪಾತತಃ ಸಡಿಲವಾದ ಬಾಗಿಲುಗಳಿಂದ ಪ್ರವೇಶಿಸಬೇಕೆಂದು ಯತ್ನಿಸುತ್ತಿರುವಾಗ, ತಮ್ಮ ಯಾವತ್ತು ತಂತ್ರವು ಬೌದ್ಧರಿಂದ ಅಪಹೃತವಾದುದನ್ನು ನೋಡಿ ಖಿನ್ನರಾಗಿ, ವೃದ್ಧರಾಗಿ, ತಲೆನೆರತು ಪಟ್ಟುಗಟ್ಟಿದ್ದ ಮಾಯಾವಾದಾಗ್ರಣಿಗಳಾದ ಗೌಡಪಾದರನ್ನು ಬೇಡಿಕೊಂಡರು.

ಕುಲವೃದ್ಧರ ಪ್ರಾರ್ಥನೆಯನ್ನು ನಡೆಸಿ ಕೊಡುತ್ತೇನೆಂದು ಗೌಡಪಾದರು ಒಪ್ಪಿಗೆಯನ್ನಿತ್ತರು. ಟೊಂಕಕ್ಕೆ ಪಂಚೆಯನ್ನು ಸುತ್ತಿದರು. ಮನೆಯಿಂದ ಹೊರಗೆ ಹೊರಟಾಗಲೇ ಮುಗ್ಗರಿಸಿದರು. ಅಪಶಕುನವಾಯಿತು. ಅವರು ಸ್ವಲ್ಪ ಭೀತರಾಗಿ, ಮರುದಿವಸ ದಂಡೋಪಾಯವನ್ನು ಬಿಟ್ಟು ಬಿಟ್ಟು ಸಾಮೋಪಾಯದಿಂದಲೇ ಭದ್ರದಿಂದ ತಮ್ಮ ತತ್ವಸುಂದರಿಯನ್ನು ಬೌದ್ಧರ ಜೈಲಿನಿಂದ ಬಿಡಿಸಿ ಕೊಂಡು ಬರಬೇಕೆಂದು ನಿಶ್ಚಯಿಸಿದರು. ಅದಕ್ಕೆ ಸರಿಯಾಗಿ ಆಟಕ್ಕೆ ತಕ್ಕ ಬಹಿರೂಪ! ತಲೆಯನ್ನು ಬೋಳಿಸಿಕೊಂಡು, ಬೌದ್ಧ ವೇಷ ವನ್ನೇ ಧರಿಸಿಕೊಂಡು, ಬೌದ್ಧರ ಸಂಪ್ರದಾಯಗಳನ್ನು ಅನುಸರಿಸಿ ಅವರ ಜೊತೆಯಲ್ಲಿಯೇ ಇದ್ದು ಬಿಟ್ಟರು. ಕೆಲವರು 'ಮಾಧ್ಯಮಿಕ ಕಾರಿಕೆ' ಎಂಬ ಬೌದ್ಧಗ್ರಂಥಕ್ಕೆ ವ್ಯಾಖ್ಯಾನವನ್ನು ಮಾಡಿದರೆಂದು ಹೇಳುತ್ತಾರೆ. ಈ ವಿಷಯದಲ್ಲಿ ಚರಿತ್ರಕರ್ತರ ಸಮ್ಮತಿಯು ಇರುವುದು.

(1)There are some who believe that Goudapada was himself a buddhist and wrote a commentary on the Madhyamika, karikas since, in his opinion buddhism tallied with the system of Upnishads. ---- S.Radhakrishnan. M.A.

(2) Goudapada flourished after all the great Buddhistic teachers Asvaghosa, Nagarjuna and Vasubandhu, and I believe that there is sufficient evidence in his Karikas for thinking that he was possibly himself a Buddhist and considered that the teachings of the Upanishads tallied with those of Buddha. ---------- S.Dasgupta M.A. Ph.D

(3) It is indeed possible as alleged by some-that he may have been himself a Buddhist ..... we must believe that he regarded Buddhistic doctrine as suggesting him an interpreta- tion which could actually be found in the Upanishads and was indeed the fundamental truth. W.S.Urquhart M.A. D.Litt. Vice chancellor of Calcutta University.

ಈ ಮೂರುಜನ ಸಾಕ್ಷಿಗಳಿಂದಲೂ ಗೌಡಪಾದರು ಬೌದ್ಧರೇ ಆಗಿದ್ದರೆಂದು ತೋರುತ್ತದೆ. ಇದು ಗೌಡಪಾದರ ತಂತ್ರ. ಆಂಗ್ಲೇಯರ ರಾಯಭಾರಿಗೆ ಆ ಸಾಮರ್ಥ್ಯವಿಲ್ಲ. ಗೌಡಪಾದರು ಬೌದ್ಧಗೃಹದಲ್ಲಿ ಅವರಂತೆಯೇ ಇದ್ದು ಕ್ರಮವಾಗಿ ದ್ವಿಕಳಾತ್ಮಕವಾದ ತಮ್ಮ ಐಕ್ಯತತ್ವವನ್ನು ಕದ್ದುಕೊಂಡು ಬಂದುಬಿಟ್ಟರು. ಉಸಿರುಕಟ್ಟಿ ದಮ್ಮು ಬರುವಂತೆ ಓಡಿಬಂದರು. ಎಲ್ಲಿ ಬೌದ್ಧರು ಕೊಂದು ಹಾಕಿಬಿಡುವರೆಂಬ ಭಯ. ಅಲ್ಲಿ, ಅಲ್ಲಿ, ಗುಟ್ಟಾಗಿ ಪುನಃ ತಮ್ಮ ತತ್ವವನ್ನು ಹೊಸದಾಗಿ ತಾವು ಮಾಡಿದಂತೆ ಪ್ರಕಾಶ ಪಡಿಸಿದರು. ಬೌದ್ಧ ದಫೇದಾರರು ಒಬ್ಬಿಬ್ಬರು ಕೇಳಿದರು. '' ಇದು ಎಲ್ಲಿಂದ ಕದ್ದು ತಂದುದು? ಬೌದ್ಧರ ಮನೆಯಲ್ಲಿ ಈಕೆಯು ಇರಲಿಲ್ಲವೇ? ಎಂಬ ಪ್ರಶ್ನೆಗೆ ಗೌಡಪಾದರು ನಯವಾಗಿ ಉತ್ತರ ಕೊಟ್ಟರು. ನಿಮ್ಮ ತತ್ವಸುಂದರಿಯು ಪುಟ್ಟ ಪುಟ್ಟ ಹೆಜ್ಜೆಯಿಂದ ಶೀಘ್ರಗತಿಯಿಂದ ನಡೆಯುತ್ತಾಳೆ; ನಮ್ಮ ಹುಡುಗಿಯು ಮಂದಗಮನವುಳ್ಳವಳು; ಬೇಕಾದರೆ ಪರೀಕ್ಷೆ ಮಾಡಿಕೋ ಎಂದು ಹೇಳಿದರು. ದಫೇದಾರನಿಗೆ ಸೂಕ್ಷ್ಮವಿಚಾರವು ತಿಳಿದಿರಲಿಲ್ಲ, ತೆಪ್ಪಗಾದನು. ಗೌಡಪಾದರು ಅವನಿಗೆ ಮಂಕುಬೂದಿಯನ್ನು ಹಾಕಿಬಿಟ್ಟರು. ಇದು ಅವರ ಮಾತು.

'ಕ್ರಮತೇ ನ ಹಿ ಬುದ್ಧಸ್ಯ ಜ್ಞಾನಂ ಧರ್ಮೇಷುತಾಯಿನಃ। ಸರ್ವೇಧರ್ಮಾಸ್ತಥಾ ಜ್ಞಾನಂ ನೈತದ್ಬುದ್ಧೇನಭಾಷಿತಂ॥'

ಬೌದ್ಧನು ಕ್ರಮಿಕವಾದ(ಕ್ಷಣಿಕವಾದ) ಅನೇಕಜ್ಞಾನಗಳನ್ನು ಒಪ್ಪಿರುವನು. ನಾವು ಸ್ಥಿರವಾದ ಒಂದು ''ಜ್ಞಾನವನ್ನು'' ಹೇಳುತ್ತೇವೆ. ಬಾಕಿ ವಿಷಯದಲ್ಲಿ ಭೇದ ಏನೂ ಇಲ್ಲ.

ಈ ರೀತಿ ನಷ್ಟವಾದ ತಮ್ಮ ತತ್ವರೂಪವಾದ ನಿಧಿಯನ್ನು ಪುನಃ ತೆಗೆದುಕೊಂಡು ಬಂದು ಧೀರರಾದ ಪರಮಶಿಷ್ಯರಾದ ಶಂಕರಾಚಾರ್ಯರ ಕೈಲಿ ಗೌಡಪಾದರು ಒಪ್ಪಿಸಿಬಿಟ್ಟರು. ''ಅಪ್ಪಾ ನಾನೇನೋ ಮುದುಕನಾದೆ! ನಮ್ಮ ಹುಡುಗಿ ಬೌದ್ಧಗೃಹದಲ್ಲಿ ಕಷ್ಟ ಪಡುತ್ತಿದ್ದಳು ಬಿಡಿಸಿಕೊಂಡು ಬಂದೆ. ನೀನು ಇನ್ನು ಮೇಲೆ ಅವಳ ರಕ್ಷಣೆ ಮಾಡು'' ಎಂದು ಹೇಳಿದರು. ಶಂಕರಾಚಾರ್ಯರು ಆ ದಿವಸವೇ ಸನ್ಯಾಸ ಸ್ವೀಕರಿಸಿ ಪ್ರತಿಜ್ಞೆ ಮಾಡಿಬಿಟ್ಟರು. ಊರಲ್ಲೆಲ್ಲಾ ಸಾದಿಯಾದ, (ಎಂದರೆ, ಚಾಣಕ್ಯ ತಂತ್ರಕ್ಕಿಂತ ಹೆಚ್ಚು ತಂತ್ರ ಬಲ್ಲವ ರಿಂದ ನೂತನವಾಗಿ

ಕಲ್ಪಿತವಾದ) ಮಧ್ಯೇ ಬೌದ್ಧರಿಂದ ಅಪಹೃತವಾಗಿ, ಪುನಃ ದೈವಬಲದಿಂದಲೂ, ಗೌಡಪಾದರ ತಂತ್ರದಿಂದಲೂ ವಾಪಸು ಬಂದ ತತ್ವವನ್ನು ಅವೈಷ್ಣವ ಶಿಖಾಮಣಿಗಳಿಗೆ ಉಪದೇಶ ಮಾಡತೊಡಗಿದರು. ಬೌದ್ಧಜಮೇದಾರರು ಪುನಃ ಅಲ್ಲಿಲ್ಲ ಸಂದೇಹದಿಂದ ಪ್ರಶ್ನೆ ಮಾಡಿದರು. ಶಂಕರಾಚಾರ್ಯರು ಕೆಲವರಿಗೆ ಜಬರಿಸಿ ಓಡಿಸಿಬಿಟ್ಟರು. ಹೆಚ್ಚು ಪರೀಕ್ಷೆಗೇ ಅವಕಾಶ ಮಾಡಿಕೊಡಲಿಲ್ಲ. ಒಬ್ಬ ಪೋಲೀಸ್ ಸುಪರಿಂಟೆಂಡೆಂಟ್ ಮಾತ್ರ ಸ್ವಲ್ಪ ಮುಷ್ಕರ ಮಾಡಿ ಕೇಳಿದನು. ''ವಿಜ್ಞಾನವಾದಸ್ಯ ಚ ಕಿಂ ವಿಭೇದಕಂ ಭವನ್ಮಾತಾದ್ಬ್ರೂಹಿ ತತಃ ಪರಂ ವ್ರಜ'' ಎಂದು ಕೇಳಿದನು. ಆಗ ತಮ್ಮ ಗುರುಗಳಾದ ಗೌಡಪಾದರು ಹೇಳಿದ ಉತ್ತರವನ್ನೇ ಹೇಳಿ ಅವನ ಬಾಯಿ ಮುಚ್ಚಿಸಿಬಿಟ್ಟರು.

''ವಿಜ್ಞಾನವಾದೀ ಕ್ಷಣಿಕತ್ವಮೇಷಾಮಂಗೀಚಕಾರೇತಿ ಮಹಾನ್ ವಿಶೇಷಃ ।''

ವಿಜ್ಞಾನವಾದಿಯು ಅನೇಕ ಕ್ಷಣಿಕ ವಿಜ್ಞಾನಗಳನ್ನು ಒಪ್ಪಿದನು. ನಾನು ಒಂದೇ ನಿತ್ಯ ವಿಜ್ಞಾನವನ್ನು ಒಪ್ಪಿರುವೆನು. ಆದುದರಿಂದ ಬಹು ತಾರತಮ್ಯವು ಉಂಟು. ಇದು ನಿಮ್ಮ ಊರಿನ ತತ್ವವಲ್ಲ'' ಎಂದು ಹೇಳಿದರು. ಈಚೀಚಿಗೇನೋ ಜನಗಳು ಪತ್ತೆ ಮಾಡಿಬಿಟ್ಟರು. ಶಂಕರಾಚಾರ್ಯರ ತತ್ವವು ಪ್ರಚ್ಛನ್ನ ಬೌದ್ಧಮತವೇ ಎಂದು ಎಲ್ಲರೂ ಹೇಳುತ್ತಾರೆ.(ವಿವರಗಳನ್ನು ಅಪೆಂಡಿಕ್ಸ್''ಸಿ'' ಯಲ್ಲಿ ನೋಡುವುದು. ಪು. 46)♦ ♦♦ ಆದರೇನು? ಅವರ ಮತವನ್ನು ಅವರು ತಿರುಗಿ ಕದ್ದುಕೊಂಡು ಬಂದರು. ಇದರಲ್ಲಿ ಅವರ ತಪ್ಪೇನು?

ಶಂಕರ ತತ್ವವು ಬೌದ್ಧಮತವೇ ಹೌದೆಂಬುವುದರಲ್ಲಿ ಚರಿತ್ರಕಾರರ ಸಮ್ಮತಿಗಳು:-

(1) Shankara and his followers borrowed much of their dialectic form of criticism from the Buddhists. His Brahman was very much like the Suuya of Nagarjuna........... The debts of Sankara to the Self-luminosity of the Vignanavada Buddhism can hardly be over estimated. There seems to the much truth in the accusations against Sankara by Vignan Bikshu and others that he was a hidden Buddhist himself. S.DASGUPTHA M.A.Ph.D

(2) It is said, not without truth, that Brahmnisim killed Buddhism by a fraternal embrace.
S.RADHAKRISHNAN. M.A. D. Litt.

(3)Goudapada was familiar with Buddhistic doctrine, which he accepted when they were not in conflict with his own Advaita.

(4) Sankara admits the distinction between the absolute truth (paramartha) and the empirical truth(vyavhara) which answers to the Buddhistic distinction between the Paramartha and Samvriti.

(5) Sankara's conception of Moksha (freedom) is not much different from the Buddhistic view of Nirvana........ The realisation of the identity of the individual soul with Brahma ( ಸೋಹಂ ಅಥವಾ ಅಹಂ ಬ್ರಹ್ಮಾಸ್ಮಿ )answers to the I am nullity (ಶೂನ್ಯತೈವೋಹಂ) of the Madhyamika though the emphasis is on the different aspects of the one fact. S.RADHAKRISHNAN.

ಈ ವಿಷಯಗಳಲ್ಲಿ ಇನ್ನೂ ಬಹು ಪ್ರಮಾಣಗಳಿರುತ್ತವೆ. ಸಾವಕಾಶವಾಗಿ ನಿರೂಪಿಸುತ್ತೇವೆ. ಸಾವಕಾಶವಾಗಿ ನಿರೂಪಿಸುತ್ತೇವೆ ಅಂತೂ ಗೌಡಪಾದರು, ಶಂಕರಾಚಾರ್ಯರೂ ಅವೈಷ್ಣವರ ಆಸ್ತಿಯಾದ ಮಾಯಾವಾದವನ್ನು ಬೌದ್ಧರಿಂದ ವಾಪಸು ತೆಗೆದು ಕೊಂಡು ತಮ್ಮ ಕುಲವೃದ್ಧರ ಕಾರ್ಯವನ್ನು ಪೂರ್ಣಮಾಡಿಬಿಟ್ಟರು. ಇಂದ್ರಾದಿ ದೇವತೆಗಳ ಕಾರ್ಯವನ್ನು ಬಲಿನಿಗ್ರಹಮಾಡಿದ ವಾಮನನು ನೆರವೇರಿಸಿದಂತೆ, ಬ್ರಹ್ಮಾದಿ ದೇವತೆಗಳ ಪ್ರಾರ್ಥನೆಯನ್ನು ಶ್ರೀಕೃಷ್ಣನು ನೆರವೇರಿಸಿದಂತೆ, ದೇವತೆಗಳಿಂದ ಪ್ರಾರ್ಥಿತ ನಾದ ವಿಷ್ಣುವು ರಾವಣಾದಿಗಳನ್ನು ಹನನ ಮಾಡಿ ದೇವಕಾರ್ಯವನ್ನು ಸಾಧಿಸಿದಂತೆ, ಶಕುನಿಯು ದುರ್ಯೋಧನನ ಕಾರ್ಯವನ್ನು ನೆರವೇರಿಸಿ ಪಾಂಡವರನ್ನು ವನವಾಸಕ್ಕೆ ಅಟ್ಟಿದಂತೆ, ಕುಶಲನಾದ ಮಾರೀಚನು ರಾವಣನ ಕಾರ್ಯವನ್ನು ನೆರವೇರಿಸಿದಂತೆ, ಸಾಂಬಶಾಸ್ತ್ರಿಗಳು ಹರತೀ ಆಚಾರ್ರನ್ನು ಮೋಟುಮಾಡಬೇಕೆಂದು ಸ್ಮಾರ್ತರ ಪ್ರಾರ್ಥನೆಯನ್ನು ಮುಗಿಸಿದಂತೆ, ಗೌಡಪಾದ ಶಂಕರಾಚಾರ್ಯರು ಐಕ್ಯಮತದ್ವೇಷಿಯಾದ ಬುದ್ಧನಿಂದ ಅಪಹೃತವಾದ ಮತ್ತು ಶೂದ್ರಾದಿಗಳಲ್ಲಿ ಸೇರಿಹೋಗಿದ್ದ ತಮ್ಮ ಮಿಥ್ಯಾವಾದವನ್ನು ಪುನಃ ಪಡೆದು ಬಂದು, ಅವೈಷ್ಣವಾಗ್ರಣಿಗಳಾದ

ಪದ್ಮಪಾದ, ತೋಟಕಾದಿಗಳಿಂದ ನಾಲ್ಕು ಕಡೆಯಲ್ಲಿಯೂ ಸ್ತುತ್ಯಮಾನರಾಗಿ ವಿರಾಜಿಸುತ್ತಿದ್ದರು.

ಈ ಚರಿತ್ರೆಯ ಪರಾಮರ್ಶದಿಂದಲೇ ಅದ್ವೈತ ಮತವು ಪ್ರಚ್ಛನ್ನ ಬೌದ್ಧಮತವೆಂದು ನಿರ್ವಿವಾದವಾಗಿ ಸಿದ್ಧವಾಗುವುದು. ಬೌದ್ಧಮತವು ವೇದ ಸಮ್ಮತವಲ್ಲವೆಂದು ಸರ್ವವೈದಿಕರಿಂದಲೂ ಅಂಗೀಕೃತವಾಗಿರುವುದು. ಪರಬ್ರಹ್ಮನ ವಿಷಯದಲ್ಲಿಯೂ, ಜಗತ್ತಿನ ವಿಷಯದಲ್ಲಿಯೂ, ಮುಕ್ತಿಯ ವಿಷಯದಲ್ಲಿಯೂ ಉಭಯತತ್ವಗಳಿಗಿರುವ ಸಾದೃಶ್ಯವನ್ನು ನೋಡಿದರೆ ಅದ್ವೈತ ತತ್ವವು ವೇದವೆಂಬ ಅಂಗಿಯಿಂದ ಆಚ್ಛಾದಿತವಾದ ಬೌದ್ಧವಾದವೇ ಎಂದು ತೋರಿಬರುವುದರಿಂದ ಅದನ್ನು ಅವೈದಿಕವೆಂದು ಸಕಲ ವೈದಿಕ ಶಿಖಾಮಣಿಗಳೂ ಅವಶ್ಯವಾಗಿ ಅಂಗೀಕರಿಸಬೇಕು. ಗೌಡಪಾದ ಶಂಕರಾಚಾರ್ಯರುಗಳೇ ಅತ್ಯಂತ ಸಾದೃಶ್ಯವನ್ನು ಒಪ್ಪಿಕೊಂಡು ಕ್ಷುದ್ರವಾದ ಒಂದು ಸಣ್ಣವಿಷಯದಲ್ಲಿ ಭೇದವನ್ನು ತೋರಿಸುವುದಕ್ಕೆ ಯತ್ನಿಸಿದರು. ಅದೂ ನ್ಯಾಯ ಪ್ರಾಪ್ತವಲ್ಲವಾದುದವೆಂದು ವಿಮರ್ಶೆಯಿಂದ ತೋರಿಬರುವುದರಿಂದ ನಿರ್ಗುಣ ಬ್ರಹ್ಮವಾದವೂ, ಮಾಯಾವಾದವೂ ವೇದೋಕ್ತವಾಗಲಾರದು. ಇಲ್ಲಿಗೆ ಚಪೇಟಿಕಾ ತಾಂಡವೋತ್ಸವದಲ್ಲಿ ಅದ್ವೈತ ಮತದ ಪ್ರಚ್ಛನ್ನ ಬೌದ್ಧತ್ವ ಪ್ರದರ್ಶನವೆಂಬ ಷಷ್ಠೋಲ್ಲಾಸವು ಮುಗಿದುದು.

ಇಲ್ಲಿಗೆ ಸಾಂಬ ಗಳಹಸ್ತಿಕಾ ಪ್ರಥಮ ಭಾಗವು ಮುಗಿದುದು.

ಶ್ರೀಮಧ್ವಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು.

ಜಯತ್ಯಾನಂದ ತೀರ್ಥೇಷ್ಟದೇವತಾ ನರಕೇಸರೀ। ವಿಪಾಟಿತಾಜ್ಞಾನತಮಃ ಕಪಾಟಾತ್ಯುರುಹುಂಕೃತಃ॥

ಜಯತ್ಯಮಿತಪೌರುಷಃ ಸ್ವಜನತೇಷ್ಟಚಿಂತಾಮಣಿಃ। ಅಜೇಶ ಮುಖವಂದಿತೋ ಗುಣಗಣಾರ್ಣವಃ ಶ್ರೀಪತಿಃ॥

[11] ವಸ್ತುತಃ ಈ ದೃಷ್ಟಾಂತವು ಅದ್ವೈತಮತಕ್ಕೆ ಉಚಿತವಲ್ಲ. ಅದ್ವೈತವನ್ನು ನೀರೂಪವಾದ ಆಕಾಶಕ್ಕೆ ಹೋಲಿಸಬಹುದು. 'ಗಗನೋಪಮಂ' ಎಂದು ಗೌಡಪಾದರೇ ಹೇಳಿರುವರು. ದ್ವೈತಮತವು ಸೂರ್ಯ ರಶ್ಮಿಯು ಸಮಸ್ತವರ್ಣಗಳನ್ನೂ ಒಳಗೊಂಡಿರುವಂತೆ ಸಮಸ್ತ ನಿಜ ತತ್ವಗಳಿಗೂ ಆಕರವಾಗಿ ಶುಭ್ರವಾಗಿಯೂ ಇರುವುದು. ಯಾವ ತತ್ವಕ್ಕೂ ಅಪಲಾಪಮಾಡದೇ ಸರ್ವಸಂಗ್ರಾಹಕ ವಾಗಿಯೂ ಇರುವುದು.

## ™™ APPENDIX A;

ಸ್ಮಾರ್ತರೆಂಬ ಅವರ ಹೆಸರೇ ಅದ್ವೈತಮತದ ಅಪ್ಪಟ ವೈದಿಕತೆಯನ್ನು ಪ್ರಕಾಶಿಸುತ್ತದೆ ಎಂದು ಕೆಲವರು ಹೇಳುವರು. ಕೆಲವರು ಯಾಕೆ? ಇದು ಘನ ಹೊಂದಿದ ಬಿರುದಾಂಕಿತರಾದ ಒಬ್ಬರು ಮಹನೀಯಶಾಸ್ತ್ರಿಗಳು - ಕಾರುಣ್ಯದಿಂದ ನಾವು ನಾಮ ನಿರ್ದೇಶನ ಮಾಡಲಾರೆವು- ರಾಜಾರೋಷವಾಗಿ ಸಭೆಯಲ್ಲಿ ಹೇಳಿದ ಅಪ್ರತಿಹತ ವಾಕ್ಯಾರ್ಥವು. ಗೂಢದ್ವೇಷದಿಂದ ಸಹಿತವಾದ ಹೃದಯವುಳ್ಳ ಶಾಸ್ತ್ರಿಗಳಿಗೆ ಅವರ ಮಾತು ಉಚಿತವೇ! ಅದುಅವರ ನಿಜಯೋಗ್ಯತೆಯನ್ನು ಪ್ರಕಾಶಪಡಿಸಬಹುದು. ಆದರೆ ಅವರ ಬಿರುದಿಗೂ ವಯಸ್ಸಿಗೂ, ಅಗೌರವಕರವಾದುದು. ಉಪನ್ಯಾಸಕ್ಕೆ ಹೋದವರೆಲ್ಲರೂ ಆ ದಿವಸ ಶಾಸ್ತ್ರಿಗಳು ತಮ್ಮ ತಲೆಯನ್ನೂ, ತಮ್ಮ ಬಿರುದನ್ನೂ, ಮನೆಯಲ್ಲೇ ಇಟ್ಟು ಉಪನ್ಯಾಸ ಮಂದಿರಕ್ಕೆ ನಿರ್ಗುಣ ಭಾವದಿಂದ ಬಂದಿದ್ದರೆಂದು ತಿಳಿಸಿರುತ್ತಾರೆ. ಇದು ನಿಜವೆಂದು ನಂಬುವುದಕ್ಕೆ ಅನೇಕ ಕಾರಣಗಳಿರುತ್ತವೆ. ಶಾಸ್ತ್ರಿಗಳ ವಾಕ್ಯಾರ್ಥಗಳೆಲ್ಲವೂ ಸಗಣಿ ಉಂಡೆಗಳಂತೆ ಹಸಿಯದಾದರೆ ಅವಮಾನಕರವೂ, ಒಣಗಿದರೆ ಅಗ್ನಿವರ್ಧಕವೂ , ಆಗಿರುವುವು. ಕೆಲವನ್ನು ನಿರೂಪಿಸುತ್ತೇವೆ. (1) ಸ್ಮಾರ್ತರೆಂಬ ಹೆಸರು ಅದ್ವೈತ ಮತವು ವೈದಿಕವೆಂಬಲ್ಲಿ ಪ್ರಮಾಣವು ಎಂಬುದೇ ಮೊದಲನೆಯ ವಾಕ್ಯಾರ್ಥವು. ನಿಜವೇ! ಸ್ಮಾರ್ತರೆಂದರೆ ಸ್ಮೃತ್ಯುಕ್ತಕರ್ಮ ಮಾಡುವವರೆಂದು ಅರ್ಥವು. ಹೀಗಿರುವಲ್ಲಿ ಸ್ಮಾರ್ತರು ಅವೈದಿಕ ಮತವುಳ್ಳವರು ಎಂದು ಹೇಳುವುದು ಹೇಗೆ? ಬ್ರಾಹ್ಮಣನೆಂದು ಹೇಳಿ ದಡ್ಡನೆಂದು ಹೇಳುವುದು ಹೇಗೆ? ಶಾಸ್ತ್ರಿಯೆಂದು ಕರೆದು ಜ್ಞಾನಶೂನ್ಯನೆಂದು ಹೇಳುವುದು ಹೇಗೆ? ಗೌಃ ಎಂದುಕರೆದು ನಿಂತಿರುವ ಮುದಿ ಎತ್ತು ಎಂದು ಹೇಳುವುದು ಹೇಗೆ? ಅರಸನೆಂದು ಕರೆದು ಮೈಸೂರು ರಾಜರಲ್ಲವೆಂದು ಹೇಳುವುದು ಹೇಗೆ? ಕೆಂಪಣ್ಣನೆಂದು ಕರೆದು ಕಪ್ಪಗಿರುವವನೆಂದು ಹೇಳುವುದು ಹೇಗೆ? ಮಿ॥ ಕೊಲ್ಮ್ಯಾನ್ ಎಂದು ಕರೆದು ಇದ್ದಲಿಂದ ಅವನು ಮಾಡಲ್ಪಟ್ಟಿಲ್ಲವೆಂದು ಹೇಳುವುದು ಹೇಗೆ? ಹೀಗೆ ಸ್ಮಾರ್ತರೆಂಬ ಹೆಸರೇ ಅವರ ಅದ್ವೈತಮತದ, ವಿಭೂತಿಧಾರಣೆಯೇ ಮೊದಲಾದ ಆಚಾರಗಳ, ನಿಷ್ಠಾವಾದಿಪಾಕದ, ಏಕಾದಶೀಶ್ರಾದ್ಧದ, ಯಜ್ಞದಲ್ಲಿ ಪಶುಹನನದ, ಪಿತೃಗಳಿಗೆ ಅನಿವೇದಿತಾನ್ನ ಭೋಜನದ ವೈದಿಕತೆಯನ್ನು ನಿಸ್ಸಂಶಯವಾಗಿ, ನಿರ್ವಿವಾದವಾಗಿ, ನಿಶ್ಚಯವಾಗಿ, ಬೆಲ್ಲವನ್ನು ಬೆರಸಿ ಮಾಡಿದ ವಜ್ರದಗಾರೆಯಂತೆ ದೃಢಪಡಿಸುವುವು.

ವಸ್ತುತತ್ವವೇನೆಂದರೆ- ಸಂಘದ್ವೇಷವನ್ನು ವೃದ್ಧಿಮಾಡುವುದಕ್ಕೆ ಇಂಥಾ ವಾಕ್ಯಗಳು ಮೂಲಕಾರಣವು. ಇದಕ್ಕೆ ಪ್ರತಿಬಂದೀ ಉತ್ತರ ಗಳನ್ನು ನಮ್ಮ ಹರತೀ ಆಚಾರ್ರು ನಮಗೆ ಎರಡು ವಿಧವಾಗಿ ಹೇಳಿರುವರು. (ಅ) ಸ್ಮಾರ್ತರೆಂದರೆ ಸ್ಮೃತ್ಯನುಸಾರಿಗಳು ಎಂದು ಅರ್ಥವು, ಎಂದರೆ ವೇದಾನುಸಾರಿಗಳಲ್ಲ, ವೈದಿಕರಲ್ಲ ಎಂದು ಏರ್ಪಟ್ಟಿತು. ಹಾಗಿದ್ದರೆ ಶ್ರೌತರು ಎಂಬ ಸುಂದರ ಹೆಸರು ಬರುತ್ತಿತ್ತು ಸ್ಮೃತಿಯು ಶ್ರುತ್ಯನುಗುಣವಾಗಿರುವುದರಿಂದ ಸ್ಮಾರ್ತರೆಲ್ಲರೂ ಶ್ರೌತರೂ ಆಗುವರು ಎಂದು ಶಾಸ್ತ್ರಿಗಳು ಹೇಳುವುದಾದರೆ, ಧೀರರಾದ ಹರತಿ ಆಚಾರ್ರು ಹೀಗೆ ಹೇಳುವರು:- ವೈಷ್ಣವರು ಎಂದರೆ ವಿಷ್ಣುವಿನ ಅನುಯಾಯಿಗಳು ಎಂದರ್ಥವು. ವಿಷ್ಣುವು ''ವೇದೈಶ್ಚ ಸರ್ವೈಃ ಅಹಮೇವ ವೇದ್ಯಃ '' ಎಂಬ ಪ್ರಮಾಣಾನುಸಾರವಾಗಿ ಸರ್ವವೇದ ಪ್ರತಿಪಾದ್ಯನಾದುದರಿಂದ ಸರ್ವವೇದಪ್ರತಿಪಾದ್ಯನಾದ ವಿಷ್ಣುವಿನ ಅನುಯಾಯಿಗಳು ವೈದಿಕರು ಎಂದು ಸಿದ್ಧವಾಯಿತು. ಶಾಸ್ತ್ರಿಗಳು ಮೊದಲಾದವರಿಗೆ ವೇದದಲ್ಲಿ ಒಂದು ಚೂರೂ ಜಾಗವಿಲ್ಲವಾದುದರಿಂದ ಅವರು ಪಾಶುಪತಾದಿಸ್ಮೃತಿಗಳನ್ನು ಅನುಸರಿಸಿಕೊಂಡು ತದುಕ್ತ ಭಸ್ಮಧಾರಣ ಶಿವಾರ್ಚನಾದಿಗಳಲ್ಲಿ ತತ್ಪರರಾಗಿ ಸ್ಮಾರ್ತರೆಂಬ ಸುಪ್ರಸಿದ್ಧನಾಮವನ್ನು ಪಡೆದಿರುವುದು ನ್ಯಾಯಪ್ರಾಪ್ತವೇ ಸರಿ ಎಂದು ಹೇಳುವರು. ಇದು ಹರತೀ ಆಚಾರ್ರ ಪ್ರಥಮ ಆರ್ಗ್ಯುಮೆಂಟ್. (ಆ) ಅಥವಾ ಅನಾದಿ ಕಾಲದಿಂದಲೂ ಸಕಲ ದೇವ, ಋಷಿ, ಗಂಧರ್ವಾದಿಗಳೆಲ್ಲರೂ ವೈಷ್ಣವರೆಂದು ನಾವು ಹಿಂದೆಯೇ ನಿರೂಪಿಸಿರುತ್ತೇವಷ್ಟೇ! ಸರ್ವರೂ ವೈಷ್ಣವರೇ ಆಗಿದ್ದರು. ಹೀಗಿರುವಲ್ಲಿ ಪ್ರಹ್ಲಾದಾದಿ ವಿಷ್ಣೂತ್ಕರ್ಷವಾದಿಗಳಾದ ಚಕ್ರಾಂಕಿತರಾದ ವೈಷ್ಣವರ ದ್ವೇಷಿಗಳಾದ ಕೆಲವರು ಹಿರಣ್ಯಕಶಿಪು ಪ್ರಭೃತಿಗಳು, ವೇದೋಕ್ತ ವಿಷ್ಣೂಪಾಸನೆಯನ್ನು ಬಿಟ್ಟು ಕುಮಾರ್ಗ ವನ್ನು ಅವಲಂಬಿಸಿದುದರಿಂದ, ದೇವತೆಗಳೂ ಪರಮ ವೈಷ್ಣವರಾದ ನಾರದರೂ ಅವರಿಗೆ ಸ್ಮಾರ್ತರೆಂದು ಅಡ್ಡಹೆಸರು ಇಟ್ಟಿರ ಬಹುದು. ಹೇಗೆಂದರೆ, ಸ್ಮಾರ್ತವೆಂಬ ಪದಕ್ಕೆ ಸುಪ್ರಸಿದ್ಧವಾದ, ಆರ್ತರು= ದುಃಖಿಗಳು ಎಂದು ಅರ್ಥವಾಗುವುದು. ಶ್ರುತ್ಯುಕ್ತ ವಿಷ್ಣುಸರ್ವೋತ್ತಮತ್ವೋಪಾಸನೆಯ ಪರಿತ್ಯಾಗದಿಂದ ವೇದೋಕ್ತ ಮುಕ್ತ್ಯಾದಿ ಫಲರಹಿತರಾಗಿ ''ಈಶ್ವರೋಽಹಂ'' ಇತ್ಯಾದಿ ಗೀತೋಕ್ತ ವಿರುದ್ಧ ಫಲಗಳಿಗೆ ಅದ್ವೈತೋಪಾಸಕರು ಭಾಗಿಗಳಾಗಿರುವುದರಿಂದ ಅವರು ಶೋಚನೀಯರೇ ಆಗಿರುವಷ್ಟೆ! ಏಷ್ಯನಿಶ್ಚಯವನ್ನು ಸೂಚಿಸುವುದಕ್ಕೋಸ್ಕರ ದುಃಖಿಗಳು ಎಂದು ಪ್ರಯೋಗವು.

ಇವೆರಡು ಉತ್ತರಗಳು ಸಾಂಬಶಾಸ್ತ್ರಿಗಳನ್ನು ಮೋಟು ಮಾಡಬೇಕೆಂದು ವೈಷ್ಣವರಿಂದ ಪ್ರಾರ್ಥಿತರಾದ ಹರತೀ ಆಚಾರ್ರ ವಾಕ್ಯಾರ್ಥಗಳು. ಶಾಸ್ತ್ರಿಗಳೂ, ಹರತೀ ಆಚಾರ್ರೂ ಅಖಾಡಾದಲ್ಲಿ ಗುದ್ದಾಡುತ್ತಿರಲಿ.

ವಸುತತ್ವವೇನೆಂದರೆ-- ಇದು ನಮ್ಮ ಮಾತು-- ಸ್ಮಾರ್ತ, ವೈಷ್ಣವರೆಲ್ಲರೂ ಸ್ಮಾರ್ತ ಬ್ರಾಹ್ಮಣರೇ.

ಆದರೆ ಕುರುಪಾಂಡವ ನ್ಯಾಯದಿಂದ ಮಾಧ್ವರಿಗೂ ಸಕಲ ದೇವತೆಗಳಿಗೂ ''ಪ್ರಹ್ಲಾದೋ ಜನ್ಮವೈಷ್ಣವಃ'' ಇತ್ಯಾದಿ ಪದ್ಮಪುರಾಣದ ವಚನಾನುಸಾರ, ಪ್ರಹ್ಲಾದಾದಿ ಕೆಲವು ಅಸುರರಿಗೂ, ವೈಷ್ಣವರೆಂಬ ಹೆಸರು ಬಂದಿರುವುದು. ಸಕಲ ಪಾಂಡವರೂ ಕೂಡ ಕುರುಕುಲದಲ್ಲಿ ಹುಟ್ಟಿದುದರಿಂದ ಕೌರವರೆಂದೆನಿಸುವರು. ಆದುದರಿಂದಲೇ ಕೃಷ್ಣನು ಅರ್ಜುನನ್ನು ಕುರಿತು ''ಕುರುನಂದನ'' ಎಂದು ಸಂಬೋಧಿ ಸಿರುವನು. ಹಾಗಿದ್ದರೂ ಅವರಿಗೆ ಪಾಂಡವರೆಂಬ ವಿಶೇಷ ಹೆಸರುಂಟು. ಹಾಗೆಯೇ ಸಕಲ ಬ್ರಾಹ್ಮಣರೂ ಸಹ ಸ್ಮಾರ್ತರಾದರೂ ಮಾಧ್ವರಿಗೆ, ಪಾಂಡವರಿಗೆ ಇರುವಂತೆ ವೈಷ್ಣವರೆಂಬ ವಿಶೇಷ ಹೆಸರುಂಟು. ಈಗಲೂ ರಾಘವೇಂದ್ರ ಸ್ವಾಮಿಗಳ ಮಠ, ವ್ಯಾಸರಾಯರ ಮಠ, ಸತ್ಯಬೋಧರ ಮಠ, ಹೀಗೆ ನಾಮನಿರ್ದೇಶಗಳಿಂದ ಕರೆದರೂ ಈ ಮಹನೀಯರಿಗಿಂತ ಪೂರ್ವದಲ್ಲಿ ಆಯಾಯ ಮಠಗಳು ಇರಲಿಲ್ಲವೆಂದು ಅರ್ಥವಲ್ಲ, ಪ್ರಸಿದ್ಧರಾದುದರಿಂದ ಅವರ ಹೆಸರುಗಳು ಉಳಿದು ಬಂದಿರುವುವು. ಹೀಗೆಯೇ ಮಧ್ವಾಚಾರ್ಯರಿಗಿಂತ ಪೂರ್ವದಲ್ಲಿ ಮಧ್ವತತ್ವೋಪದೇಶಕರು ವೈಷ್ಣವರು, ಇರಲಿಲ್ಲವೆಂದು ಹೇಳಕೂಡದು. ಆ ಸಂಪ್ರದಾಯ ದಲ್ಲೇ ಪ್ರಾಪ್ತರಾದ ಶ್ರೀಮನ್ಮಧ್ವಾಚಾರ್ಯರು ಶಂಕರತತ್ವವು ಅಶಿವತ್ವ (ಅಮಂಗಳ)ಪ್ರದವು, ಮತ್ತು ಸಾಂಕರ್ಯಕಾರಕವೆಂದು ಸಯುಕ್ತಿಕವಾಗಿ ತೋರಿಸಿ ಶಾಸ್ತ್ರಿಗಳಂಥವರ ಸಂಗದಿಂದ ಪ್ರಾಪ್ತವಾದ ವೈಷ್ಣವರ ಭ್ರಮವನ್ನು ನಿವಾರಣೆ ಮಾಡಿ, ದೀಪದಿಂದ ದೀಪವನ್ನು ಹಚ್ಚಿದಂತೆ, ತಮ್ಮ ಸರ್ವಜ್ಞತ್ವದಿಂದ ಅನೇಕರಿಗೆ ಸರ್ವಜ್ಞತ್ವವನ್ನು ಉಂಟುಮಾಡಿ, ತಮ್ಮ ಹುಡುಗರ ಪರಾಕ್ರಮವನ್ನು ನೋಡುತ್ತಾ ಅದ್ಯಾಪಿ ವಿಜಯಶೀಲರಾಗಿ ಬದುಕಿರುವರು. ಅವರ ಪ್ರಸಿದ್ಧ ಹೆಸರಿನಿಂದ ವೈಷ್ಣವರಿಗೆ ಮಾಧ್ವರು ಎಂಬ ಮತ್ತೊಂದು ಬಿರುದು ಬಂತು. ಅಂದಿನಿಂದ ಈಚೆಗೆ ಮಾಧ್ವರು ''ಬೀಗರ ಹಾಡಿನಂತೆ'' ಅದ್ವೈತತತ್ವದ ನಿಂದನೆಯನ್ನು ಮಾಡುತ್ತಾ, ಶಾಸ್ತ್ರಿ ಗಳಿಗೂ ಹೇಳಿಕೊಡುವರು. ''ಇದು ದುರ್ಮಾರ್ಗವು, ನರಕಪ್ರದವಾಗುವುದು, ನೀವು ಉತ್ತಮ ಬ್ರಾಹ್ಮಣರಿದ್ದೀರಿ. ಪರಬ್ರಹ್ಮೋಪಾ ಸನೆಯನ್ನು ಮಾಡುವುದಕ್ಕೆ ನಿಮಗೆ ಅಧಿಕಾರವಿರುತ್ತದೆ. ಇದು ಪ್ರಸಿದ್ಧವಾದ ವಿಷ್ಣುಸಹಸ್ರನಾಮದ ಉಪಸಂಹಾರಶ್ಲೋಕವು:-

'ಏಷಃ ನಿಷ್ಕಂಟಕಃ ಪಂಥಾಃ ಯತ್ರ ಸಂಪೂಜ್ಯತೇ ಹರಿಃ। ಕುಪಥಂ ತಂ ವಿಜಾನೀಯಾತ್ ಗೋವಿಂದರಹಿತಾಗಮಂ॥'

ಆದ್ದರಿಂದ ಗೋವಿಂದ ರಹಿತವಾದ ಆಗಮವು ಎಂದರೆ ಗೋವಿಂದನನ್ನು ಪ್ರತಿಪಾದನೆ ಮಾಡದೇ, ಅಮಂಗಳವಾದ, ಸರ್ವನಾಶಕವಾದ ಐಕ್ಯವನ್ನು ಪ್ರತಿಪಾದನೆ ಮಾಡುವ ಶಾಸ್ತ್ರವು ಕುಶಾಸ್ತ್ರವು. ಅಲ್ಲಿಮುಳ್ಳು ಇರುವುದು, ನೀವು ವೃದ್ಧರು, ಸಾಹಸ ಮಾಡಿ ಪ್ರಯಾಣ ಮಾಡಬೇಡಿ ಎಂದು ಹೇಳುವರು. ಶಾಸ್ತ್ರಿಗಳು ಕೇಳದಿದ್ದರೆ ಹರತಿ ಆಚಾರ್ರು ಏನು ಮಾಡುವರು? ಮೈಸೂರು ರಾಜ್ಯವೆಲ್ಲಾ ಏನು ಮಾಡುವುದು? ಪರಮ ಹಂಸಶಿಖಾಮಣಿಗಳಾದ ಶ್ರೀಮದುತ್ತರಾದಿ ಮಠದ ಶ್ರೀಶ್ರೀಗಳು ತಾನೇ ಏನು ಮಾಡುವರು? ಸಭೆಯಲ್ಲೇ ಒಬ್ಬರು ಶಾಸ್ತ್ರಿಗಳು ''ಅವರ ಮಠವೇ ಹೆಂಚುಗಳೆಲ್ಲಾ ಮುರಿದು ಬಿದ್ದು ಹೋಗುತ್ತಿದೆ, ಮಧ್ಯೆ ಮಠ ಮಠಕ್ಕೆ ಕಲಹ, ನಮಗೆ ಇವರು ಹೇಳುವುದೇನು? ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಇದೆಲ್ಲಾ ನಿಜ! ಆದರೂ ತಮ್ಮ ತಾಪತ್ರಯಗಳು ಎಷ್ಟು ಇದ್ದರೂ, ಶಾಸ್ತ್ರಿಗಳ ಮೇಲಿನ ವಿಶ್ವಾಸದಿಂದ, ನಿಜತತ್ವದ ಪ್ರೀತಿಯಿಂದ , ಬ್ರಾಹ್ಮಣ್ಯ ವಾತ್ಸಲ್ಯದಿಂದ, ದಫೇದಾರ್ ಸ್ಮಾರ್ತ ಮಿ॥ ರಂಗಣ್ಣನವರ ಪ್ರಾರ್ಥನಾನುಸಾರವಾಗಿ ಒಂದು ಸಂದೇಶವನ್ನು ಕಳುಹಿಸಿದರು. ಶಾಸ್ತ್ರಿಗಳು ಕೇಳಿದರೆ ಸಂತೋಷ. ಸರಿಯಾದ ವಿಚಾರವು ಒದಗಲೆಂದು ನಾವೂ ನಮ್ಮ ನಂಜುಂಡೇಶ್ವರನಿಗೆ ಹರಸಿ ಕೊಂಡಿದ್ದೇವೆ.

(2) ಮಾಧ್ವರೆಲ್ಲರೂ ಬೀಗರ ಹಾಡುಗಳಂತೆ ಕೆಲವು ಅದ್ವೈತನಿಂದಕ ಶ್ಲೋಕಗಳನ್ನು ಬಾಯಿಪಾಠ ಮಾಡಿರುತ್ತಾರೆ. ನಾವೂ ಇನ್ನು ಮೇಲೆ ದ್ವೈತನಿಂದಾ ಶ್ಲೋಕಗಳನ್ನು ಹೇಳಿಕೊಡುವುದು ಕಷ್ಟವಲ್ಲ ಎಂಬುದು ಬಿರುದಾಂಕಿತರಾದ ಶಾಸ್ತ್ರಿಗಳ ಎರಡನೆಯ ವಾಕ್ಯಾರ್ಥವು. ಅದು ನಿಜವು. ಗಣಿತದಲ್ಲಿ formulae(ಸೂತ್ರಗಳು) ಇದ್ದಂತೆ ಐಕ್ಯವಾದಕ್ಕೆ ಇಷ್ಟೇ ದೋಷಗಳು ಎಂದು ನಿಗದಿ ಯಾಗಿ ಹೋಗಿವೆ. ಅದನ್ನೇ ಜಡ್ಡು ಹೊಡೆದುಕೊಂಡು ಮಾಧ್ವ ಧಾಂಡಿಗರು ಅದ್ವೈತಮತವನ್ನು ಮಾನಗೆಡಿಸಿ ಬೀದಿಗೆ ಹಾಕುತ್ತಾರೆ. ದ್ವೈತಮತದ ಮೇಲೆ ಹೀಗೆ ದೂಷಣ ಶ್ಲೋಕಗಳನ್ನು ಮಾಡುವುದಕ್ಕೆ ಹೊರಟರೆ, ಅದ್ವೈತಿಗಳೂ ದ್ವೈತಭಾವವನ್ನು ಹೊಂದಿದ ವರಾಗಿ, ತಮಗೆ ತಾವೇ ಚಪೇಟಿಕಾ ಕೊಟ್ಟಂತಾಗುವುದು. ಆದುದರಿಂದ ಶಾಸ್ತ್ರಿಗಳು ಬೀಗರ ಹಾಡನ್ನು ಹೇಳದೇ, ಜೋಡು ಹೊಲಿಯುವವರೂ ಬೆರಣಿ ಮಾರುವವರೂ ಹೇಳುವ ಮಾತನ್ನು ಹೇಳಿದರು.

(3)ಕಿಂಚ ಸಭೆಯಲ್ಲಿರುವ ಒಬ್ಬೊಬ್ಬನೂ ಶ್ರೀಮದುತ್ತರಾದಿಮಠದ ಸ್ವಾಮಿಗಳಿಗೇನೂ ಕಡಿಮೆಯಿಲ್ಲವೆಂಬುದು ಶಾಸ್ತ್ರಿಗಳ ತೃತೀಯ ವಾಕ್ಯಾರ್ಥವು. ಅದಕ್ಕೇ ನಾವು ಶಾಸ್ತ್ರಿಗಳು ತಲೆಯನ್ನು ಮನೆಯಲ್ಲಿಟ್ಟು ಉಪನ್ಯಾಸ ಮಂದಿರಕ್ಕೆ ಬಂದಿದ್ದರೆಂದು ಹೇಳಿದೆವು.

(4) ಪೀಠಕ್ಕೆ ಗೌರವವನ್ನು ತೋರಿಸಿದ್ದೇವೆಂಬುದು ಬಿರುದಾಂಕಿತರಾದ ಶಾಸ್ತ್ರಿಗಳ ಚತುರ್ಥವಾಕ್ಯಾರ್ಥವು. ಇದು ಒಂದು ಕಡ್ಲೆಪುರಿ ಮಾತು. ನೋಡಿದವರಿಗೆ ಶಾಸ್ತ್ರಿಗಳು ಮಹಾ ಪಂಡಿತರೆಂಬ ಭ್ರಮವು ಬರಬೇಕೆಂದು ಕೊಚ್ಚಿ ರಾಜರು ಅಧ್ಯಕ್ಷರಾಗಿ ನಮ್ಮ ಮಹಾ ಪ್ರಭುಗಳು ಸಭಿಕರಾದರೆ ಯಾವ ಮತ ದೊಡ್ಡದೋ ನೋಡಬಹುದೆಂದು ಹೇಳಿದರು. ಬಡಾಯಿ ಮಾಡುವ ಬೊಗಳೇ ಕೆಂಚನ ಕಥೆಗೆ ಇದಕ್ಕಿಂತ ಉತ್ತಮ ದೃಷ್ಟಾಂತವು ದೊರಕಲಾರದು. ಶಾಸ್ತ್ರಿಗಳು ಎಷ್ಟು ದಿಗ್ವಿಜಯಮಾಡಿ ಎಷ್ಟು ದ್ವೈತವಾದದಲ್ಲಿ ಗೆದ್ದು ಗ್ರಂಥಗಳನ್ನು ರಚಿಸಿದರೋ ಅದನ್ನು ತಿಳಿದರೆ, ಮುಂದೆ ಇವರ ಪರಾಕ್ರಮ ವಿಷಯದಲ್ಲಿ ಪಣವನ್ನೊಡ್ಡಿ ವಿಚಾರ ಮಾಡಬಹುದು. ಇನ್ನು ಶಾಸ್ತ್ರಿಗಳು ಹೇಳಿರುವ ಮೂರುನಾಲ್ಕು ವಾಕ್ಯಾರ್ಥಗಳನ್ನು ನಿಧಾನವಾಗಿ ನಿರೂಪಿಸುವೆವು. ಶಾಸ್ತ್ರಿಗಳ ವಾಕ್ಯಾರ್ಥವೇನೋ ಜಾರಣ, ಮಾರಣ, ಉಚ್ಚಾಟನ, ಸ್ತಂಭನಾದಿ ಸಕಲ ಶಕ್ತಿಭರಿತವಾದ ಪೈಶಾಚ ದಂಡದಂತೆ ಭಯಂಕರವಾಗಿರುವುದು. ಆದರೆ ಹರತೀ ಆಚಾರ್ರ ಗುರುಗಳು ಬಕವೈರಿಯಾದ ಭೀಮನು. ಶಾಸ್ತ್ರಿಗಳ ಗುದ್ದಿನಿಂದ ತಮ್ಮ ಮುಷ್ಟಿಯು ನಿಷ್ಫಷ್ಟವಾಗುವುದೇ ಹೊರತು ಭೀಮ ಬಲದಿಂದ ಸಹಿತರಾದ ಮಾಧ್ವರನ್ನು ಅಲುಗಾಡಿಸಲಾರದು. ಪ್ರಾಜ್ಞರು ಅನ್ನದ ಆಹಾರದಿಂದ ಸಂತುಷ್ಟಿಯನ್ನು ಹೊಂದುವರು. ಬಿರುದು ಹೊಂದಿದ ಶಾಸ್ತ್ರಿಗಳು ಹೊಟ್ಟೆಯಕಿಚ್ಚನ್ನೇ ಆಹಾರವನ್ನಾಗಿ ಮಾಡಿಕೊಂಡು ದೇಶವನ್ನು ಸುಡಬೇಕೆಂದು ನಿಶ್ಚಯಿಸಿರು ತ್ತಾರೆಂದು ತೋರುತ್ತದೆ.

(5)ಮಾಧ್ವರು ಹೊಟ್ಟೆಬಾಕನಾದ ಭೀಮನನ್ನು ಗುರುವನ್ನಾಗಿ ಮಾಡಿಕೊಂಡಿದುದು ಹಾಸ್ಯಾಸ್ಪದವೆಂದು ಸಾಂಬಶಾಸ್ತ್ರಿಗಳ ಅಟ್ಟಹಾಸವು ಉಷ್ಟ್ರನರ್ತನವನ್ನು ಅನುಕರಿಸಿರುವುದು. ಒಂದು ವಿಶೇಷವುಂಟು. ಬಹು ಭೋಜನಪ್ರಿಯನಾದ ಭೀಮನಿಗೆ ಬೊಜ್ಜು ಬರಲಿಲ್ಲ, ಅವನು ಬಹಳವಾಗಿ ತಿಂದು ಬಲಸಂಪನ್ನನಾಗಿ ಕಲಿಯುಗದಲ್ಲಿಸಂತಪ್ತರಾದ ಮಾಧ್ವರ ಭಯಪರಿಹಾರಕ್ಕೋಸ್ಕರ ಸಿಂಹನಾದವನ್ನು ಮಾಡುವುದಕ್ಕಾಗಿ ದೇಹವನ್ನು ಬೆಳೆಸಿದನು. ''ವಾಯುರ್ಭೀಮೋಭೀಮನಾದೋ ಮಹೌಜಾಃ ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ ॥ ಇತ್ಯಾದಿ ಮಹಾಭಾರತ ಪ್ರಸಿದ್ಧ ಪ್ರಮಾಣವಚನದಿಂದ ಜಗತ್ಪ್ರಾಣನಾದ ದೇವತೋತ್ತಮನಾದ ವಾಯುವೇ ಕುರುಕುಲ ನಾಶಕನಾದ ಭೀಮನೆಂದು ಸಿದ್ಧವಾಗುವುದು. ಸಾಂಬಶಾಸ್ತ್ರಿಗಳಿಗೆ ಜಗತ್ಪ್ರಾಣನು ಜ್ಞಾನಿಯಲ್ಲವೆಂದು ತೋರಿದರೆ, ಭೋಜನ ರಹಿತನಾದ ಭಗಂದರಾದಿ ಮಹಾ ರೋಗಿಯನ್ನು ಗುರುವನ್ನಾಗಿ ವರಿಸಲಿ. ಉತ್ತಮವಾದ, ಸುಖವಾದ, ಭೋಜನಕಾಂಕ್ಷಿಗಳಾದ ಮಾಧ್ವರ ಮೇಲೆ ಅಸೂಯೆಮಾಡುವುದರಿಂದ ಪ್ರಯೋಜನವೇನು?

(6) ವಾಯುದೇವನು ದಿತಿ ಕುಮಾರನು, ಅವರ ಶಿಷ್ಯರಾದ ಮಾಧ್ವರು ದೈತ್ಯರು ಎಂದು ಸಾಂಬಶಾಸ್ತ್ರಿಗಳು ನಿರೂಪಿಸಿರುತ್ತಾರೆ. ಸಾಂಬಶಾಸ್ತ್ರಿಗಳು ಜನನಾರ್ಥವಾಗಿ ದಿತಿಯ ಉದರವನ್ನು ಪ್ರವೇಶಿಸಿದುದರಿಂದ ಜಗಚ್ಚೇಷ್ಟಕನಾದ ವಾಯುವು ದಿತಿಯ ಉದರವನ್ನು ಪ್ರವೇಶಿಸಬೇಕಾಯಿತೇ ಹೊರತು, ಸ್ವತಂತ್ರನಾಗಿ ಯಾವಾಗಲೂ ವಾಯುದೇವರು ದಿತಿಯ ಹೊಟ್ಟೆಯಲ್ಲಿ ಹುಟ್ಟಲಿಲ್ಲ. ಆದರೂ ಮಾಧ್ವರು ದೈತ್ಯರು. ಹೇಗೆಂದರೆ ದೈತ್ಯನಾದ ಪ್ರಹ್ಲಾದನು ಅವರ ಗುರುವು. ಪ್ರಹ್ಲಾದನು ಅದ್ವೈತಿಯಲ್ಲ. ಯಾತಕ್ಕೆಂದರೆ ಶಾಸ್ತ್ರಿಗಳಿಗೆ ಒಬ್ಬ ದೈತ್ಯನು ಗುರುವಾದರೆ ಇಷ್ಟು ಪ್ರಾಪ್ತಿಯಾಗಲಾರದು. ಮಾಧ್ವರು ದುಷ್ಟರಾದುದರಿಂದ ಎಲ್ಲಾದಕ್ಕೂ ಸಿದ್ಧರಾಗಿರುವರು. ಅವರ ಗುರುಗಳು ಪ್ರಹ್ಲಾದ, ಬಲಿ, ವಿಭೀಷಣನಂಥಾ ದೈತ್ಯರು, ಚಕ್ರಿಕ, ಕನ, ವಿದುರರಂಥಾ ಶೂದ್ರರು, ಶೇಷನಂಥಾ ಸರ್ಪವು, ಜರಿತರ್ಯಂಥಾ ಪಕ್ಷಿಯು, ಕೃಕಲಾಸದಂಥಾ ಕೀಟವಾದರೂ ಚಿಂತಿಲ್ಲ. ಕ್ಷತ್ರಿಯನಾದ ಕೃಷ್ಣನ ಉಚ್ಛಿಷ್ಟಭೋಜನ ಪ್ರಿಯರಾದ ವೈಷ್ಣವರು ಕೃಷ್ಣನ ದಾಸರೆಂದು ಹೇಳಿದರೂ ಹೇಳಬಹುದು. ಸಾಂಬಶಾಸ್ತ್ರಿಗಳಿಗೆ ಹೇಗಾದರೂ ಸಂತೋಷವಾದರೆ ಸಾಕು.

(7) ಶ್ರೀಮದುತ್ತರಾದಿ ಮಠದ ಸ್ವಾಮಿಗಳವರು ತಿಲಕರನ್ನು ವಾಕ್ಯಾರ್ಥದಲ್ಲಿ ಏನೋ ಒಂದು ರೀತಿಯಿಂದ ಗೆದ್ದರೇ ಹೊರತು ನಿಜವಾದ ಜಯವಲ್ಲವೆಂದು ಸಾಂಬಶಾಸ್ತ್ರಿಗಳು ಸೂಚಿಸಿರುತ್ತಾರೆ. ವಾಕ್ಯಾರ್ಥಗಳು ಮಹಾರಾಷ್ಟ್ರಭಾಷೆಯಲ್ಲಿ ಪ್ರಿಂಟಾಗಿರುತ್ತವೆ. ಶಾಸ್ತ್ರಿಗಳು ಪರಾಂಬರಿಸಿ ನೋಡಲಿ. ತಿಲಕರೂ ಪೀಠದ ಗೌರವದಿಂದ ಹಾಗೇ ಹೇಳಿರಬಹುದು. ಅಷ್ಟು ಯಾತಕ್ಕೆ? ವಾಕ್ಯಾರ್ಥಗಳೇ ಪೀಠದ ಗೌರವದಿಂದ ತಲೆ ಬೊಗ್ಗಿಸಿ ತಮ್ಮಲ್ಲಿ ನ್ಯೂನತೆಯಿಲ್ಲದಿದ್ದರೂ ನ್ಯೂನತೆಯನ್ನು ಒಪ್ಪಿಕೊಳ್ಳುವುವೆಂದು ಕಾಣವುದು. ಒಬ್ಬ ಸೀನಿಯರ್ ರಾಂಗ್ಲರ್ ಬಂದಾಗ 4+3=7 ಎಂಬ ತತ್ವವು ಗಾಬರಿ ಹೊಂದಿ ನಾನು 4+3=5 ಆಗುತ್ತೇನೆ; ನಿನ್ನನ್ನು ನೋಡಿ ನನಗೆ ಗಾಬರಿಯಾಗುತ್ತದೆ ಎಂದು ಹೇಳಿತಂತೆ. ಹಾಗೆ ವೇದವೇ ಪೀಠದ ಗೌರದಿಂದ ದ್ವೈತಿಗಳಿಗೆ ಅಧೀನವಾಗಿರುವುದು. ಅದು ವಾಯುದೇವರ ಪೀಠದ ಮಹತ್ತು. ನಿಖಿಲವೇದಾಭಿಮಾನಿನಿಯಾದ ಭಾರತಿಯೂ ಸಹ ದ್ವೈತತತ್ವವನ್ನೇ ಅಂಗೀಕರಿಸಿ ತಲೆಬಾಗಿ ನಮಸ್ಕರಿಸುವಳು.

ಉತ್ತಮರ ಜಯದ ಉತ್ಕರ್ಷವನ್ನು ನಿಂದೋಕ್ತಿಗಳಿಂದ ಅಪಕರ್ಷವನ್ನು ಹೊಂದಿಸುವುದಕ್ಕೆ ಯತ್ನಿಸುವ ಈ ವ್ಯಾಪಾರವು ಹೊಸದಲ್ಲ. ಇದು ಪೂರ್ವದೇವತೆಗಳ( ರಾಕ್ಷಸರ) ಸಂಪ್ರದಾಯವೆಂದು ಶಾಸ್ತ್ರಜ್ಞರು ಹೇಳುವರು. ವರಾಹಮೂರ್ತಿಯು ಹಿರಣ್ಯಾಕ್ಷನನ್ನು ಸಂಹರಿಸಿದಾಗ ದೈತ್ಯರೆಲ್ಲರೂ ಈ ಕಾಡು ಹಂದಿಯು ಏನೋ ಕಪಟವನ್ನು ಮಾಡಿತೆಂದು ತಿಳಿದರು. ನರಸಿಂಹನು ಕಂಬದಿಂದ ಆವಿರ್ಭವಿಸಿ ಬಂದಾಗ ಏನೋ ಮಾಯೆಯನ್ನು ಮಾಡಿರುವನೆಂದು ದೈತ್ಯಪ್ರಧಾನರೆಲ್ಲರೂ ತಿಳಿದರು. ಬಲಿಯು ಸರ್ವಾಧಿಪತ್ಯವನ್ನು ವಾಮನ ಮೂರ್ತಿಗೆ ಒಪ್ಪಿಸಿ ಅವನ ಕಾಲಿಗೆ ತನ್ನ ತಲೆಯನ್ನೊಡ್ಡಿದನಷ್ಟೆ! ಆಗ ವಾಮನನು ತ್ರಿವಿಕ್ರಮರೂಪದಿಂದ ಪ್ರಪಂಚವನ್ನೆಲ್ಲಾ ಅಳೆದುಕೊಂಡಾಗಲೂ ಕೂಡ, ದೈತ್ಯಮಂತ್ರಿಗಳು ಏನೋ ಮೋಸವನ್ನು ಕುಳ್ಳವಾಮನನು ಮಾಡಿದನೆಂದೇ ತಿಳಿದು ''ಜುಗುಪ್ಸೆ'' ಹೊಂದಿದರು.

ಪ್ರಕೃತದಲ್ಲಿ ಗುದ್ದುವ ವಾಕ್ಯಾರ್ಥವು ತಿಲಕರಿಗೂ ವೈಷ್ಣವರಿಗೂ ನಡೆಯಿತೆಂದು ಸಾಂಬಶಾಸ್ತ್ರಿಗಳು ಸೂಚಿಸಿರುತ್ತಾರೆ. ಮತ್ತು ಪಕ್ಕನೆ ನಗುವುದರಲ್ಲಿ ಪರಿಣಾಮವಾಯಿತೆಂದು ತಿಳಿದು ಬಂದಿದೆ ಎಂದು ಹೇಳಿರುತ್ತಾರೆ. ಮೊದಲನೆಯದು ಸುಳ್ಳು. ಯಾತಕ್ಕೆಂದರೆ, ತಿಲಕರು ತ್ರ್ಯಂಬಕಶಾಸ್ತ್ರಿಗಳಂಥಾ ಸ್ಮಾರ್ತಬ್ರಾಹ್ಮಣರಲ್ಲ, ತ್ರ್ಯಂಬಕಶಾಸ್ತ್ರಿಗಳು ಶಂಕರಾಚಾರ್ಯರ ಮತವನ್ನವಲಂಬಿಸಿದುದರಿಂದ ಕೆನ್ನೆಯ ಮೇಲೆ ಪೆಟ್ಟುಹೊಡೆಸಿಕೊಂಡರು. ಸಭಿಕರು ಅವರ ತತ್ವದ ಪ್ರಭಾವವನ್ನು ನೋಡಿ ಫಕ್ಕನೇ ನಕ್ಕರು. ತಿಲಕರು, ಶಂಕರಾಚಾರ್ಯರ ''ಕರ್ಮಸನ್ಯಾಸ'' ವಾದವನ್ನು ಸುಟ್ಟು ಬೂದಿಮಾಡಿ, ದೇಶಸೇವೆ ರೂಪವಾದ ಸರೋವರದಲ್ಲಿ ಬೂದಿಯನ್ನು ಕಲಸಿ ತಿಲಾಂಜಲಿಯನ್ನು ಕೊಟ್ಟು ವೀರವೈಷ್ಣವನಾಗಿ ಸಭೆಗೆ ವಾಕ್ಯಾರ್ಥಕ್ಕೆ ಬಂದಿದ್ದರು. ಶ್ರೀಶ್ರೀಮದುತ್ತರಾದಿ ಮಠದ ಸ್ವಾಮಿಗಳು ''ನಮ್ಮ'' ಕರ್ಮಯೋಗವನ್ನು ಸ್ವೀಕಾರ ಮಾಡಿರುತ್ತೀ! ನಮ್ಮ ದೇವತೆಯನ್ನು ಯಾಕೆ ಬಿಡುತ್ತಿ! ಕೃಷ್ಣನು ಪುನಃಪುನಃ ನಾನೇ ಪರಬ್ರಹ್ಮನು ಜೀವಭಿನ್ನನು ಎಂದು ಹೇಳುತ್ತಿರುವನಲ್ಲಾ!'' ಎಂದು ಕೇಳಿದರು. ಶಂಕರಾಚಾರ್ಯರು ಕರ್ಮಸನ್ಯಾಸವಿಧಾನಾತ್ ಎಂದು ಹೇಳಿದ್ದರೂ ಅವರ ಮಾತನ್ನು ಮೀರಿ ಕರ್ಮವನ್ನು ಮಾಡಲೇಬೇಕು ಎಂದು ತಿಲಕರು ಪ್ರತಿವಾದಿಸಿದುದರಿಂದ ಅವರು ಗುರುದ್ರೋಹಿಗಳಾಗಿದ್ದರು. ಇದರ ಪ್ರಭಾವದಿಂದ ಶ್ರೀಶ್ರೀಗಳವರು ಕೇಳಿದ ಪ್ರಶ್ನೆಗೆ ಉತ್ತರವು ಅವರಿಗೆ ತೋರಲಿಲ್ಲ. ಆಗ ಜನರು ಫಕ್ಕನೆ ನಕ್ಕರಂತೆ. ಸಾಂಬಶಾಸ್ತ್ರಿಗಳಿಗೆ ಉತ್ತರ ತೋರಿದರೆ ಹೇಳಬಹುದು.

(8) ಮತ್ತು ನಾವು ಹೀಗೆ ಕೇಳಿರುತ್ತೇವೆ. ಇದು ಪೂರ್ವದಲ್ಲೇ ಉಕ್ತವಾಗಿದೆ, ಹಿಂದೆ ಏನೋ ನಡೆಯಿತಂತೆ, ಎಲ್ಲೋ ಈ ವಿಷಯವು ಉಕ್ತವಾಗಿದೆಯಂತೆ, ಇತ್ಯಾದಿ ಕೆಲವು ಝೋಕಿನ ಮಾತುಗಳನ್ನು ಪ್ರಾಜ್ಞಶಿಖಾಮಣಿಗಳಾದ ಸಾಂಬಶಾಸ್ತ್ರಿಗಳು ಆಗಿಂದಾಗ್ಯೆ ಬಾಯಿಂದ ಉದುರಿಸುವರು. ಮತ್ತು ಈ ವಿಷಯದಲ್ಲಿ ಪ್ರಮಾಣವಾಗಿ ''ನಾವು ಪೂರ್ವದಲ್ಲಿ ಹೇಳಿರುತ್ತೇವಷ್ಟೆ! ಇದು ಶಾಸ್ತ್ರದಲ್ಲಿ ಇರುವುದಷ್ಟೆ! ಇದು ಸರ್ವಸಮ್ಮತವಷ್ಟೆ! ಎಲ್ಲರೂ ಹೀಗೆ ಹೇಳಿರುವಷ್ಟೆ! ಇದಕ್ಕೆ ವಿರುದ್ಧವಾದ್ದೆಲ್ಲಾ ತಿಳಿಯದವರ ಕುಕಲ್ಪನೆಯಷ್ಟೆ!'' ಎಂದು ಸಮ್ಮತಿ

ಯನ್ನು ಕೊಡುವರು. ''ಹೌದು ಬಸವ'' ಎಂದು ಹೇಳುವವರೊಬ್ಬರು ಬೇಕಾಗಿದೆ. ಬಾಜಾಭಜಂತ್ರಿಯೆಲ್ಲವೂ ಕ್ರಮವಾಗಿದೆ. ಇಂಥಾ ಸಂದರ್ಭದಲ್ಲೇ ಶಾಸ್ತ್ರಿಗಳು ''ಸತ್ಯಂ ಭಿದಾ............. ಇತಿ ಯೋ ವದತಿ ಸಬ್ರಹ್ಮ ಹಾ ಭವತಿ, ಸ ಚಂಡಾಲೋ ಭವತಿ, ಸಭ್ರೂಣಹಾ ಭವತಿ, ಸಸುರಾಪೀ ಭವತಿ ಎಂಬ ನಿಷೇಧ ಶ್ರುತಿಯ ಅನುಪೂರ್ವಿಯು ಇರುವುದೆಂದು ತಿಳಿದು ಬಂದಿದೆ' ಎಂದು ಬರೆದಿರುತ್ತಾರೆ. ನಾವೂ ರಿಸರ್ಚ ಮಾಡಿ ನೋಡಿದೆವು. ದಿವಂಗತವಾದ ಅಲೆಕ್ಸಾಂಡ್ರಿಯ ಲೈಬ್ರರಿಯ ಇಪ್ಪತ್ತೊಂದನೆಯ ನಂಬರ್ ಪುಸ್ತಕದ ಏಳನೆಯ ಪಂಕ್ತಿಯಲ್ಲಿ ಹೀಗೆ ಇರುತ್ತದೆ. ''ಸತ್ಯಂ ಭಿದಾ, ಸತ್ಯಂ ಭಿದಾ, ಸತ್ಯಂ ಭಿದಾ!!! ಯಃ ಖಲ ಏತಾಂ ಪರಮಾಂ ವಿದ್ಯಾಮಪಲಪತಿ, ಅಪಾಕರೋತಿ, ತಿರಸ್ಕರೋತಿ, ಉದಾಸ್ತೇವಾ ಸ ಮಾತೃಗಾಮೀ ಜ್ಞೇಯಃ, ಸಪುತ್ರೀಗಾಮೀ, ಸಸ್ನುಷಾಗಾಮೀ, ಸಪಶುಗಾಮೀ ಭವತಿ। ಸಬ್ರಹ್ಮಹಾ ಭವತಿ, ಸ ಚಂಡಾಲೋ ಭವತಿ, ಸಭ್ರೂಣಹಾ ಭವತಿ, ಸಸುರಾಪೀ ಭವತಿ, ತಸ್ಮಾನ್ನ ಮಾತುರಂ ಶ್ರುತಿಮಪಲಪೇತ್, ನ ಮಾತರಂ ಶ್ರುತಿಮಪಾಕುರ್ಯಾತ್, ನ ಮಾತರಂ ಶ್ರುತಿಂ ತಿರಸ್ಕುರ್ಯಾತ್, ನಶ್ರುತಿರುದಾಸಿತವ್ಯಾ ...'' ಇತ್ಯಾದಿ. ಸತ್ಯಂ ಭಿದಾ ಶ್ರುತಿಯನ್ನು ಅಪಲಪಿಸುವವನು ಘೋರವಾದ ಫಲವನ್ನು ಹೊಂದುವನು. ಶ್ರುತಿಗಳು ಎಷ್ಟೋ ಇರುವುವು. ಸಾಂಬಶಾಸ್ತ್ರಿಗಳಿಗೆ ''ತಿಳಿದು ಬಂದಿರುವ '' ಶ್ರುತಿಯನ್ನೂ ನಾವು ನೋಡಿಬಂದಿರುವ ಶ್ರುತಿಯನ್ನೂ ತೂಕಮಾಡಿದರೆ ನಮ್ಮ ಶ್ರುತಿಗೇ ಒಂದು ಮಣತೂಕ ಹೆಚ್ಚಾಗಿ ಭಾರವಿರುವುದು. ಪುನಃ ಶಾಸ್ತ್ರಿಗಳು ವಾಸುದೇವ ಶ್ರುತಿಯನ್ನು ನಿರಾಕರಣಮಾಡಬೇಕೆಂದು ಚಿಂತಿಸಿ 23ನೇ ಪುಟದಲ್ಲಿ ''ಶ್ರುತಿಗಳಿಗೆ ತತ್ತದ್ವಿಷಯ ಪಾರಮ್ಯ ಪ್ರತಿಪಾದನೆಯಲ್ಲಿಯೇ ತಾತ್ಪರ್ಯವು'', ಎಂದರೆ ರುದ್ರಶ್ರುತಿಯು ರುದ್ರನನ್ನು ಸರ್ವೋತ್ತಮನೆಂದೂ, ಗುಂಡ ಶ್ರುತಿಯು ಗುಂಡನನ್ನು ಸರ್ವೋತ್ತಮನೆಂದೂ, ವಿರೂಪಾಕ್ಷಶ್ರುತಿಯು ವಿರೂಪಾಕ್ಷನು ಸರ್ವೋತ್ತಮನೆಂದೂ, ಸಾಂಬ ಶ್ರುತಿಯು ಸಾಂಬನು ಸರ್ವೋತ್ತಮನೆಂದೂ, ಗಣೇಶ ಶ್ರುತಿಯು ಗಣೇಶನನ್ನು ಸರ್ವೋತ್ತಮ ನೆಂದೂ, ನಾರಾಯಣ ಶ್ರುತಿಯು ನಾರಾಯಣನು ಸರ್ವೋತ್ತಮನೆಂದೂ, ಹೇಳುವುದು; ವಸ್ತುತಃ ಎಲ್ಲರಿಗೂ ಡಗ್ಗಲ್ ಪಟ್ಟ. ಒಬ್ಬರೂ ಸರ್ವೋತ್ತಮರಲ್ಲ. ಇದು ಶಾಸ್ತ್ರಿಗಳ ವಾಕ್ಯದ ತಾತ್ಪರ್ಯವು. ಇಷ್ಟು ಹೇಳಿದ ಶಾಸ್ತ್ರಿಗಳು 18ನೇ ಪುಟದಲ್ಲಿ ಬರೆಯುತ್ತಿದ್ದಾಗ ವಿರೂಪಾಕ್ಷನು ವಿಷ್ಣುವಿನ ಅಪ್ಪನು, ಅವನು ಸರ್ವಾಂತರ್ಯಾಮಿಯು ಎಂದು ವಿರೂಪಾಕ್ಷನಿಗೇ ಸರ್ವೋತ್ತಮವನ್ನು ಕೊಟ್ಟುಬಿಟ್ಟಿದ್ದರು. ಅಲ್ಲಿ ಹರತೀ ಆಚಾರ್ರೇ! ಒಂದು ಕಣ್ಣುಮುಚ್ಚಾಲೆ ಆಟವನ್ನು ಶಾಸ್ತ್ರಿಗಳು ಆಡಿರುತ್ತಾರೆ. ಆ ಶ್ರುತಿಯಲ್ಲಿ (ವಿರೂಪಾಕ್ಷನಾದ) ಮಹಾದೇವನು ಬ್ರಹ್ಮನಿಗೂ, ವಿಷ್ಣುವಿಗೂ ಮತ್ತು ರುದ್ರನಿಗೂ ಅಪ್ಪನೆಂದು ಬಂದಿದೆ. ಶಾಸ್ತ್ರಿಗಳು ಈ ಗಲಾಟೆ ಯಾತಕ್ಕೆಂದೇ ಈ ಸ್ಥಳದಲ್ಲಿ ''...............'' ಎಂದು ಚುಕ್ಕಿ ಹಾಕಿಬಿಟ್ಟರು. ವಿರೂಪಾಕ್ಷನೂ ರುದ್ರನೇ! ರುದ್ರನಿಂದ ರುದ್ರನು ಹುಟ್ಟುವುದು ಹೇಗೆ. ಹರತೀ ಆಚಾರ್ರೇ ! ನೀವು ಮಾಧ್ವರು. ಬೇಕಾದರೆ ನೀವು ಶಾಸ್ತ್ರಿಗಳ ಮೇಲೆ ಕುಪ್ಪಳಿಸಿ ಗುದ್ದಬಹುದು. ನಮಗೆ ಈ ಗೋಜಿಬಿಜಿ ಬೇಡ. ಶಾಸ್ತ್ರಿಗಳ ಶ್ರುತ್ಯರ್ಥದ ಕೆಸರಿನ ಕೊಂಪೆಯಲ್ಲಿ ಕಾಲಿಡುವುದಕ್ಕೆ ಅಸಹ್ಯವಾಗುತ್ತದೆ. ಆದುದರಿಂದ ನಾವು ಬೇರೆ ಗ್ರಂಥದಲ್ಲಿ ಶ್ರುತ್ಯರ್ಥಗಳನ್ನು ವಿವರಿಸುತ್ತೇವೆ. ನೀವು ತಪಸ್ಸು ಮಾಡುತ್ತಿರಿ.

★★★★★★★★★★★

## ΨΨΨAppendix B.

ಯದ್ಯಪಿ ಬೌದ್ಧಮತದಿಂದ ಬ್ರಾಹ್ಮಣರೇ ಶಿಥಿಲವಾಗಿ ಹೋಗುವ ಕಾಲದಲ್ಲಿ, ಗೌಡಪಾದರು '' ಈ ತತ್ವಕ್ಕೆ ನೀವು ಅಲ್ಲಿಗೆ ಯಾತಕ್ಕೆ ಹೋಗುವಿರಿ. ನಮ್ಮ ವೇದದಲ್ಲಿಯೂ ಇದು ಇರುವುದು'' ಎಂದು ಬ್ರಾಹ್ಮಣಜನರಿಗೆ ಪ್ರತಿಪಾದನೆ ಮಾಡಿತೋರಿಸಿದುದರಿಂದ , ಸ್ವಲ್ಪ ಬ್ರಾಹ್ಮಣಜಾತಿಯು ಉಳಿದು ಬೌದ್ಧವ್ಯವಹಾರಾದಿಗಳು ಬಹಿಷ್ಕೃತವಾದವು ಎಂದು ಚರಿತ್ರೆಯಿಂದ ತೋರಿಬರುತ್ತದೆ. ಹೋಟಲಿಗೆ ಈರುಳ್ಳಿ ಬೋಂಡಾವನ್ನು ತಿನ್ನುವ ಉದ್ದಿಶ್ಯದಿಂದ ಪ್ರತಿದಿನವೂ ಹೋಗುತ್ತಿದ್ದ ಬಾಲಕನನ್ನು ನೋಡಿ ವೈದಿಕನಾದ ತಂದೆಯು ಬ್ರಾಹ್ಮಣ್ಯನಾಶಕವಾದ ಹೋಟಲ್ ಆಹಾರ ಭಕ್ಷಣದಿಂದ ತನ್ನ ಪುತ್ರನನ್ನು ಬಿಡಿಸಬೇಕೆಂದು ಚಿಂತಿಸಿ, ಮನೆಯಲ್ಲಿಯೇ ಈರುಳ್ಳಿ ಬೋಂಡಾವನ್ನು ಮಾಡಿಸುವುದಕ್ಕಾರಂಭಿಸಿದನು. ಕಾಫಿ ಮೊದಲಾದ ಪಾನ ದ್ರವ್ಯಗಳನ್ನೂ ಸಪ್ಲೈ ಮಾಡಿದನು. ಅಪ್ಪನು ಹೇಳಿದನು ''ಮಗು! ನೀನು ಹೋಟಲಿಗೆ ಯಾತಕ್ಕೆ ಹೋಗುತ್ತಿ. ನಮ್ಮ ಮನೆಯು ಯಾವ ವಿಷಯದಲ್ಲಿ ಕಮ್ಮಿಯಾಗಿರುತ್ತದೆ? ನಾವು ಮಾಡುವ ಈರುಳ್ಳಿ ಬೋಂಡಾ ಕಾಫಿ ವಗೈರೆಗಳಷ್ಟೆ ಅಲ್ಲಿರುವುವು'' ಎಂದು ಹೇಳಿದನು. ಪುತ್ರನೂ ಒಪ್ಪಿದನು. ಆ ದುಸ್ಸಂಪ್ರದಾ ಯವೇ ಉಳಿದು ಹೋಗಿ, ಆ ವೈದಿಕ ಬ್ರಾಹ್ಮಣನಿಗೆ ಈರುಳ್ಳಿಭಟ್ಟನೆಂದು ಬೇರೇ ಹೆಸರು ಬಂದು ಹೋಯಿತು. ನಂತರ ಹೊಲತಿ ಯನ್ನು ತಬ್ಬಿಕೊಳ್ಳುವುದಕ್ಕೆ ಇಚ್ಛಿಸುತ್ತಿದ್ದ ಮೂಢನಾದ ತನ್ನ ಪುತ್ರನನ್ನು ಕುರಿತು, ''ಎಲೈ ಪುತ್ರನೇ ನಿನಗೆ ಹೊಲತಿಯಲ್ಲಷ್ಟೇ ಕಾಮವು. ನಿನ ಪತ್ನಿಯೇ ಉತ್ತಮ ಹೊಲತಿಯಾಗಿರುವಾಗ

ನೀನು ಊರೂರು ಹೊಲಗೇರಿ ಯಾತಕ್ಕೆ ಅಲೆಯುತ್ತಿ?'' ಎಂದು ಪ್ರಶ್ನೆ ಮಾಡಿದನು. ಇಂಥಾ ಪ್ರಶ್ನೆಗಿಂತ ಬೇರೆ ಅವಮಾನವು ಈ ಭೂತಳದಲ್ಲಿ ಉಂಟೋ?

ಗೌಡಪಾದರ ತತ್ವವಾದವು ಮೆಲ್ಕಂಡಂತೆ ಒಂದು ವಿಧದಲ್ಲಿ ಉಪಕಾರರೂಪವಾಗಿ ಆಪಾತತಃ ಕಂಡು ಬಂದರೂ ಬ್ರಾಹ್ಮಣಮತಕ್ಕೆ ಬಹು ಅವಮಾನಕರವಾದ ಯತ್ನವಾಗಿ ಹೋಯಿತು.

ಪ್ರಾಜ್ಞರಾದ ರಾಧಾಕೃಷ್ಣರು ಹೇಳುತ್ತಾರೆ.

Goudapada live at a time when Buddhism was widely prevalent. Naturally he was familiar with Buddhistic doctrines. which he accepted when they were not in conflict with his own Advaita. To the Buddhists he appealed on the ground that his view did not depend on any theological text or revelation. To the orthodox Hindu he said that it had the sanction of authority also. His liberal views enabled him to accept doctrines associated with buddhism and adjust them to the Advaita design."

S.RADHAKRISHNAN.

ಆದುದರಿಂದಲೇ ವೈದಿಕಬ್ರಾಹ್ಮಣನಿಗೆ ಈರುಳ್ಳಿಭಟ್ಟನೆಂಬ ಹೆಸರು ಬಂದಂತೆ, ಅದ್ವೈತ ವಾದಕ್ಕೆ ಪ್ರಚ್ಛನ್ನ ಬೌದ್ಧವೆಂಬ ಹೆಸರನ್ನು ಯಾದವಪ್ರಕಾಶ, ಯಾಮುನಾಚಾರ್ಯ, ವಿಜ್ಞಾನಭಿಕ್ಷು, ಭಾಸ್ಕರ ಮುಂತಾದ ಪ್ರಾಚೀನರೇ ಕೊಟ್ಟಿರುತ್ತಾರೆ. ಮತ್ತು ಪುತ್ರನ ಪತ್ನಿಯನ್ನೇ ಹೊಲತಿಗೆ ಹೋಲಿಸಿದಂತೆ, ಬೌದ್ಧತತ್ವವನ್ನಾಗಲೀ, ಅದಕ್ಕೆ ಸದೃಶವಾದ ವಾದವನ್ನಾಗಲೀ ನಿರ್ದುಷ್ಟವೇದವಾಣಿಯು ಹೇಳುವುದೆಂದು ಹೇಳಿದುದೂ ಸಹ ಬ್ರಾಹ್ಮಣ ತತ್ವಕ್ಕೆ ಅಸಹ್ಯವಾದ ಅವಮಾನವೆಂದು ತಿಳಿಯಬೇಕು. ಇದು ಅದ್ವೈತಿಗಳ ಯೋಗಾವಾಸಿಷ್ಠದ ಶ್ಲೋಕವು.

''ಯದಿದಂ ದೃಶ್ಯತೇ ಕಿಂಚಿತ್ತನ್ನಾಸ್ತಿ ಕಿಮಪಿ ಧ್ರುವಂ। ಯಥಾ ಗಂಧರ್ವನಗರಂ ಯಥಾವಾರೀ ಮರುಸ್ಥಳೇ॥''

ಇವೇ ಮೊದಲಾದ ಕಾರಣ ಪರಾಮರ್ಶದಿಂದಲೇ ಶಾಂಕರಭಾಷ್ಯವೇ ಮುಂತಾದ ಗ್ರಂಥಗಳಿಗೆ ವ್ಯಾಖ್ಯಾನ ಮಾಡಿದ ಅದ್ವೈತಿಗಳು ಬುದ್ಧಿಯುಳ್ಳವರಲ್ಲವೆಂದು ನಿರ್ಧರಿಸಬಹುದು. ಹೆಚ್ಚು ಕಾರಣಗಳನ್ನು ಸಾವಕಾಶವಾಗಿ ನಿರೂಪಿಸುತ್ತೇವೆ.

★★★★★★★★★

♣♣ ರೇವಣಸಿದ್ಧನೆಂಬ ಯಾರೋ ಮೂಲಪುರುಷನು ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರನನ್ನೂ, ರತ್ನಗರ್ಭ ಗಣಪತಿಯನ್ನೂ ಅನುಗ್ರಹಿಸಿ ಕೊಟ್ಟಿರುವನೆಂದು ಧರ್ಮಾಧಿಕಾರಿ ವಿದ್ಯಾವಿಶಾರದ ವೇ॥ಕುಣಿಗಲ್ ರಾಮಶಾಸ್ತ್ರಿಗಳಿಂದ ಪರಿಶೋಧಿತವಾದ ಮತ್ತು ಶೃಂಗೇರಿ ಸಂಸ್ಥಾನದ ಕಾಶೀ ಲಕ್ಷ್ಮಣಶಾಸ್ತ್ರಿಗಳೆಂಬ ಕವಿಗಳಿಂದ ರಚಿತವಾದ 'ಗುರುವಂಶಕಾವ್ಯ' ವೆಂಬ ಒಂದು ಗ್ರಂಥದಲ್ಲಿ ಇರುವುದು. ಇದರ ಕೂಲಂಕುಷವನ್ನು ವಿಚಾರಮಾಡಿ ಅವಶ್ಯಕತೆ ಬಿದ್ದರೆ ಎರಡನೆಯ ವಾಲ್ಯೂಂ ನಲ್ಲಿ ನಿರೂಪಿಸುವೆವು.

∞∞ ಶಾಸ್ತ್ರದಲ್ಲಿ ಎಲ್ಲಾ ವಸ್ತುಗಳೂ ಅನಾದಿಗಳೇ. ಕಾಳಿದಾಸನ ಗ್ರಂಥವೂ ಒಂದು ವಿಧದಲ್ಲಿ ಅನಾದಿಯೇ. ಅದ್ವೈತವಾದಕ್ಕೆ ಸದೃಶವಾದ ಮತ್ತೊಂದು ಸುಳ್ಳನ್ನು ಕಾಲಾಂತರದಲ್ಲಿ ಬೇರೆ ಕೆಲವರು ನಿರ್ಮಿಸಿರಬಹುದು. ಆದರೆ ಒಂದೇ ತತ್ವವು ಗುರುವಿನಿಂದ ಶಿಷ್ಯಪರಂಪರೆಯಾಗಿ ಬಂದಿರುವುದೇ ನಿಜವಾದ ಪ್ರಮಾಣಿಕವೆಂದು ನಿಶ್ಚಯಿಸುವುದಕ್ಕೆ ಉಪಯೋಗವಾಗುವ ಅನಾದಿತ್ವವು. ಅಂಥಾ ಅನಾದಿತ್ವವು ಅದ್ವೈತಕ್ಕೆ ಬಂದಿರುವುದಿಲ್ಲ. ಗುರುಸ್ತೋತ್ರರಹಿತವಾಗಿ ಗೌಡಪಾದರು ಗ್ರಂಥವನ್ನು ಆರಂಭಿಸುವುದೂ ಈ ವಿಷಯದಲ್ಲಿ ಒಂದು ಪ್ರಮಾಣವಾಗಿದೆ.

## ♦♦♦APPENDIX -C

ಜಗನ್ಮಿಥ್ಯಾತ್ವ ವಿಷಯದಲ್ಲಿ ನಮಗೂ ಬೌದ್ಧರಿಗೂ ಸ್ವಲ್ಪವೂ ಭೇದವಿಲ್ಲವೆಂದು ಶಂಕರಾಚಾರ್ಯರೇ ಒಪ್ಪಿರುತ್ತಾರೆ. ಇನ್ನು ಅಂತ್ಯ ತತ್ವವಾದ ''ಜ್ಞಾನಸ್ವರೂಪ'' ವಿಷಯದಲ್ಲಿಯೂ ಸಹ ಭೇದವಿಲ್ಲವೆಂದು ಯುಕ್ತಿಸಿದ್ಧವಾಗಿರುವುದು. ಬೌದ್ಧರ ಅಂತ್ಯ ತತ್ವವಾದ ''ಜ್ಞಾನವೂ'' ಶಂಕರಾಚಾರ್ಯರ ಅಂತ್ಯತತ್ವವಾದ ''ಜ್ಞಾನವೂ'' ನಿರ್ವಿಶೇಷವೇ. ಬೌದ್ಧರು 'ಜ್ಞಾನ' ಸ್ವರೂಪದಲ್ಲಿ ಕ್ಷಣಿಕತ್ವವೆಂಬ ಧರ್ಮವನ್ನಾಗಲೀ, ಶಂಕರಾಚಾರ್ಯರು ತಮ್ಮ ಜ್ಞಾನಸ್ವರೂಪದಲ್ಲಿ ನಿತ್ಯತ್ವವೆಂಬ ಧರ್ಮವನ್ನಾಗಲೀ, ಒಪ್ಪುವುದಿಲ್ಲ. ಉಭಯಮತದಲ್ಲೂ ಅತ್ಯಂತತತ್ವವು ನಿರ್ಧರ್ಮಕವು. ಆದುದರಿಂದ ಬೌದ್ಧರ ''ಜ್ಞಾನ''ಸ್ವರೂಪವೂ, ಅದ್ವೈತಿಗಳ ''ಜ್ಞಾನ'' ಸ್ವರೂಪವೂ ಒಂದೇ. ಒಂದಲ್ಲ, ಭೇದವಿರುವುದು ಎಂದು ಹೇಳಿದರೆ ಭೇದಕ ಧರ್ಮಗಳನ್ನು ಹೇಳಬೇಕಾಗಿ ನಿರ್ಧರ್ಮಕತ್ವಕ್ಕೇ ಭಂಗವು ಬರುವುದು.

ಅದ್ವೈತ ಮತವು ಪ್ರಚ್ಛನ್ನ ಬೌದ್ಧಮತವೆಂಬುದರಲ್ಲಿ ಯಾಮುನಾಚಾರ್ಯರು, ವಿಜ್ಞಾನಭಿಕ್ಷು, ರಾಮಾನುಜಾಚಾರ್ಯರು, ವಲ್ಲಭಾಚಾರ್ಯರು, ಭಾಸ್ಕರಾಚಾರ್ಯರು, ಯಾದವಪ್ರಕಾಶರೇ ಮುಂತಾದ ಬಹು ಜನ ಪ್ರಾಚೀನರೆಲ್ಲರೂ ಒಪ್ಪಿರುವರು. ಪದ್ಮಪುರಾಣ ದಲ್ಲಿ ಮತ್ತು ಬೃಹದ್ಬ್ರಹ್ಮಸಂಹಿತೆಯಲ್ಲಿಯೂ, ಹೇಳಿರುವ ವಿಷಯವು ದ್ವೈತಸಿದ್ಧಾಂತ ವಿಚಾರದಲ್ಲಿ ಮೊದಲೇ ನಿರೂಪಿಸಲ್ಪಟ್ಟಿರು ತ್ತದೆ.
ಘನ ಹೊಂದಿದ ರಾಧಾಕೃಷ್ಣರೂ ಹೀಗೆ ಹೇಳಿರುವರು.

" That Goudapada gives us a Vedantic adaptation of the Buddhistic Sunyavada is supported by many scholars, such as Jacobi, Poussin, Sukhtankar, and Vidhusekhar Bhattacharya, unfortunately Sankara explains away all obvious references to Buddhism."

S.RADHAKRISHNAN. M.A. I.E.S

(SUBJECT CONTINUED IN THE SECOND PART)

ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀಲಕ್ಷ್ಮೀಹಯಗ್ರೀವಾತ್ಮಕ
ಶ್ರೀಕೃಷ್ಣಾರ್ಪಣಮಸ್ತು.
ಗಣಕೀಕರಣ ಮುಗಿದಿದ್ದು ಶ್ರೀವೃಷನಾಮಸಂವತ್ಸರ ಆಷಾಢ ಬಹುಳ ನವಮಿ ಭಾನುವಾರ
15-7-2001.